ಸೋಮವಾರ, ಏಪ್ರಿಲ್ 12, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಬ್ಬದ ಖುಷಿ
ಬೈಶಾಖಿ ಹಬ್ಬದ ಅಂಗವಾಗಿ ಅಮೃತಸರ ಬಳಿಯ ಹೊಲವೊಂದರಲ್ಲಿ ಭಾನುವಾರ ನೃತ್ಯದಲ್ಲಿ ಪಾಲ್ಗೊಂಡಿದ್ದ ಯುವತಿ

ಸ್ಟೇರಿಂಗ್ ಮೌಂಟೆಡ್ ಆಡಿಯೊ ಮತ್ತು ಫೋನ್ ಕಂಟ್ರೋಲ್

ORVM ಗಳಲ್ಲಿ LED ಟರ್ನ್ ಇಂಡಿಕೇಟರ್



ಸೀಟಿನ ಎತ್ತರ ಸರಿಹೊಂದಿಸುವುದರೊಂದಿಗೆ 6-ವೇ ಅಡ್ಜಸ್ಟೇಬಲ್ ಡ್ರೈವರ್ ಸೀಟ್

5 ಸೀಟರ್‌ನ Triber ತಕ್ಷಣ 6 ಅಥವಾ 7 ಸೀಟರ್ ಆಗಿ ಪರಿವರ್ತಿಸಿಕೊಳ್ಳಬಹುದು

20.32 cm ಟಚ್‌ಸ್ಕ್ರೀನ್ medianav ಎವೊಲ್ಯೂಶನ್

android auto is a trademark of google llc

625 ಲೀಟರ್ ಬೂಟ್ ಸ್ಪೇಸ್

for a test drive, call on 1800 315 4444. select variants available in CSD. special offers for defence personnel, government, PSU and corporate employees. triber available through CSD. for further details, visit renault.co.in

terms and conditions apply. #price mentioned above is for base variant for ex-showroom Bengaluru and is exclusive of local taxes. ^the benefits up to ₹ 30 000 for Triber includes exchange benefit of up to ₹ 20 000, loyalty benefit of up to ₹ 10 000 (which includes exchange benefit on Renault model or cash discount on buying additional Renault model) on select versions. corporate/PSU/defence personnel/government employee/professionals benefits applicable for each model are basis eligibility of the customer and based on submission of required proof by the customer. **6.99% rate of interest is calculated on a loan amount of ₹ 3.15 lakh for Triber for a tenure of 18 months. rate of interest may vary based on loan amount and tenure. not valid for any added loan amount and tenure. finance at the sole discretion of Renault finance. offers may vary across variants and cities. the above mentioned offers & benefits are valid till 30th April 2021 and are through Renault dealership. for detailed offers, visit www.renault.co.in/offers. Renault India Pvt. Ltd. reserves the right to change or modify the mentioned schemes and conditions without prior notice. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: BENGALURU: RENAULT Mysore Road Mob: +91 8527240549, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626, RENAULT Kalyan Nagar Mob: +91 8527236137, RENAULT Sarjapura Mob: +91 8448481374, RENAULT Yelahanka Mob: +91 8527234592, RENAULT Yeswanthpur Mob: +91 9311832962. **TUMKUR:** RENAULT Tumkur Mob: +91 8527234251.

L&K | SAATCHI & SAATCHI

ಸೋಮವಾರ, ಏಪ್ರಿಲ್ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 102 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಉನ್ನತ ಶಿಕ್ಷಣ ವಲಯ ಡಿಜಿಟಲ್ ಆಗಿ ರೂಪಾಂತರವಾಗಿದೆ. ವಿದ್ಯಾರ್ಥಿಗಳ ನೆರವಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಹಲವು ಅಪ್ಲಿಕೇಶನ್‌ಗಳು ಲಭ್ಯವಿದೆ

ಆಳ-ಅಗಲ
ಮುಖ್ಯಮಂತ್ರಿಯ ಪರಮಾಧಿಕಾರ ಇಲ್ಲದೇ ಇರುವ ಅಧಿಕಾರ
ಗೋಕಾಕ,ಅರಭಾವಿಯಿಂದ ಡಿಕೆಶಿ, ಸಿದ್ದರಾಮಯ್ಯ ದೂರ ಏಕೆ? 9
ರಾಜಧಾನಿ ಬಿಟ್ಟರೆ ಮಂಡ್ಯ ತಾಲ್ಲೂಕಿನಲ್ಲಿಯೇ ಹೆಚ್ಚು ಮತದಾರರು
ಸುಶೀಲ್‌ಚಂದ್ರ ನೂತನ ಮುಖ್ಯ ಚುನಾವಣಾ ಆಯುಕ್ತ 2
ಕಸಾಪ: ಮಂಡ್ಯದತ್ತ ಅಭ್ಯರ್ಥಿಗಳ ಚಿತ್ತ 4

ಕೋವಿಡ್-19 ಲಸಿಕೆ, ನಿಮ್ಮ ಜೀವಕ್ಕೆ ಸಂಜೀವಿನಿ
ಲಸಿಕಾ ಅಭಿಯಾನ
2021ರ ಏಪ್ರಿಲ್ 11 ರಿಂದ 14 ರವರೆಗೆ
45 ವರ್ಷ ಮೇಲ್ಪಟ್ಟವರು ಆರೋಗ್ಯ ಹಿತದೃಷ್ಟಿಯಿಂದ ಸ್ವಯಂ ಪ್ರೇರಿತರಾಗಿ ಲಸಿಕೆ ಪಡೆಯಿರಿ
ಕೊರೋನಾ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕರಿಸಿ

ಕೋವಿಡ್-19 ಲಸಿಕೆಗಾಗಿ ನೋಂದಾಯಿಸಿಕೊಳ್ಳಲು www.cowin.gov.in ಗೆ ಭೇಟಿ ನೀಡಿ
ಜ್ವರ, ನೆಗಡಿ, ಕೆಮ್ಮು ತರಹದ ಕೋವಿಡ್-19 ಲಕ್ಷಣಗಳಿದ್ದಲ್ಲಿ ಆಪ್ತಮಿತ್ರ ಸಹಾಯವಾಣಿ 14410ಗೆ ಕರೆ ಮಾಡಿ
ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಕೋವಿಡ್ ತಡೆಗೆ ಕಠಿಣ ನಿರ್ಬಂಧ

ಮೇ ಮೊದಲ ವಾರದಲ್ಲಿ ಗರಿಷ್ಠ ಸಾಧ್ಯತೆ • ಎರಡನೇ ಅಲೆಯ ನಿಯಂತ್ರಣಕ್ಕೆ ಭಾರಿ ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ರಾಜ್ಯದಲ್ಲಿ ಮೇ ಮೊದಲ ವಾರದ ವೇಳೆಗೆ ಗರಿಷ್ಠ ಮಟ್ಟ ತಲುಪುವ ಸಾಧ್ಯತೆ ಇದೆ ಎಂದು ರಾಜ್ಯ ಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ವಿಷನ್ ಗ್ರೂಪ್ ತಜ್ಞರು ಅಂದಾಜು ಮಾಡಿದ್ದಾರೆ.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಹಾಗೂ ವಿಷನ್ ಗ್ರೂಪ್ ಸದಸ್ಯರ ಜತೆ ಭಾನುವಾರ ಸಭೆ ನಡೆಸಿ, ಸೋಂಕು ನಿಯಂತ್ರಣ ಕುರಿತು ಚರ್ಚಿಸಿದರು. ಎರಡನೇ ಅಲೆಯ ಚಲನೆಯ ಕುರಿತ ಅಂದಾಜುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ತಜ್ಞರು ಸಚಿವರೊಂದಿಗೆ ಹಂಚಿಕೊಂಡರು.

ಕೆ.ಸುಧಾಕರ್

ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಸುಧಾಕರ್, 'ಕೋವಿಡ್‌ನ ಪ್ರತಿ ಅಲೆ 180 ದಿನಗಳ ಕಾಲ ಇರುತ್ತದೆ. ರಾಜ್ಯದಲ್ಲಿ ಎರಡನೇ ಅಲೆ ಮೇ ಮೊದಲ ವಾರದ ವೇಳೆಗೆ ಗರಿಷ್ಠ ಮಟ್ಟ ತಲುಪಿ, ಮೇ ಕೊನೆಯ ವಾರದ ವೇಳೆಗೆ ಪ್ರಕರಣಗಳ ಸಂಖ್ಯೆ ಇಳಿಮುಖವಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಎರಡನೇ ಅಲೆಯು ಗರಿಷ್ಠ ಹಂತವನ್ನು ತಲುಪಿದಾಗ ಅನುಸರಿಸಬೇಕಾದ ಕ್ರಮಗಳ ಕುರಿತೂ ತಜ್ಞರ ಜತೆ ಸಮಾಲೋಚನೆ ನಡೆಸಲಾಗಿದೆ' ಎಂದರು.



5ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ-ಅಂಶ

10,65,290	ಒಟ್ಟು ಸೋಂಕಿತರು (10,55,040 ನಿನ್ನೆಯ ವಿವರ) ▲
69,225	ಸಕ್ರಿಯ ಪ್ರಕರಣಗಳು ▲
9,83,157	ಗುಣಮುಖರಾದವರು ▲
12,889	ಒಟ್ಟು ಸಾವು ▼
ದಿನದ ಏರಿಕೆ	
ಹೊಸ ಪ್ರಕರಣ	10,250 ▲
ಗುಣಮುಖ	2,638 ▼
ಸಾವು	40 ▲

440 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮೈಕ್ರೊ ಕಂಟೈನ್‌ಮೆಂಟ್ ವಲಯ: ಮೋದಿ ಕರೆ

ನವದೆಹಲಿ: ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಸೋಂಕು ಪ್ರಸರಣ ತಡೆಗೆ ಜನರು ತಮ್ಮ ನಡುವೆಯೇ 'ಮೈಕ್ರೊ ಕಂಟೈನ್‌ಮೆಂಟ್ ವಲಯ' ರಚಿಸಿಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದರು.

ಏಪ್ರಿಲ್ 11ರಿಂದ 14ರವರೆಗೆ ಲಸಿಕಾ ಹಬ್ಬ 'ಟೀಕಾ ಉತ್ಸವ'ದ ಅಂಗವಾಗಿ ಅವರು ಮಾತನಾಡಿದರು. ಭಾನುವಾರ ಈ ಅಭಿಯಾನಕ್ಕೆ ಚಾಲನೆ ನೀಡಲಾಯಿತು. 'ತಮ್ಮ ಸಮೀಪದಲ್ಲಿ ಯಾರಾದರೂ ಸೋಂಕಿಗೆ ಒಳಗಾದರೆ, ಕುಟುಂಬಗಳು ಮತ್ತು ಸಮಾಜದ ಸದಸ್ಯರು ತಮ್ಮ ನಡುವೆಯೇ ಕಂಟೈನ್‌ಮೆಂಟ್ ವಲಯ ರಚಿಸಿಕೊಳ್ಳುವ ಮೂಲಕ ಪ್ರಸರಣ ತಡೆಯಬಹುದು. ಭಾರತದಂತಹ ಜನನಿಬಿಡ ದೇಶದಲ್ಲಿ ಸೋಂಕಿನ ವಿರುದ್ಧ ಹೋರಾಡಲು ಇದೊಂದು ಪ್ರಮುಖ ಮಾರ್ಗವಾಗಿದೆ' ಎಂದು ಹೇಳಿದರು.

'ಮೈಕ್ರೊ ಕಂಟೈನ್‌ಮೆಂಟ್ ವಲಯದ ಬಗ್ಗೆ ನಾವೆಷ್ಟು ಜಾಗೃತರಾಗಿದ್ದೇವೆ ಎಂಬುದರ ಮೇಲೆ ಅದರ ಯಶಸ್ಸು ನಿಂತಿದೆ. ಅಗತ್ಯವಿದ್ದರೆ ಮಾತ್ರ ಮನೆಯಿಂದ ಹೊರಹೋಗುವುದು, ಅರ್ಹರು ಲಸಿಕೆ ಪಡೆದುಕೊಳ್ಳುವುದು, ಕೋವಿಡ್ ಮಾರ್ಗಸೂಚಿಗಳನ್ನು ನಿಷ್ಠೆಯಿಂದ ಪಾಲಿಸುವುದರ ಮೇಲೆ ಮೇಲೆ ಯಶಸ್ಸು ನಿರ್ಧಾರವಾಗುತ್ತದೆ' ಎಂದಿದ್ದಾರೆ. 'ಪ್ರತಿಯೊಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಲಸಿಕೆ ಹಾಕಿಸಬೇಕು, ಪ್ರತಿಯೊಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಚಿಕಿತ್ಸೆ ಕೊಡಿಸಲು ನೆರವಾಗಬೇಕು, ಪ್ರತಿಯೊಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಸೋಂಕಿನಿಂದ ರಕ್ಷಿಸಬೇಕು' – ಪ್ರತಿಯೊಬ್ಬ ನಾಗರಿಕ ಈ ಮೂರು ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂದು ಮೋದಿ ಕರೆ ಕೊಟ್ಟರು.

ಮಸ್ಕಿ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡಗೆ ಕೋವಿಡ್

ಮಸ್ಕಿ (ರಾಯಚೂರು): ಮಸ್ಕಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಅವರಿಗೆ ಕೋವಿಡ್ ದೃಢಪಟ್ಟಿದೆ. ಸದ್ಯಕ್ಕೆ ಅವರು ಹೋಂ ಕ್ವಾರಂಟೈನ್‌ನಲ್ಲಿ ಇದ್ದಾರೆ. ಅಗತ್ಯವಿದ್ದಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗುವುದು ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಲಾಕ್‌ಡೌನ್‌ಗೆ ಶಿಫಾರಸು?

'ಆರ್ಥಿಕ ಚಟುವಟಿಕೆಗೆ ಯಾವುದೇ ರೀತಿಯ ತೊಂದರೆ ಆಗದಂತೆ ನಿರ್ಬಂಧಗಳನ್ನು ಜಾರಿಗೊಳಿಸಬೇಕು ಎಂಬುದಾಗಿ ತಜ್ಞರು ಸಲಹೆ ನೀಡಿದ್ದಾರೆ. ಆದರೆ, ಗುಂಪು ಸೇರುವುದಕ್ಕೆ ಕಡಿವಾಣ ಹಾಕದಿದ್ದರೆ ಪರಿಸ್ಥಿತಿ ಹದಗೆಡುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ' ಎಂದು ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು. 'ಲಾಕ್‌ಡೌನ್‌ಗೆ ಶಿಫಾರಸು ಮಾಡಲಾಗಿದೆಯೆ?' ಎಂಬ ಪ್ರಶ್ನೆಗೆ ನೇರ ಉತ್ತರ ನೀಡಲು ನಿರಾಕರಿಸಿದ ಅವರು, 'ಈಗ ನನ್ನಿಂದ ಏಕೆ ಈ ಮಾತು ಹೇಳಿಸುತ್ತಿದ್ದೀರಿ. ವರದಿ ಬಂದ ಬಳಿಕ ಚರ್ಚಿಸಿ, ತೀರ್ಮಾನಕ್ಕೆ ಬರಲಾಗುವುದು. ಜಾತ್ರೆ, ಸಮಾರಂಭಗಳ ನಿಷೇಧಕ್ಕೆ ತಜ್ಞರು ಸಲಹೆ ಮಾಡಿದ್ದಾರೆ' ಎಂದರು.

ಭಾನುವಾರ 2,500 ಬಸ್‌ಗಳ ಸಂಚಾರ

ಮುಷ್ಕರ ಬಿಟ್ಟರಷ್ಟೇ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಷ್ಕರ ನಿರತ ಸಾರಿಗೆ ನಿಗಮಗಳ ನೌಕರರನ್ನು ಮಣಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಈ ವರ್ಷವಷ್ಟೇ ಜಾರಿಗೊಳಿಸಿರುವ ಅಂತರ ನಿಗಮ ವರ್ಗಾವಣೆ ಸೌಲಭ್ಯಕ್ಕೆ ಕತ್ತರಿ ಹಾಕುವ ಅಸ್ತ್ರ ಪ್ರಯೋಗಿಸಿದೆ. ನೌಕರರೂ ಹಿಂದಡಿಯಿಡಲು ನಿರಾಕರಿಸಿದ್ದು, ಸೋಮವಾರ ರಾಜ್ಯದಾದ್ಯಂತ ತಟ್ಟೆ, ಲೋಟ ಬಡಿದು ಪ್ರತಿಭಟನೆಗೆ ಸಜ್ಜಾಗಿದ್ದಾರೆ.

ಐದು ದಿನ ಕಳೆದರೂ ನೌಕರರು ಮತ್ತು ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಕಂಡು ಬಂದಿಲ್ಲ. ಸೋಮವಾರ ರಾಜ್ಯದಾದ್ಯಂತ ಪ್ರತಿಭಟನಾ ಪ್ರದರ್ಶನಕ್ಕೆ ನೌಕರರು ಮುಂದಾಗಿದ್ದಾರೆ. ಮುಷ್ಕರ ಬೆಂಬಲಿಸದ ನೌಕರರ ಜತೆಗೆ ನಿವೃತ್ತರು, ಗುತ್ತಿಗೆ ಆಧಾರದಲ್ಲಿ ಬರುತ್ತಿರುವವರ ಸೇವೆ ಬಳಸಿಕೊಂಡಿರುವ ಸಾರಿಗೆ ನಿಗಮಗಳು ಭಾನುವಾರ 2,500 ಬಸ್ ಓಡಿಸಿವೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ಮುಷ್ಕರದಲ್ಲಿ ಭಾಗಿಯಾಗಿರುವ ನೂರಾರು ನೌಕರರನ್ನು ವರ್ಗಾವಣೆಗೊಳಿಸಿ ಶುಕ್ರವಾರ ಮತ್ತು ಶನಿವಾರ ಆದೇಶ ಹೊರಡಿಸಿದ್ದವು.

5ನೇ ಪುಟ ನೋಡಿ

ಕೆಲಸಕ್ಕೆ ಬರದಿದ್ದರೆ ವೇತನ ಕಡಿತ: ಸಿ.ಎಂ

ಮುದಗಲ್ (ರಾಯಚೂರು ಜಿಲ್ಲೆ): 'ಸಾರಿಗೆ ನೌಕರರು ಕೂಡಲೇ ಕರ್ತವ್ಯಕ್ಕೆ ಹಾಜರಾಗದಿದ್ದರೆ ವೇತನ ಕಡಿತ ಮಾಡುವುದರ ಜತೆಗೆ ಶಿಸ್ತು ಕ್ರಮ ಜರುಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾನುವಾರ ಎಚ್ಚರಿಕೆ ನೀಡಿದರು.

'ಮುಷ್ಕರಕ್ಕೆ ಸಂಬಂಧಿಸಿದಂತೆ ಯಾರನ್ನೂ ಮಾತುಕತೆಗೆ ಕರೆಯುವುದಿಲ್ಲ. ರಾಜಿಯೂ ಮಾಡಿಕೊಳ್ಳುವುದಿಲ್ಲ. ನೌಕರರು ಗೌರವದಿಂದ ಕೆಲಸಕ್ಕೆ ಹಾಜರಾಗಬೇಕು. ಸಾರಿಗೆ ಅವ್ಯವಸ್ಥೆಯಿಂದ ಮುಂದಾಗುವ ಅನಾಹುತಗಳಿಗೆ ಅವರೇ ಹೊಣೆಯಾಗುತ್ತಾರೆ' ಎಂದು ಹೇಳಿದರು.

ಮುಷ್ಕರ ನಿಲ್ಲುವುದಿಲ್ಲ: ಚಂದ್ರಶೇಖರ್

ಬೆಂಗಳೂರು: ಉಪ ಚುನಾವಣೆಯಲ್ಲಿ ಮುಳುಗಿರುವ ರಾಜ್ಯ ಸರ್ಕಾರಕ್ಕೆ ಸಾರಿಗೆ ನಿಗಮಗಳ ನೌಕರರ ಸಮಸ್ಯೆ ಕಾಣಿಸುತ್ತಿಲ್ಲ. ನೌಕರರ ಬೇಡಿಕೆ ಇತ್ಯರ್ಥವಾಗುವವರೆಗೂ ಮುಷ್ಕರ ನಿಲ್ಲುವುದಿಲ್ಲ ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸಾರಿಗೆ ನೌಕರರ ಕೂಟದ ಪದಾಧಿಕಾರಿಗಳು ಹಾಗೂ ಇತರ ಕೆಲವು ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಭಾನುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೋಮವಾರ ಎಲ್ಲ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಕಚೇರಿ ಎದುರು ಸಾರಿಗೆ ನೌಕರರು ಕುಟುಂಬ ಸಮೇತರಾಗಿ ಬಂದು ತಟ್ಟೆ, ಲೋಟ ಬಡಿದು ಪ್ರತಿಭಟನೆ ನಡೆಸುತ್ತಾರೆ' ಎಂದರು. ಕೊರೊನಾ ವೈರಸ್ ಓಡಿಸಲು ತಟ್ಟೆ, ಲೋಟ ಬಾರಿ ಪ್ರಧಾನಿ ನರೇಂದ್ರ ಮೋದಿಯೇ ಕರೆ ನೀಡಿದ್ದರು. ಈಗ ಕೋವಿಡ್ ಹೆಸರಿನಲ್ಲಿ ಪ್ರತಿಭಟನೆಗೆ ಅಡ್ಡಿಪಡಿಸುತ್ತಿದ್ದಾರೆ. ಉಪ ಚುನಾವಣೆ ಪ್ರಚಾರಕ್ಕೆ ಹೋಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಸಂಪುಟದ ಸದಸ್ಯರಿಗೆ ಕೋವಿಡ್ ಮಾರ್ಗಸೂಚಿ ಅನ್ವಯಿಸುವುದಿಲ್ಲ. ಹೋರಾಟಕ್ಕೆ ಇಳಿಯುವ ರೈತರು, ಕಾರ್ಮಿಕರು ಮತ್ತು ದಲಿತರಿಗೆ ಮಾತ್ರ ಮಾರ್ಗಸೂಚಿಯೇ ಎಂದು ಪ್ರಶ್ನಿಸಿದರು.

ಇನ್ನಷ್ಟು ಸುದ್ದಿಗಳು 5A

ಒಳ ಪುಟಗಳು

ಗೋಲಿಬಾರ್: ಕಪ್ಪು ಪಟ್ಟಿ ಕಟ್ಟಿ ಅಂತ್ಯಕ್ರಿಯೆ 9

'ವಿಜಯೇಂದ್ರನ ಮುಂದೆ ಹೆಬ್ಬೆಟ್ಟಾದ ಯಡಿಯೂರಪ್ಪ' 5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-8

ಚಿನಕುರಳಿ
ಪ್ರಕಾಶ್ ಶೆಟ್ಟಿ

ರಫೇಲ್: 'ಸುಪ್ರೀಂ'ಗೆ ಅರ್ಜಿ

ನವದೆಹಲಿ: ರಫೇಲ್ ಯುದ್ಧವಿಮಾನಗಳ ಖರೀದಿ ಕುರಿತಂತೆ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆದೇಶಿಸುವಂತೆ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಲಾಗಿದೆ.

ಈ ಯುದ್ಧ ವಿಮಾನಗಳನ್ನು ತಯಾರಿಸುವ ಕಂಪನಿ ಡಾಸೊ ಏವಿಯೇಶನ್ ಭಾರತದಲ್ಲಿನ ಮಧ್ಯವರ್ತಿಗಳಿಗೆ ₹ 9 ಕೋಟಿ ಲಂಚ ನೀಡಿದೆ ಎಂಬುದಾಗಿ ಫ್ರಾನ್ಸ್‌ನ ಮಾಧ್ಯಮವೊಂದು ಇತ್ತೀಚೆಗೆ ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ತನಿಖೆಗೆ ಆದೇಶಿಸುವಂತೆ ಕೋರಿ ವಕೀಲ ಮನೋಹರಲಾಲ್ ಶರ್ಮಾ ಎಂಬುವವರು ಅರ್ಜಿ ಸಲ್ಲಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಡಿಫ್‌ಸಿಎಸ್ ಸೊಲ್ಯೂಷನ್ಸ್ ಪ್ರೈ. ಲಿ.ನ ಸುಶೇನ್ ಮೋಹನ್ ಗುಪ್ತಾ, ಡಾಸೊ ರಿಲಯನ್ಸ್ ಏರೋಸ್ಪೇಸ್ ಲಿ. (ಡಿಆರ್‌ಎಎಲ್) ಅನ್ನು ಅವರು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ.

'ಸಕಾರಣ ಇಲ್ಲದೆ ಜಾಮೀನು ಮಂಜೂರು ಒಪ್ಪಲಾಗದು'

ನವದೆಹಲಿ: ಸಕಾರಣಗಳಿಲ್ಲದೆಯೇ ಆರೋಪಿಗೆ ಜಾಮೀನು ನೀಡುವುದನ್ನು ಒಪ್ಪಲಾಗದು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ. ಮೇಲ್ನೋಟಕ್ಕೆ ಕಂಡುಬರುವ ಕೆಲವೇ ಅಂಶಗಳನ್ನು ಆಧರಿಸಿ ಆದೇಶ ಹೊರಡಿಸುವ ಮಟ್ಟಕ್ಕೆ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ಆಡಳಿತ ಕುಸಿಯಬಾರದು ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಎಂ.ಆರ್.ಶಾ ಅವರಿರುವ ನ್ಯಾಯಪೀಠ ಹೇಳಿದೆ.

ಸೋನು ಯಾದವ್ ಎಂಬ ವ್ಯಕ್ತಿಗೆ ಜಾಮೀನು ಮಂಜೂರು ಮಾಡಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪಕ್ಕಕ್ಕಿರಿಸಿದ ನ್ಯಾಯಪೀಠ, 'ವರದಕ್ಷಿಣೆಗೆ ಸಂಬಂಧಿಸಿ ಕಿರುಕುಳ ನೀಡಲಾಗುತ್ತಿತ್ತು ಎಂಬ ಆರೋಪ ಇದೆ. ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕಿತ್ತು' ಎಂದೂ ಹೇಳಿದೆ.

ಊರಿನತ್ತ... ಸಾರಿಗೆ ಬಸ್‌ಗಳ ಮುಷ್ಕರ ಇದ್ದರೂ ಯುಗಾದಿ ಹಬ್ಬಕ್ಕಾಗಿ ಊರಿಗೆ ಹೊರಟ ಜನರು ಖಾಸಗಿ ಬಸ್‌ಗಳಲ್ಲಿ ತೆರಳಿದ ದೃಶ್ಯ ಭಾನುವಾರ ಬೆಂಗಳೂರಿನ ನೆಲಮಂಗಲ ಬಳಿ ಕಂಡುಬಂತು
ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಮಾದಕ ಪದಾರ್ಥಗಳು, ಐಷಾರಾಮಿ ವಾಹನಗಳು ವಶಕ್ಕೆ

ರೇವ್ ಪಾರ್ಟಿ: 130 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ ಜಿಲ್ಲೆ): ಇಲ್ಲಿನ ನಂದಿಪುರ ಎಸ್ಟೇಟ್‌ನಲ್ಲಿ ಶನಿವಾರ ರಾತ್ರಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ದಾಳಿ ನಡೆಸಿ 130 ಯುವಕ-ಯುವತಿಯರನ್ನು ಬಂಧಿಸಲಾಗಿದೆ.

ಎಸ್ಟೇಟ್‌ನ ಮೋಟಾರ್ ಸೈಕಲ್ ರೆಸಾರ್ಟ್‌ನಲ್ಲಿ ನಡೆಯುತ್ತಿದ್ದ ಪಾರ್ಟಿಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯ ಹಾಗೂ ಹೊರ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದವರು ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ರಾತ್ರಿ ಕರ್ಫ್ಯೂ ಜಾರಿ ಮಾಡಿದ್ದರಿಂದ ಕೆಲವರು ವಾಹನಗಳ ಮೇಲೆ 'ತುರ್ತು ಸೇವೆ' ಎಂದು ಹಾಕಿಕೊಂಡು ಬಂದಿದ್ದರು.

ಮದ್ಯಪಾನ, ಗಾಂಜಾ ಸೇವನೆಯೊಂದಿಗೆ ಡಿ.ಜೆ ಸೌಂಡ್ ಸಿಸ್ಟಂ ಬಳಸಿ ಪಾರ್ಟಿ ನಡೆಯುತ್ತಿರುವ ಮಾಹಿತಿ ಪಡೆದ ಪೊಲೀಸರು ದಾಳಿ ನಡೆಸಿ, ಸ್ಥಳದಲ್ಲಿದ್ದವರನ್ನು ಬಂಧಿಸಿದರು. ಐಷಾರಾಮಿ ಕಾರು ಮತ್ತು ಬೈಕ್‌ಗಳನ್ನು ವಶಕ್ಕೆ ಪಡೆದರು.

ರೇವ್ ಪಾರ್ಟಿ ಸ್ಥಳದಲ್ಲಿದ್ದ ವಾಹನಗಳು

'ಅಲ್ಪ ಪ್ರಮಾಣದ ಗಾಂಜಾ, ಅಫೀಮು ಹಾಗೂ ಮದ್ಯ ವಶಪಡಿಸಿಕೊಳ್ಳಲಾಗಿದೆ. ಗೋವಾ, ಕೇರಳ, ಮಂಗಳೂರು, ಬೆಂಗಳೂರಿನಿಂದ ಬಂದಿರುವ ಯುವಕರು ಪಾರ್ಟಿಯಲ್ಲಿದ್ದರು. ಪ್ರತಿಯೊಬ್ಬರ ರಕ್ತ ಪರೀಕ್ಷೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಾರ್ಯಕ್ರಮ ಆಯೋಜಕರು ನಾಪತ್ತೆಯಾಗಿದ್ದು, ಎಸ್ಟೇಟ್ ಮಾಲೀಕ ಗಗನ್ ಅವರನ್ನು ಬಂಧಿಸಲಾಗಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡವರಿಂದ ಶುಲ್ಕ ಸಂಗ್ರಹಿಸಿ, ಪಾರ್ಟಿ ನಡೆಯುವ ಜಾಗದ ಮಾಹಿತಿಯನ್ನು (ಲೊಕೇಶನ್) ಮಾತ್ರ ಶೇರ್ ಮಾಡಲಾಗಿತ್ತು. ಪಾರ್ಟಿಯಲ್ಲಿ ದಂಪತಿ, ಯುವಕರು, ಯುವತಿಯರು ಪಾಲ್ಗೊಂಡಿದ್ದರು. ಕೋವಿಡ್ ನಿಯಮ ಉಲ್ಲಂಘನೆ, ಅಬಕಾರಿ ನಿಯಮದ ಅನುಸಾರವಾಗಿ ಪ್ರಕರಣ ದಾಖಲಿಸಲಾಗುವುದು' ಎಂದು ಎಸ್ಪಿ ಶ್ರೀನಿವಾಸಗೌಡ ತಿಳಿಸಿದರು.

ಮೈದಾನ ಹೊಸದು, ಆಟ ಅದೇ

ಆಟದಲ್ಲಿ ಗೆಲ್ಲಲು ಬೇಕಾಗುತ್ತದೆ
ಕೌಶಲ್ಯ
ಪ್ರತಿಭೆ
ಅಭ್ಯಾಸ

ಇ-ಕ್ರೀಡೆ ಗೆಲ್ಲಲು ಕೂಡಾ ಇದು ಬೇಕಾಗುತ್ತದೆ
ಕೌಶಲ್ಯ
ಪ್ರತಿಭೆ
ಅಭ್ಯಾಸ

ಎರಡರಲ್ಲೂ ವ್ಯತ್ಯಾಸ ಬರೀ ನಿಮ್ಮ ಮನಸಿನಲ್ಲಿ

ಈ ಆಟವು ಹಣಕಾಸಿನ ಅಪಾಯದ ಒಂದು ಅಂಶವನ್ನು ಒಳಗೊಂಡಿರುತ್ತದೆ ಮತ್ತು ವ್ಯಸನಕಾರಿಯಾಗಿರಬಹುದು. ದಯವಿಟ್ಟು ಜವಾಬ್ದಾರಿಯುತವಾಗಿ ಮತ್ತು ನಿಮ್ಮ ಸ್ವಂತ ಅಪಾಯದಲ್ಲಿ ಆಟವಾಡಿ. ಷರತ್ತುಗಳು ಅನ್ವಯ. ಕೇವಲ 18+ ವರ್ಷ.

MPL

ಮಹದೇಶ್ವರ ಬೆಟ್ಟ: ಬೆಳ್ಳಿ ಕರಗಿಸುವ ಪ್ರಕ್ರಿಯೆಗೆ ಚಾಲನೆ

ಮಹದೇಶ್ವರ ಬೆಟ್ಟ (ಚಾಮರಾಜನಗರ): ಇಲ್ಲಿನ ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರಸ್ವಾಮಿ ದೇವಾಲಯಕ್ಕೆ ಭಕ್ತರು ಹರಕೆ- ಕಾಣಿಕೆ ರೂಪದಲ್ಲಿ ಸಲ್ಲಿಸಿದ್ದ, ಮೂರ್ನಾಲ್ಕು ದಶಕಗಳಿಂದ ಸಂಗ್ರಹವಾಗಿದ್ದ ಸುಮಾರು 400 ಕೆ.ಜಿ.ಯಷ್ಟು ಬೆಳ್ಳಿಯ ವಸ್ತುಗಳನ್ನು ಕರಗಿಸಿ ಗಟ್ಟಿಯನ್ನಾಗಿ ಮಾಡುವ ಕಾರ್ಯಕ್ಕೆ ಭಾನುವಾರ ಚಾಲನೆ ಸಿಕ್ಕಿದೆ.

'ಮಲೆ ಮಹದೇಶ್ವರಸ್ವಾಮಿಗೆ ಬೆಳ್ಳಿ ರಥ ನಿರ್ಮಿಸುತ್ತಿರುವುದರಿಂದ, ಇದಕ್ಕಾಗಿ ಬೆಳ್ಳಿಯ ಅಗತ್ಯವೂ ಇದೆ' ಎಂದು ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷೀದಾರರು (**'ಕಕ್ಷೀದಾರ'**) ಕೃಷಿ ಜಮೀನುಗಳ ಸಂಬಂಧ ಕೆಲವೊಂದು ವ್ಯವಹಾರಗಳನ್ನು ಮಾಡಿಕೊಳ್ಳಲು ಅಪೇಕ್ಷಿಸಿದ್ದಾರೆ. ಸದರಿ ಜಮೀನಿನ ವಿವರವನ್ನು ಈ ಕೆಳಕಂಡ **ಷೆಡ್ಯೂಲ್** ನಲ್ಲಿ ನೀಡಲಾಗಿದ್ದು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಹಾಗೂ ಇದಕ್ಕೆ ಸಂಬಂಧಿಸಿದಂತೆ ಶ್ರೀ. ಜೆ. ಶ್ರೀನಿವಾಸ್ ಬಿನ್ ಜನಾರ್ಧನ್ ಮತ್ತು ಶ್ರೀಮತಿ. ಲಲಿತಾ ಕೋಂ ಶ್ರೀನಿವಾಸ್, ವಾಸ: #656, 7ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಬಿಟಿಎಂ ಲೇಔಟ್, ಬೆಂಗಳೂರು 560076 (ಇನ್ನು ಮುಂದೆ ಇವರನ್ನು **'ಮಾಲೀಕರು'** ಎಂದು ಕರೆಯಲಾಗುತ್ತದೆ) ತಾವುಗಳೇ ಸಂಬಂಧಪಟ್ಟ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಮಾಲೀಕರೆಂದು ನಮ್ಮ ಕಕ್ಷೀದಾರರಿಗೆ ತಿಳಿಸಿರುತ್ತಾರೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಎಲ್ಲಾ ಅಥವಾ ಯಾವುದೇ ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರವನ್ನು, ಹಕ್ಕುಗಳನ್ನು, ಚಾರ್ಜ್, ಲೀನ್, ಕ್ಲೇಮ್ ಅಥವಾ ಮತ್ತಾವುದೇ ವಿಧದ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ, ಅಂತಹ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಮೇಲೆ ತಮ್ಮ ಮಾಲೀಕತ್ವವನ್ನು ರುಜುವಾತು ಮಾಡುವ ದಾಖಲೆಗಳು ಏನಾದರೂ ಇದ್ದಲ್ಲಿ ಮತ್ತು ಪ್ರಸ್ತಾಪಿತ ವ್ಯವಹಾರಕ್ಕೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಅಂತಹ ಕ್ಲೇಮು/ಕ್ಲೇಮುಗಳು/ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವುಗಳನ್ನು ರುಜುವಾತು ಮಾಡುವ ದಾಖಲೆಗಳ ಸಹಿತ ಈ ಸಾರ್ವಜನಿಕ ತಿಳುವಳಿಕೆ ಪ್ರಕಟವಾದ **10 (ಹತ್ತು)** ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ, ಸದರಿ ಮಾಲೀಕರು ಮಾತ್ರ ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರ, ಹಿತಾಸಕ್ತಿ ಮತ್ತು ಹಕ್ಕುಗಳನ್ನು ಹೊಂದಿದ್ದಾರೆ ಎಂದು ಪರಿಭಾವಿಸಲಾಗುವುದು. ತದನಂತರ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹಾರಗಳನ್ನು ಮಾಡಿಕೊಳ್ಳಲು ಅನಿರ್ಬಂಧಿತವಾಗಿ ಮುಂದುವರೆಯಲಿದ್ದಾರೆ ಎಂದು ತಿಳಿಯುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ತಿರುವರಂಗ ಗ್ರಾಮದಲ್ಲಿರುವ ಒಟ್ಟಾರೆ 10 ಎಕರೆ 20 ಗುಂಟೆಗಳ ವಿಸ್ತೀರ್ಣ ಹೊಂದಿರುವ ಸ್ಥಿರಾಸ್ತಿ ಸ್ವತ್ತಿನ ಸಂಪೂರ್ಣ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ.	ಸರ್ವೆ ನಂ.	ವಿಸ್ತೀರ್ಣ		ಚೆಕ್ಕುಬಂದಿ			
		ಎಕರೆ	ಗುಂಟೆ	ಪೂರ್ವಕ್ಕೆ:	ಪಶ್ಚಿಮಕ್ಕೆ:	ಉತ್ತರಕ್ಕೆ:	ದಕ್ಷಿಣಕ್ಕೆ:
1	33(P)	6	16	ಉಳಿದ ಭಾಗದ ಸರ್ವೆ ನಂ.33	ಸರ್ವೆ ನಂ.39 ಮತ್ತು ಉಳಿದ ಭಾಗದ ಸರ್ವೆ ನಂ.33	ಸರ್ವೆ ನಂ.37 ಮತ್ತು ಉಳಿದ ಭಾಗದ ಸರ್ವೆ ನಂ.33	ಸರ್ವೆ ನಂ.51 ಮತ್ತು 52
2	52	4	4	ಸರ್ವೆ ನಂ.53/1	ಸರ್ವೆ ನಂ.33 ಮತ್ತು 51	ಸರ್ವೆ ನಂ.33	ರಸ್ತೆ

ಸಹಿ/- **ಶ್ರೀನಿವಾಸ್. ಬಿ.ಆರ್.** ಪಾಲುದಾರರು
ದುಲ ಅಸೋಸಿಯೇಟ್ಸ್,
ಅಡ್ವೋಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಅಲಸೂರು ರಸ್ತೆ, ಬೆಂಗಳೂರು–560 042
ದೂ. ಸಂ. 91–80–25588799/ 25589909, ಫ್ಯಾಕ್ಸ್ : 91–80–25588801.

ದಿನಾಂಕ : 12.04.2021
ಸ್ಥಳ : ಬೆಂಗಳೂರು

ಭಾರತ ಸರ್ಕಾರ
ಅಣುಶಕ್ತಿ ಇಲಾಖೆ
ಅಣು ಖನಿಜಗಳ ಪರಿಶೋಧನೆ ಮತ್ತು ಸಂಶೋಧನೆ ನಿರ್ದೇಶನಾಲಯ
ದಕ್ಷಿಣ ವಲಯ, ನಾಗರಭಾವಿ, ಬೆಂಗಳೂರು–560 072

ಟೆಂಡರ್ ನಂ. ಎಎಂಡಿ/ಎಸ್‌ಆರ್/ಆರ್‌ಎಂಆರ್‌ಇ/ಎಂಆರ್‌ಎಲ್/ಸಿಡಬ್ಲುಎಲ್/2021/01 ದಿನಾಂಕ: 09.04.2021

ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಾದೇಶಿಕ ನಿರ್ದೇಶಕರು, ಎಎಂಡಿ, ಎಸ್‌ಆರ್, ಬೆಂಗಳೂರು–560 072 ಇವರು ಮೇಲ್ಕಾಣಿಸಿದ ವಿಳಾಸದಲ್ಲಿ ಮತ್ತು (http://www.amd.gov.in) ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಎನ್‌ಐಟಿ ವಿವರಗಳನ್ವಯ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಮೊಹರಾದ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ ಸಂ.	ಟೆಂಡರ್ ನಂ.	ಕಾಮಗಾರಿ ವಿವರ	ಅಂದಾಜು ವೆಚ್ಚ (ರೂ.)	ಇ.ಎಂ.ಡಿ (ರೂ.)	ಪೂರ್ಣಗೊಳಿಸುವ ಅವಧಿ
1.	ಎಎಂಡಿ/ಎಸ್‌ಆರ್/ಆರ್‌ಎಂಆರ್‌ಇ/ಎಂಆರ್‌ಎಲ್/ಸಿಡಬ್ಲ್ಯುಎಲ್/2021/01	ಕರ್ನಾಟಕದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮರ್ಲಗಲ್ಲ ಪ್ರಾಸ್ಪೆಕ್ಟ್‌ನಲ್ಲಿ, ತಿಂಗಳಲ್ಲಿ 27 ದಿನಗಳ ಕಾಲ ಕನಿಷ್ಠ 19 ಜನ ಕಾರ್ಮಿಕರನ್ನು ನಿಯೋಜಿಸಿ ಸರ್ವೆ, ಪಿಟ್ಟಿಂಗ್, ಅದಿರಿನ ಸ್ಯಾಂಪ್ಲಿಂಗ್, ಅದಿರು ಅಗೆಯುವಿಕೆ ಮತ್ತು ಪರೀಕ್ಷೆ, ಎಫ್.ಎಸ್‌ಗೆ (ಫಿಕ್ಸೆಡ್ ಸೀವ್‌ಗೆ) ಅದಿರು ಫೀಡಿಂಗ್ ಮತ್ತು ಪಲ್ಸೇಟರ್ ಜಿಗ್ ಹಾಗೂ ಮಿನರಲ್ ಕಾನ್ಸಂಟ್ರೇಶನ್ ಟೇಬಲ್, ಹಚ್ ಕ್ಲೀನಿಂಗ್ ಮತ್ತು ಜಿಗ್ ಟೈಲಿಂಗ್ಸ ಹಾಗೂ ಪ್ಲಾನಿಂಗ್, ಎನ್‌ಬಿ-ಟಿಎ ಮಿನರಲ್ ಕಾನ್ಸಂಟ್ರೇಟ್‌ನ ಕ್ಲೀನಿಂಗ್ ಮತ್ತು ಸ್ಯಾಂಪ್ಲಿಂಗ್ ಕಾಮಗಾರಿ.	17,93,000/–	ಶೂನ್ಯ, ಅದಾಗ್ಯೂ ನಿರ್ದಿಷ್ಟ ನಮೂನೆಯಲ್ಲಿ ಬಿಡ್ ಡಿಕ್ಲರೇಶನ್ ಸಲ್ಲಿಸುವುದು	01.05.2021 ರಿಂದ 31.10.2021 ರವರೆಗೆ 06 ತಿಂಗಳು

ಕೋಟ್ ಮಾಡಲಾಗುವ ದರದಲ್ಲಿ ಜಿಎಸ್‌ಟಿ ಸೇರಿದಂತೆ ಎಲ್ಲವೂ ಅಡಕಗೊಂಡಿರಬೇಕು
ಇದೇ ಸ್ವರೂಪದ ಅಗತ್ಯ ಪ್ರಮಾಣದ ಕಾಮಗಾರಿಯನ್ನು ಯಶಸ್ವಿಯಾಗಿ ಪೂರೈಸಿರುವ ಮತ್ತು ಎಎಂಡಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ಎನ್‌ಐಟಿ'ಯಲ್ಲಿ ವಿವರಿಸಲಾಗಿರುವ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ಟೆಂಡರ್‌ದಾರರನ್ನು ಮಾತ್ರ ಟೆಂಡರ್ ದಸ್ತಾವೇಜುಗಳ ವಿತರಣೆಗೆ ಪರಿಗಣಿಸಲಾಗುತ್ತದೆ.
ಕರ್ನಾಟಕದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಾರ್ಲಗಲ್ಲ ಕ್ಯಾಂಪ್‌ನಲ್ಲಿ ಟೆಂಡರ್ ದಸ್ತಾವೇಜುಗಳ ಮಾರಾಟ : 12.04.2021 ರಿಂದ 18.04.2021 ರವರೆಗೆ
ಕರ್ನಾಟಕದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಾರ್ಲಗಲ್ಲ ಕ್ಯಾಂಪ್‌ನಲ್ಲಿ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ : 19.04.2021 ರಂದು 1500 ಗಂಟೆವರೆಗೆ
ಬೆಂಗಳೂರಿನ ಎಎಂಡಿ, ಎಸ್‌ಆರ್'ನಲ್ಲಿ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 20.04.2021 ರಂದು 15.30 ಗಂಟೆ
ಟೆಂಡರ್ ದಸ್ತಾವೇಜುಗಳ ಶುಲ್ಕ ರೂ. 500/– ನಗದು ಪಾವತಿಸುವುದು (ಹಿಂದಿರುಗಿಸಲಾಗುವುದಿಲ್ಲ)
ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ: 080–23210715, 080–23210676, 8056043851, 7985413034

ಕೊರೊನಾದಿಂದ ಮಾರುಕಟ್ಟೆಯಲ್ಲಿ ವ್ಯಾಪಾರ ನೀರಸ • ಗ್ರಾಹಕರ ನಿರೀಕ್ಷೆಯಲ್ಲಿ ವ್ಯಾಪಾರಿಗಳು

ಯುಗಾದಿ: ತಗ್ಗಿದ ಗ್ರಾಹಕರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಹಬ್ಬಕ್ಕೆ ಮಾರುಕಟ್ಟೆಗಳು ಪ್ರತಿ ವರ್ಷದಂತೆ ವ್ಯಾಪಾರಕ್ಕೆ ಸಜ್ಜಾಗಿವೆ. ಆದರೆ, ಕೊರೊನಾ ಕಾರಣದಿಂದ ಮಾರುಕಟ್ಟೆಗೆ ಬರುವ ಗ್ರಾಹಕರು ಕಡಿಮೆಯಾಗಿದ್ದು, ವ್ಯಾಪಾರ ನೀರಸವಾಗಿದೆ ಎಂದು ವ್ಯಾಪಾರಿಗಳು ಆತಂಕಗೊಂಡಿದ್ದಾರೆ.

ಕಳೆದ ಯುಗಾದಿ ವೇಳೆ ಕೊರೊನಾ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಹೇರಲಾಗಿತ್ತು. ಆದರೆ, ಹಬ್ಬಕ್ಕಾಗಿ ಮಾರುಕಟ್ಟೆಗಳಲ್ಲಿ ಖರೀದಿಗೆ ಅವಕಾಶ ಕಲ್ಪಿಸಲಾಗಿತ್ತು. ಈ ಕಾರಣದಿಂದ ಹೂವು, ಹಣ್ಣು, ತರಕಾರಿ ದರಗಳು ದಿಢೀರ್ ಏರಿಕೆ ಕಂಡಿದ್ದವು. ಆದರೆ, ಈ ಬಾರಿ ಮಾರುಕಟ್ಟೆಗಳು ಎಂದಿನಂತೆ ತೆರೆದಿದ್ದರೂ ಹಬ್ಬದ ಖರೀದಿಗೆಂದು ಬರುತ್ತಿರುವ ಗ್ರಾಹಕರು ವಿರಳವಾಗಿದ್ದರು.

ಮಲ್ಲೇಶ್ವರ, ಯಶವಂತಪುರ, ಬನಶಂಕರಿ, ಗಾಂಧಿಬಜಾರ್, ಇಂದಿರಾನಗರ, ವಿಜಯನಗರ, ಕೆ.ಆರ್.ಪುರ ಸೇರಿದಂತೆ ನಗರದಾದ್ಯಂತ ಹಬ್ಬಕ್ಕಾಗಿ ಕಿರು ಮಾರುಕಟ್ಟೆಗಳನ್ನು ತೆರೆಯಲಾಗಿದೆ. ಆದರೆ, ಮಳಿಗೆಗಳ ಬಳಿ ಬೆರಳೆಣಿಕೆಯಷ್ಟು ಗ್ರಾಹಕರು ಭಾನುವಾರ ಕಂಡು ಬಂದರು.

'ಕಳೆದ ಯುಗಾದಿ ವೇಳೆ ಕೊರೊನಾ ಆರಂಭಿಕ ಹಂತದಲ್ಲಿತ್ತು. ಆದರೂ ಮಾರುಕಟ್ಟೆಯಲ್ಲಿ ಜನಜಂಗುಳಿಯಾಗಿತ್ತು. ತಕ್ಕಮಟ್ಟಿಗೆ ವ್ಯಾಪಾರಿಗಳೂ ಲಾಭ ಕಂಡಿದ್ದರು. ಸಾಮಾನ್ಯವಾಗಿ ಯುಗಾದಿಗೆ ನಾಲ್ಕೈದು ದಿನಗಳ ಮುನ್ನವೇ ಖರೀದಿ ಗರಿಗೆದರುತ್ತಿತ್ತು. ಈಗ ಹಬ್ಬಕ್ಕೆ ಎರಡೇ ದಿನ ಉಳಿದಿದೆ. ಕಡಿಮೆ ಗ್ರಾಹಕರಿಂದ ಮಾರುಕಟ್ಟೆ ಎಂದಿನಂತೆಯೇ ಇದೆ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿ ಮಂಜುನಾಥ್ ತಿಳಿಸಿದರು.

'ಹಬ್ಬಕ್ಕಾಗಿ ಸಾಮಾನ್ಯವಾಗಿ ಹೂವಿನ ದರಗಳು ತುಸು ಏರಿಕೆಯಾಗಿವೆ. ಆದರೆ, ಕಳೆದ ಯುಗಾದಿಗಿಂತ ಹೆಚ್ಚಾಗಿಲ್ಲ. ಗ್ರಾಹಕರೇ ಇಲ್ಲದಾಗ ಬೆಲೆ ಏರಿದರೆ ಏನು ಪ್ರಯೋಜನ? ಸೋಮವಾರ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬರುವ ನಿರೀಕ್ಷೆಯಲ್ಲಿದ್ದೇವೆ. ಇಲ್ಲದಿದ್ದರೆ, ಈ ಬಾರಿ ವ್ಯಾಪಾರಿಗಳು ಲಾಭದ ಯುಗಾದಿ ಕಾಣುವುದು ಅನುಮಾನ' ಎಂದು ಬೇಸರ ವ್ಯಕ್ತಪಡಿಸಿದರು.

'ಯಾವ ಯುಗಾದಿ ವೇಳೆಯೂ ಈ ರೀತಿಯ ಕಡಿಮೆ ಗ್ರಾಹಕರನ್ನು ಕಂಡಿರಲಿಲ್ಲ. ಹೂವಿನ ದರಗಳೆಲ್ಲ ಈ ವೇಳೆಗೆ ಗಗನಕ್ಕೇರಿರುತ್ತಿದ್ದವು. ಸದ್ಯ ಹಬ್ಬದಲ್ಲೂ ಚೆಂಡು ಹೂವಿನ ದರ ಪ್ರತಿ ಕೆ.ಜಿ.ಗೆ ಕೇವಲ ₹15 ಇದೆ. ಈ ಯುಗಾದಿಗೆ ಗ್ರಾಹಕರೇ ವ್ಯಾಪಾರಿಗಳ ಕೈಹಿಡಿಯಬೇಕು' ಎಂದು ಕೆ.ಆರ್. ಮಾರುಕಟ್ಟೆಯ ದಿವಾಕರ್ ತಿಳಿಸಿದರು.

ತರಕಾರಿ ದರಗಳು ಸ್ಥಿರ: ಹಬ್ಬದ ಅಂಗವಾಗಿ ತರಕಾರಿ ದರಗಳು ಏರಿಕೆ ಕಂಡಿಲ್ಲ. ಬೆಳ್ಳುಳ್ಳಿ, ಬಟಾಣಿ, ಹಸಿ ಮೆಣಸಿನಕಾಯಿ ಹೊರತುಪಡಿಸಿ, ಉಳಿದೆಲ್ಲ ತರಕಾರಿಗಳ ದರ ಕಡಿಮೆ ಇದೆ. ಸೊಪ್ಪುಗಳ ಪೈಕಿ ಕೊತ್ತಂಬರಿ ದರ ತುಸು ಏರಿಕೆಯಾಗಿದೆ.

'ಯುಗಾದಿ ಎರಡು ದಿನಗಳ ಹಬ್ಬ. ಮೊದಲ ದಿನ ಸಿಹಿ ಖಾದ್ಯಗಳನ್ನು ಸವಿಯುತ್ತಾರೆ. ಎರಡನೇ ದಿನ ಹೊಸ ತೊಡಕು ಅಂಗವಾಗಿ ಮಾಂಸದ ತರಹೇವಾರಿ ಭೋಜನಗಳೊಂದಿಗೆ ಹಬ್ಬ ಸಂಪನ್ನಗೊಳಿಸುತ್ತಾರೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಯುಗಾದಿಯ ಸಿಹಿಗಿಂತ ಹೊಸ ತೊಡಕು ವಿಜೃಂಭಣೆಯಿಂದ ಸಾಗುತ್ತದೆ. ಈ ವೇಳೆ ಮಾಂಸದ ಬೆಲೆ ಗಗನಕ್ಕೇರುತ್ತದೆ. ಹಾಗಾಗಿ, ತರಕಾರಿಗಳಿಗೆ ಅಷ್ಟೇನೂ ಬೇಡಿಕೆ ಇರುವುದಿಲ್ಲ. 15 ದಿನಗಳಿಂದ ಬೆಲೆಗಳು ಸ್ಥಿರವಾಗಿವೆ' ಎಂದು ತರಕಾರಿ ವರ್ತಕ ಎಂ.ರವೀಶ್ ವಿವರಿಸಿದರು.

ಗ್ರಾಹಕರಿಲ್ಲದೆ ಖಾಲಿಯಾಗಿದ್ದ ಗಾಂಧಿ ಬಜಾರ್‌ನ ಹೂವಿನ ಮಾರುಕಟ್ಟೆ –ಪ್ರಜಾವಾಣಿ ಚಿತ್ರ

ಯುಗಾದಿ ವಿಶೇಷ (ದರ ಪಟ್ಟಿ)

ಬೇವು	₹20 (ಪ್ರತಿ ಕಟ್ಟಿಗೆ)
ಮಾವಿನ ಸೊಪ್ಪು	₹30
ಬಿಲ್ವಪತ್ರೆ	₹20
ಬೂದುಗುಂಬಳ	₹27 (ಕೆ.ಜಿ.ಗೆ)
ತೆಂಗಿನ ಕಾಯಿ	₹30 (ಒಂದಕ್ಕೆ)

ಹೂವಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಕನಕಾಂಬರ	300-400
ಮಲ್ಲಿಗೆ	200-300
ಸೇವಂತಿಗೆ	150-200
ಗುಲಾಬಿ	200-250
ಪತ್ರೆ	150
ಗನ್ನೇರಿ	120
ಚೆಂಡು ಹೂ	15

ಸೊಪ್ಪು	ಹಾಪ್‌ಕಾಮ್ಸ್ ದರ (ಪ್ರತಿ ಕೆ.ಜಿಗೆ)	ಚಿಲ್ಲರೆ ದರ (ಪ್ರತಿ ಕಟ್ಟಿಗೆ)
ಕೊತ್ತಂಬರಿ	67	15
ಮೆಂತ್ಯ	55	12
ಸಬ್ಬಕ್ಕಿ	58	12
ಪಾಲಕ್	50	10
ದಂಟು	37	8

ಹಣ್ಣುಗಳು	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ದಾಳಿಂಬೆ	235	180
ದ್ರಾಕ್ಷಿ	144	120
ಸೇಬು	180	150
ಮೂಸಂಬಿ	96	80
ಕಿತ್ತಳೆ	158	100
ಸಪೋಟ	60	50
ಸೀಬೆ	70	60
ಮಾವು	164	120
ಏಲಕ್ಕಿ ಬಾಳೆ	48	45
ಪಪ್ಪಾಯ	47	30
ಕಲ್ಲಂಗಡಿ	24	25
ಅನಾನಸ್	68	55

ದರಗಳ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಹಾಪ್ ಕಾಮ್ಸ್ ದರ	ಚಿಲ್ಲರೆ ದರ
ಬೆಳ್ಳುಳ್ಳಿ	120	100
ಶುಂಠಿ	38	40
ಬಟಾಣಿ	174	140
ಈರುಳ್ಳಿ	25	20
ಬೀನ್ಸ್	54	50
ಕ್ಯಾರೆಟ್	32	30
ಮೆಣಸಿನಕಾಯಿ	56	45
ಆಲೂಗಡ್ಡೆ	25	20
ಬೆಂಡೆಕಾಯಿ	32	30
ಟೊಮೆಟೊ	18	15

ನೈರುತ್ಯ ರೈಲ್ವೆ

ಖಾಸಗಿ ಹೂಡಿಕೆಯ ಮೂಲಕ ಸರಕು-ಶೆಡ್‌ಗಳ ಅಭಿವೃದ್ಧಿಗೆ ಆಸಕ್ತಿಯ ಅಭಿವ್ಯಕ್ತಿ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಖಾಸಗಿ ಪಕ್ಷಗಳು ಮತ್ತು ವ್ಯಕ್ತಿಗಳಿಂದ ಕೊಟ್ಟೂರು, ಬನ್ನಿಕೊಪ್ಪ, ಕೊಪ್ಪಳ, ಬಳ್ಳಾರಿ, ನವಲೂರು, ದೇಸೂರ, ರಾಯಬಾಗ, ಚಿಕ್ಕೋಡಿ ರಸ್ತೆ, ಉಗರ್‌ಖುರ್ದ್, ಸ್ವಾಮಿಹಳ್ಳಿ, ಯಶ್ವಂತ್‌ನಗರ, ವ್ಯಾಸನಕೇರಿ, ಕರಿಗನೂರ ಮತ್ತು ರಾಮಗಡ ರೈಲ್ವೆ ಸರಕುಗಳ ಶೆಡ್‌ಗಳಲ್ಲಿ ಅಪ್ರೋಚ್ ರಸ್ತೆಗಳು, ಚರಂಡಿ, ಜನರಲ್ ಲೈಟಿಂಗ್, ಕಾರ್ಮಿಕರಿಗೆ ಸೌಕರ್ಯಗಳು ಇತ್ಯಾದಿ ತರಹದ ಮೂಲಸೌಕರ್ಯಗಳ ಅಭಿವೃದ್ಧಿ, ದುರಸ್ತಿ / ಪುನರ್‌ಅಭಿವೃದ್ಧಿಗಳಿಗಾಗಿ ಆಸಕ್ತಿಯ ಅಭಿವ್ಯಕ್ತಿಯಂತೆ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಆಸಕ್ತರು ಹೆಚ್ಚಿನ ವಿವರಗಳಿಗಾಗಿ **ದೂರವಾಣಿ ಸಂಖ್ಯೆ 9731668950 / 7022079814 ಅಥವಾ ವೆಬ್‌ಸೈಟ್** swr.indianrailways.gov.in → about us → division → hubli → commercial branch ಅನ್ನು ಸಂಪರ್ಕಿಸಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಹುಬ್ಬಳ್ಳಿ

PUB/07/AASP/PRB/SWR/2020-21

PUBLIC NOTICE

My client, Smt. Latha Narayan, W/o Sri. S. Narayan, No.32/1, 18th Cross, Sadashivanagar, Bengaluru-560 080 has transacted to purchase the under mentioned property from its owners, Smt. Latha Srinivasan and Sri K.S. Ekalavya, wife and son of late Sri K.M. Srinivasan, residents of No.475, 10th Main, R.M.V. Extension, Bengaluru-560 080. If anybody have got any claim or interest in respect of the said property, may inform the same to the undersigned within 15 days from the date of this Notice.

SCHEDULE

Property bearing Site No.475, 10th Main, Rajamahal Vilas Extension, Bengaluru, measuring East to West 75 feet and North to South 60 feet, bounded on the:-
East by : Site No. 477,
West by : Site No. 474,
North by : Site Nos. 453 and 452,
South by : Road.

S. KALYAN BASAVARAJ & Dr. PRAJWAL K. ARADHYA
Advocates
C-208, 2nd Floor, Blue Cross Chambers, No. 11, Infantry Road Cross, Bangalore-560 001.
Tel: 080-41265454
Mobile: 94480 85443 / 96325 16869

ಸುಶೀಲ್‌ಚಂದ್ರ ನೂತನ ಮುಖ್ಯ ಚುನಾವಣಾ ಆಯುಕ್ತ

ನವದೆಹಲಿ (ಪಿಟಿಐ): ಪ್ರಸ್ತುತ ಚುನಾವಣಾ ಆಯುಕ್ತರಾಗಿರುವ ಸುಶೀಲ್ ಚಂದ್ರ ಅವರು ಮುಂದಿನ ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ನೇಮಕಗೊಳ್ಳಲಿದ್ದಾರೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ಚುನಾವಣಾ ಆಯೋಗದ ಅತ್ಯಂತ ಹಿರಿಯ ಆಯುಕ್ತರನ್ನೇ ಸಿಇಸಿ ಹುದ್ದೆಗೆ ನೇಮಕ ಮಾಡುವ ಪರಿಪಾಟ ಇದೆ. ಹೀಗಾಗಿ ಸುಶೀಲ್ ಚಂದ್ರ ಅವರನ್ನೆ ಸಿಇಸಿಯನ್ನಾಗಿ ನೇಮಕ ಮಾಡುವುದಕ್ಕೆ ಸರ್ಕಾರ ಹಸಿರುನಿಶಾನೆ ತೋರಿದೆ ಎನ್ನಲಾಗಿದೆ. ಯಾವುದೇ ಸಮಯದಲ್ಲಿ ಈ ಕುರಿತ ಆದೇಶ ಹೊರಬೀಳಲಿದೆ ಎಂದು ಇವೇ ಮೂಲಗಳು ಹೇಳಿವೆ.

ಮುಖ್ಯ ಚುನಾವಣಾ ಆಯುಕ್ತರಾಗಿರುವ ಸುನೀಲ್ ಅರೋರಾ ಅವರ ಅವಧಿ ಏಪ್ರಿಲ್ 13ರಂದು ಮುಗಿಯಲಿದ್ದು, ಅಂದೇ ಸುಶೀಲ್ ಚಂದ್ರ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆ ಇದೆ.

ಬೆಂಗಳೂರಿನಲ್ಲಿ ಹೆಚ್ಚಿದ ಮನೆ ಬೆಲೆ

• ವೀಣಾ ಮಣಿ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮನೆಗಳ ಬೆಲೆಯು 2020–21ರಲ್ಲಿ ಕೂಡ ಏರಿಕೆ ಆಗಿದೆ. 2020–21ನೇ ಸಾಲಿನ ಮೂರನೆಯ ತ್ರೈಮಾಸಿಕದಲ್ಲಿ ಬೆಂಗಳೂರಿನಲ್ಲಿ ಮನೆಗಳ ಬೆಲೆಯಲ್ಲಿ ಶೇಕಡ 5ರಷ್ಟು ಹೆಚ್ಚಳ ಆಗಿದೆ ಎಂಬ ಮಾಹಿತಿ ಆರ್‌ಬಿಐ ನೀಡಿರುವ ಅಂಕಿ–ಅಂಶಗಳಲ್ಲಿ ಇದೆ.

ರಿಯಲ್ ಎಸ್ಟೇಟ್ ವಲಯದಲ್ಲಿನ ಆಸ್ತಿ ಮೌಲ್ಯವು ಹೆಚ್ಚಾಗಿದೆ. ಆದರೆ ಈ ಹೆಚ್ಚಳವು ಹಿಂದಿನ ಕೆಲವು ವರ್ಷಗಳಲ್ಲಿ ಆದ ಹೆಚ್ಚಳದಷ್ಟು ಇಲ್ಲ ಎಂಬುದನ್ನು ಈ ಅಂಕಿ–ಅಂಶಗಳು ವಿವರಿಸುತ್ತವೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಹಿರಿಯ ಶಾಖಾ ಅಧಿಕಾರಿ ಶಾಂತನು ಮಜುಂದಾರ್ ಹೇಳಿದರು.

'ಸಂಪೂರ್ಣವಾಗಿ ಸಿದ್ಧವಾಗಿರುವ ಮನೆಗಳ ಬೆಲೆಯು ಕೋವಿಡ್–19 ಮತ್ತು ಮನೆಯಿಂದಲೇ ಕೆಲಸ ಮಾಡುವ ಸಂಸ್ಕೃತಿಯ ಕಾರಣದಿಂದಾಗಿ ಹೆಚ್ಚಳವಾಗಿದೆ' ಎಂದು ಹೇಳಿದರು.

ದೆಹಲಿಯಲ್ಲಿ ಮನೆಗಳ ಬೆಲೆಯಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡುಬಂದಿದೆ. ಮುಂಬೈನಲ್ಲಿ ಮೊದಲ ಎರಡು ತ್ರೈಮಾಸಿಕಗಳಲ್ಲಿ ಇಳಿಕೆ ಕಂಡುಬಂದರೂ, ಮೂರನೆಯ ತ್ರೈಮಾಸಿಕದಲ್ಲಿ ಬೆಲೆಯಲ್ಲಿ ಏರಿಕೆ ಆಗಿದೆ. ಚೆನ್ನೈನಲ್ಲಿನ ಮನೆಗಳ ಬೆಲೆಯು ಮೊದಲ ಮೂರೂ ತ್ರೈಮಾಸಿಕಗಳಲ್ಲಿ ಇಳಿಕೆ ಕಂಡಿದೆ. 'ಮೂರನೆಯ ತ್ರೈಮಾಸಿಕದ ನಂತರದಲ್ಲಿ ರಿಯಲ್ ಎಸ್ಟೇಟ್ ಉದ್ಯಮವು ಚೇತರಿಕೆಯ ಹಾದಿಗೆ ಬಂದಿದೆ' ಎಂದು ಆರ್‌ಬಿಐ ಹೇಳಿದೆ.

ಅಲರ್ಜಿಯನ್ನು ಹತೋಟಿಯಲ್ಲಿಡಲು ಆಯುರ್ವೇದ ಪ್ರಾಣಪ್ಲಸ್ ಉತ್ಪನ್ನದಿಂದ ಪ್ರಾಕೃತಿಕ ಉಪಶಮನ

ನಿರಂತರ ಸೀನುವಿಕೆ, ಕೆಮ್ಮು, ಶೀತ, ಮೂಗಿನಲ್ಲಿ ತಡೆ ಮತ್ತು ಮೂಗಿನಲ್ಲಿ ನೀರು ಇಳಿಯುವುದು, ಅಲರ್ಜಿಯ ಸಾಮಾನ್ಯ ಲಕ್ಷಣಗಳಾಗಿವೆ. ಅಲರ್ಜಿಯು ಓರ್ವ ವ್ಯಕ್ತಿಯಿಂದ ಇನ್ನೋರ್ವರಿಗೆ ವ್ಯತ್ಯಾಸ ಕಂಡು ಬರುವುದು, ಈ ರೀತಿಯ ಸಮಸ್ಯೆಗಳನ್ನೂ ಎದುರಿಸಲು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಪ್ರತಿಯೊಬ್ಬರ ಮನೆಯಲ್ಲೂ ಆಯುರ್ವೇದ ಉತ್ಪನ್ನ ಪ್ರಾಣ ಪ್ಲಸ್ ಇಟ್ಟುಕೊಳ್ಳಬೇಕು.

- ಶ್ವಾಸನಾಳವನ್ನು ಸ್ವಚ್ಛಗೊಳಿಸುತ್ತದೆ.
- ರೋಗ ಪ್ರತಿರೋಧ ಶಕ್ತಿಯನ್ನು ಹೆಚ್ಚಿಸುತ್ತದೆ.
- ಇತರ ಔಷಧಗಳೊಂದಿಗೂ ಉಪಯೋಗಿಸಬಹುದು.

ಪ್ರಾಣಪ್ಲಸ್ ಆಯುರ್ವೇದ ಔಷಧಿ

ಎಲ್ಲಾ ಆಯುರ್ವೇದಿಕ್ ಹಾಗೂ ಆಲೋಪತಿಕ್ ಔಷಧ ಅಂಗಡಿಗಳಲ್ಲಿ ಲಭ್ಯವಿದೆ.

ಶ್ರೀ ಶ್ರೀ ಶ್ರೀ ಡಾ|| ಮಹರ್ಷಿ ಆನಂದ ಗುರೂಜಿಯವರ ಆಶೀರ್ವಾದದೊಂದಿಗೆ

ಹೊಟ್ಟೆ ನೋವು, ಗ್ಯಾಸ್ ಟ್ರಬಲ್, ಅ್ಯಸಿಡಿಟಿಗೆ ದಿವ್ಯ ಔಷಧಿ ಅಮೃತಬಿಂದು

ಹೊಟ್ಟೆ ನೋವು, ಗ್ಯಾಸ್ ಟ್ರಬಲ್, ಆ್ಯಸಿಡಿಟಿ, ಅಜೀರ್ಣ, ಎದೆಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನು ನೋವು, ಕೆಲಸದಲ್ಲಿ ನಿರಾಸಕ್ತಿ, ಉದರವ್ಯಾಧಿ ಮುಂತಾದ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯ ಕುಟುಂಬದ ಪರಿಣಾಮಕಾರಿ ದಿವ್ಯಔಷಧಿ ಅಮೃತ ಬಿಂದು ಸೇವಿಸಿ.

"ಅಮೃತ ಬಿಂದು"ವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ. ಈ "ಅಮೃತ ಬಿಂದು"ವನ್ನು ಕೇಂದ್ರ ಸರಕಾರದ ಪ್ರಯೋಗಾಲಯದಲ್ಲಿ ಪರಿಣಾಮಕಾರಿಯಾದ ಔಷಧಿಯೆಂದು ಪರೀಕ್ಷಿಸಲಾಗಿದೆ.

ಅಮೃತಬಿಂದು

1 ತಿಂಗಳ ಔಷಧಿ ಕೇವಲ ₹ 240 ಮಾತ್ರ

From the house of A & J Health Care, Bangalore *For a Healthy Society* ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: Ph: 8762226000, 9243112373. aj_healthcare@yahoo.co.in

ರಾಜ್ಯ ಸರ್ಕಾರಕ್ಕೆ ಬ್ರಾಹ್ಮಣ ಸಮುದಾಯದ ಮುಖಂಡರ ಒತ್ತಾಯ • ಸಮುದಾಯದ ವಿವಿಧ ಗಣ್ಯರಿಗೆ ಅಭಿನಂದನೆ

'ಶೇ 10 ರಷ್ಟು ಮೀಸಲಾತಿ: ಶೀಘ್ರ ಅನುಷ್ಠಾನಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರಿಗೆ ಕೇಂದ್ರ ಸರ್ಕಾರವು ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಕಲ್ಪಿಸಿದೆ. ಆದರೆ, ರಾಜ್ಯದಲ್ಲಿ ಈ ಮೀಸಲಾತಿ ಇನ್ನೂ ಅನುಷ್ಠಾನವಾಗದ ಪರಿಣಾಮ ಹಲವರು ಅವಕಾಶ ವಂಚಿತರಾಗಿದ್ದಾರೆ. ಕೂಡಲೇ ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು' ಎಂದು ಬ್ರಾಹ್ಮಣ ಸಮುದಾಯದ ಮುಖಂಡರು ಒತ್ತಾಯಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಮುದಾಯದ ಸಾಧಕರಿಗೆ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿ, 'ಆರ್ಥಿಕವಾಗಿ ಹಿಂದುಳಿದಿರುವ ರಾಜ್ಯದ ಎಲ್ಲ ಸಾಮಾನ್ಯ ನಾಗರಿಕರು ಶಿಕ್ಷಣ, ಉದ್ಯೋಗಗಳಲ್ಲಿ ಕೇಂದ್ರದ ಮಾದರಿಯಲ್ಲೇ ಮೀಸಲಾತಿಯ ಸೌಲಭ್ಯವನ್ನು ಪಡೆಯುವಂತಾಗಬೇಕು. ಹಲವು ರಾಜ್ಯಗಳಲ್ಲಿ ಈಗಾಗಲೇ ಶೇ 10 ರಷ್ಟು ಮೀಸಲಾತಿ ಅನುಷ್ಠಾನವಾಗದೆ. ಆದರೆ, ಇಲ್ಲಿ ರಾಜ್ಯ ಸರ್ಕಾರವು ಅನುಷ್ಠಾನ ಮಾಡದ ಪರಿಣಾಮ ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಕ್ಕಳಿಗೆ ಸಿಗಬೇಕಾದ ಅವಕಾಶಗಳು ಕೈತಪ್ಪಿವೆ. ಹಾಗಾಗಿ, ಬ್ರಾಹ್ಮಣ ಮಹಾಸಭೆಯು ಇದರ ನಾಯಕತ್ವವನ್ನು ವಹಿಸಿಕೊಂಡು, ಸರ್ಕಾರದ ಗಮನ ಸೆಳೆಯಬೇಕು' ಎಂದು ಆಗ್ರಹಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ನಗರದಲ್ಲಿ ಭಾನುವಾರ ಆಯೋಜಿಸಿದ ಅಭಿನಂದನಾ ಸಮಾರಂಭದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಉಪಾಧ್ಯಕ್ಷ ಎಸ್. ದತ್ತಾತ್ರಿ, ಕ್ರೀಡಾ ಕ್ಷೇತ್ರದ ಸಾಧಕ ಕೆ.ವೈ. ವೆಂಕಟೇಶ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ರಾಜೀವ್, ಮೈಸೂರು ಪೇಂಟ್ಸ್ ಆ್ಯಂಡ್ ವಾರ್ನಿಶ್ ಲಿಮಿಟೆಡ್‌ನ ಅಧ್ಯಕ್ಷ ಫಣೀಶ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಸಿ.ಎನ್. ಕಿಶೋರ್ ಅವರಿಗೆ ಸನ್ಮಾನ ಮಾಡಲಾಯಿತು. ಶಾಸಕ ಉದಯ್ ಗರುಡಾಚಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಕೆ.ಎನ್. ವೆಂಕಟನಾರಾಯಣ ಇದ್ದಾರೆ ಪ್ರಜಾವಾಣಿ ಚಿತ್ರ

ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಉಪಾಧ್ಯಕ್ಷ ಎಸ್. ದತ್ತಾತ್ರಿ, 'ಸಮುದಾಯದ ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ಎಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರಿದ್ದಾರೆ. ನಾಗರಿಕ ಸೇವೆ ಸೇರಿದಂತೆ ಉಳಿದ ಕ್ಷೇತ್ರಗಳಲ್ಲಿ ಕೂಡ ಸಾಧನೆ ಮಾಡಬೇಕಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಶೇ 10ರಷ್ಟು ಮೀಸಲಾತಿಯ ಲಾಭ ದೊರೆಯಬೇಕು. ಈ ವರ್ಷದಲ್ಲಿಯೇ ಅದನ್ನು ಸರ್ಕಾರ ಅನುಷ್ಠಾನ ಮಾಡಲು ಕ್ರಮಕೈಗೊಳ್ಳಬೇಕು' ಎಂದರು.

ಮಹಾಸಭೆಯ ಅಧ್ಯಕ್ಷ ಕೆ.ಎನ್. ವೆಂಕಟನಾರಾಯಣ ಮಾತನಾಡಿ, 'ರಾಷ್ಟ್ರದ ಕಲ್ಯಾಣಕ್ಕೆ ಸಮುದಾಯದ ಹಲವರು ಕೊಡುಗೆ ನೀಡಿದ್ದಾರೆ. ತಮ್ಮಲ್ಲಿನ ಪ್ರತಿಭೆಯನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು' ಎಂದರು.

'ಬ್ರಾಹ್ಮಣರು ಒಗ್ಗಟ್ಟಾಗಬೇಕು'

'ಬೇರೆ ಸಮುದಾಯಗಳಿಗೆ ಹೋಲಿಸಿದಲ್ಲಿ ಬ್ರಾಹ್ಮಣ ಸಮುದಾಯದಲ್ಲಿ ಒಗ್ಗಟ್ಟು ಕಡಿಮೆ. ಶೇ 3ರಷ್ಟಿರುವ ಸಮುದಾಯದ ಸದಸ್ಯರು ಬುದ್ಧಿವಂತರಾಗಿದ್ದಾರೆ. ಎಲ್ಲರನ್ನೂ ಪ್ರೀತಿಯಿಂದ ಕಂಡು, ಪ್ರತಿಭಾವಂತರನ್ನು ಪ್ರೋತ್ಸಾಹಿಸಬೇಕು. ಅಸೂಯೆ, ಅಪನಂಬಿಕೆ ಇರಬಾರದು. ಗುಂಡೂರಾವ್ ನಮ್ಮ ಜನಾಂಗಕ್ಕೆ ಹುಲಿಯಂತಿದ್ದರು. ಅವರ ವ್ಯಕ್ತಿತ್ವವನ್ನು ನಾವು ಬೆಳೆಸಿಕೊಳ್ಳಬೇಕು' ಎಂದು ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್ ತಿಳಿಸಿದರು.

ಬಡವಿದ್ಯಾರ್ಥಿಗಳ ಶಿಕ್ಷಣಕ್ಕೆ ₹50 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳು ಮಾತ್ರವಲ್ಲದೆ, ಬಿ.ಇಡಿ, ಕಾನೂನು ಸೇರಿದಂತೆ ವಿವಿಧ ಕೋರ್ಸ್‌ಗಳಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ಡ್ಯಾನಿಷ್ ಎಜುಕೇಷನಲ್ ಟ್ರಸ್ಟ್ ₹50.25 ಲಕ್ಷ ವಿದ್ಯಾರ್ಥಿ ವೇತನ ವಿತರಿಸಿತು.

ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಓದುತ್ತಿರುವ 195ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಟ್ರಸ್ಟ್ ಸಂಸ್ಥಾಪಕಿ ಹುಸ್ನಾ ಝೀಯಾವುಲ್ಲಾ ಶರೀಫ್ ಭಾನುವಾರ ವಿತರಿಸಿದರು.

'ಪ್ರಸ್ತುತ ಸಾಲಿನಲ್ಲಿ ಎಂಬಿಬಿಎಸ್ ಓದುತ್ತಿರುವ 45 ವಿದ್ಯಾರ್ಥಿಗಳಿಗೆ ತಲಾ ₹31 ಸಾವಿರ, ಎಂಜಿನಿಯರಿಂಗ್‌ನ 62 ವಿದ್ಯಾರ್ಥಿಗಳಿಗೆ ತಲಾ ₹ 25 ಸಾವಿರ, ಪದವಿ ವ್ಯಾಸಂಗದ 11 ವಿದ್ಯಾರ್ಥಿಗಳಿಗೆ ತಲಾ ₹30 ಸಾವಿರ, ಬಿ.ಇಡಿ ಓದುತ್ತಿರುವ 43 ವಿದ್ಯಾರ್ಥಿಗಳಿಗೆ ₹15 ಸಾವಿರ, ವಿದೇಶದಲ್ಲಿ ಕಾನೂನು ವ್ಯಾಸಂಗ ಮಾಡುತ್ತಿರುವ ಒಬ್ಬ ವಿದ್ಯಾರ್ಥಿಗೆ ₹1 ಲಕ್ಷ ನೀಡಲಾಯಿತು' ಎಂದು ಹುಸ್ನಾ ಹೇಳಿದರು.

'ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಮತ್ತಷ್ಟು ಅರ್ಹ ವಿದ್ಯಾರ್ಥಿಗಳಿಗೆ ಹಣಕಾಸು ನೆರವು ನೀಡಲು ಉದ್ದೇಶಿಸಲಾಗಿದೆ. ಜತೆಗೆ ಈ ಬಾರಿ ಕೋವಿಡ್ ಕಾರಣದಿಂದಾಗಿ ಚೆಕ್‌ಗಳನ್ನು ವಿತರಣೆ ಮಾಡದೆ, ಎಲ್ಲ ವಿದ್ಯಾರ್ಥಿಗಳ ಬ್ಯಾಂಕಿನ ಖಾತೆಗೆ ಹಣ ಜಮೆ ಮಾಡಲಾಗಿದೆ' ಎಂದರು.

ಉರ್ದು ಕವಿ ಝೀಯಾವುಲ್ಲಾ ಶರೀಫ್, 'ದೇಶದ ಭವಿಷ್ಯ ಶಿಕ್ಷಣದ ಮೇಲೆ ನಿಂತಿದೆ. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪಾಲಕರ ಆದ್ಯ ಕರ್ತವ್ಯ. ಸರ್ಕಾರದ ಎಲ್ಲ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ರೂಪಿಸಬೇಕು' ಎಂದು ಸಲಹೆ ನೀಡಿದರು.

ವಿದ್ಯಾರ್ಥಿನಿಯೊಬ್ಬರಿಗೆ ಹುಸ್ನಾ ಅವರು ವಿದ್ಯಾರ್ಥಿ ವೇತನ ವಿತರಿಸಿದರು. ಝೀಯಾವುಲ್ಲಾ ಶರೀಫ್ ಇದ್ದಾರೆ

ಪ್ರಜಾವಾಣಿ

ಫೋನ್-ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ನಿಯಮ ಮೀರಿ ಟೋಯಿಂಗ್ ಮಾಡಲಾಗುತ್ತಿದೆಯಾ ?
- ಟೋಯಿಂಗ್ ವಾಹನದ ಸಿಬ್ಬಂದಿ ಅನುಚಿತವಾಗಿ ವರ್ತಿಸುತ್ತಿದ್ದಾರಾ ?
- ದಾಖಲೆ ಸರಿ ಇದ್ದರೂ ಪೊಲೀಸರು ದಂಡ ವಿಧಿಸುತ್ತಿದ್ದಾರಾ ?
- ನಿಯಮ ಪಾಲಿಸಿದರೂ ವಾಹನ ಅಡ್ಡಗಟ್ಟಿ ದಂಡ ವಸೂಲಿ ಮಾಡುತ್ತಿದ್ದಾರಾ?
- ಸಂಚಾರ ಪೊಲೀಸರ ಕಾರ್ಯವೈಖರಿ ಬಗ್ಗೆ ದೂರುಗಳು ಇವೆಯಾ?

ನಿಮ್ಮ ಸಮಸ್ಯೆಗಳನ್ನು ಆಲಿಸಲಿದ್ದಾರೆ ಬಿ.ಆರ್. ರವಿಕಾಂತೇಗೌಡ, ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್

ಇಂದು

ಬೆಳಿಗ್ಗೆ 11 ರಿಂದ ಮಧ್ಯಾಹ್ನ 12

ಕರೆಮಾಡಿ 080-4555 7230

facebook LIVE fb.com/prajavani.net

ಸಿಡಿಲು ಬಡಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಮುಂಡಗೋಡ: ತಾಲ್ಲೂಕಿನ ಮೈನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಳೆಕಾರೆ ಗ್ರಾಮದ ಸಮೀಪ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ಸಿಡಿಲು ಬಡಿದು ಭಾನುವಾರ ಸಂಜೆ ಮೃತಪಟ್ಟಿದ್ದಾರೆ.

ಗಾಟು ಬೀರು ಶಿಂಧೆ(31) ಎಂಬುವರೇ ಮೃತಪಟ್ಟವರು.

72198 21111 | www.bajajauto.com | BAJAJ FINANCE LTD - AF

*ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. ಆಫರ್ ಎಪ್ರಿಲ್ 10ರಿಂದ ಎಪ್ರಿಲ್ 20, 2021ರ ವರೆಗೆ ಮಾನ್ಯ. ಮುಂದಾಗಿ ಸೂಚನೆ ನೀಡದೆ ಆಫರನ್ನು ತಿದ್ದುಪಡಿ ಮಾಡುವ ಅಥವಾ ಹಿಂತೆಗೆಯುವ ಅಧಿಕಾರವನ್ನು ಬಜಾಜ್ ಆಟೊ ಕಾದಿರಿಸಿಕೊಂಡಿದೆ. ₹6 782/-ರ ಡೌನ್ ಪೇಮೆಂಟ್ ಸೂಚಕವಾಗಿದೆ ಮತ್ತು ಪ್ಲೆಟಿನಾದ ಒಂದು ವೇರಿಯಂಟ್‌ಗೆ ಅನ್ವಯಿಸುತ್ತದೆ. ಡಿಸಿಸಿ ಚಾರ್ಜ್‌ಗಳು ಮತ್ತು ಪ್ರೊಸೆಸಿಂಗ್ ಫೀಸ್ ಅತಿರಿಕ್ತ. #ಎಕ್ಸ್-ಶೋರೂಮ್ ಬೆಲೆ ಕರ್ನಾಟಕ.

Authorised Dealers for Bajaj Auto Ltd.: Bangalore • **Bommanahalli** AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9900253260• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 7259186162 • **Chandra Layout Moodalapalya** RV BAJAJ: 7353763301 • **Kengeri** RV BAJAJ: 7353763305 • **Giri Nagar** RV BAJAJ: 6361211128• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Mekhri Circle** KALYANI BAJAJ: 8884413595 • **Yelahanka** KALYANI BAJAJ: 9449849618 • **Mathikere** KALYANI BAJAJ: 8884430126 • **Chickbellapur** KALYANI BAJAJ: 8884413594 • **Devenhalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9902934455 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 9620747153 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558** • **Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 7349247162 • **Hiriyur** BTV BAJAJ: Ph: 7349247168 • **Challakere** BTV BAJAJ 8296199371 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** SHREE KAMAKSHI BAJAJ: 9845784351 • **Malur** SHREE KAMAKSHI BAJAJ: 9665524409 • **KGF** SHREE KAMAKSHI BAJAJ: 9900235758 • **Mulbagalu** SHREE KAMAKSHI BAJAJ: 8892616586 • **BANGARAPET** SHREE KAMAKSHI BAJAJ: 8970688361 • **Tumkur** AKSHAYA BAJAJ: 7259040250 • **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 0816-4014516 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9739549252 • **Mandya** POPULAR BAJAJ: 7760967900 • **Chamarajanagara** PATEL BAJAJ: 8722067560 • **Hunsur** STAR BAJAJ: 9916833072 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 7259678777.

ರಾಜಧಾನಿ ಬಿಟ್ಟರೆ ಮಂಡ್ಯ ತಾಲ್ಲೂಕಿನಲ್ಲಿಯೇ ಹೆಚ್ಚು ಮತದಾರರು

ಕಸಾಪ: ಮಂಡ್ಯದತ್ತ ಅಭ್ಯರ್ಥಿಗಳ ಚಿತ್ತ

• ಎಂ.ಎನ್.ಯೋಗೇಶ್

ಮಂಡ್ಯ: ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ದಿನದಿಂದ ದಿನಕ್ಕೆ ರಂಗು ಪಡೆಯುತ್ತಿದ್ದು, ಕೇಂದ್ರ ಸ್ಥಾನಕ್ಕೆ ಸ್ಪರ್ಧಿಸಿರುವ ಸಕಲ ಅಭ್ಯರ್ಥಿಗಳು ಸಕ್ಕರೆ ಜಿಲ್ಲೆಯತ್ತ ಚಿತ್ತ ಹರಿಸಿದ್ದಾರೆ. ಬೆಂಗಳೂರು ನಗರ ಜಿಲ್ಲೆ ನಂತರ ಮಂಡ್ಯ ಜಿಲ್ಲೆ ಅತಿ ಹೆಚ್ಚು ಮತದಾರರನ್ನು ಹೊಂದಿದ್ದು, ಅಭ್ಯರ್ಥಿಗಳು ಈ ಕಡೆ ಪ್ರಯಾಣ ಬೆಳೆಸುತ್ತಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯು 27 ವಿಧಾನಸಭಾ ಕ್ಷೇತ್ರ ಹಾಗೂ ಆನೇಕಲ್ ತಾಲ್ಲೂಕು ಸೇರಿ ಒಟ್ಟು 36,389 ಮತದಾರರನ್ನು ಹೊಂದಿದೆ. ಇದು ರಾಜ್ಯದಲ್ಲಿ ಅಧಿಕ. ನಂತರದ ಸ್ಥಾನದಲ್ಲಿರುವ ಮಂಡ್ಯ ಜಿಲ್ಲೆಯಲ್ಲಿ 24,207 ಮತದಾರರಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಅತಿ ಕಡಿಮೆ 1,984 ಮತದಾರರು ಇದ್ದಾರೆ.

ಮಂಡ್ಯ ತಾಲ್ಲೂಕಿನಲ್ಲೇ 11,623 ಮತದಾರರಿದ್ದು, ರಾಜ್ಯದಲ್ಲಿ ಅತಿ ಹೆಚ್ಚು ಮತದಾರರನ್ನು ಹೊಂದಿದ ತಾಲ್ಲೂಕು ಎನಿಸಿದೆ. ಹೀಗಾಗಿ, ಕಸಾಪ ಕೇಂದ್ರ ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಪ್ರಚಾರಕ್ಕಾಗಿ ಮಂಡ್ಯಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆ.

ಕಸಾಪ ಚುನಾವಣೆಗೆ ಸಂಬಂಧಿಸಿದಂತೆ ಸಭೆ, ಸಮಾರಂಭ ಸಾಮಾನ್ಯವಾಗಿವೆ. ಬಹುತೇಕ ಮಂದಿ ಅಭ್ಯರ್ಥಿಗಳು ಈಗಾಗಲೇ ಮಂಡ್ಯಕ್ಕೆ ಬಂದು ಮತಯಾಚನೆ ಮಾಡಿದ್ದಾರೆ. ಸಾಹಿತಿಗಳು, ಹೋರಾಟಗಾರರು, ಸಂಘ ಸಂಸ್ಥೆಗಳ ಪದಾಧಿಕಾರಿಗಳ ಭೇಟಿ ನಿರಂತರವಾಗಿ ನಡೆಯುತ್ತಿವೆ. ಜೊತೆಗೆ ಹೋಟೆಲ್, ಢಾಬಾಗಳಲ್ಲಿ ಪಾರ್ಟಿಗಳು ಕೂಡ ಭರ್ಜರಿಯಾಗಿ ನಡೆಯುತ್ತಿವೆ.

ಮುಖ್ಯಾಂಶಗಳು

- ಮಂಡ್ಯದಲ್ಲಿ ನಿತ್ಯ ಸಭೆ, ಪತ್ರಿಕಾಗೋಷ್ಠಿ
- ಮತದಾರರ ಸಂಖ್ಯೆಯ ಮೇಲೆ ಅನುಮಾನ
- ಹೋಟೆಲ್, ಡಾಬಾಗಳಲ್ಲಿ ಭರ್ಜರಿ ಪಾರ್ಟಿ

'ಇಷ್ಟೊಂದು ಅಬ್ಬರದಿಂದ ಯಾವ ವರ್ಷವೂ ಕಸಾಪ ಚುನಾವಣೆ ನಡೆದಿರಲಿಲ್ಲ. ಪದಾಧಿಕಾರಿಗಳ ಅವಧಿಯನ್ನು 3 ವರ್ಷದಿಂದ 5 ವರ್ಷಕ್ಕೆ ಹೆಚ್ಚಳ ಮಾಡಿದ್ದೇ ಇದಕ್ಕೆ ಕಾರಣ. ಎಂಎಲ್‌ಎ ಚುನಾವಣೆಗೆ ನಿಂತವರಂತೆ ಪ್ರಚಾರ ಮಾಡುತ್ತಿದ್ದಾರೆ, ಹಣ ಚೆಲ್ಲುತ್ತಿದ್ದಾರೆ. ಅವರಲ್ಲಿ ಎಷ್ಟು ಜನ ನಿಜವಾದ ಸಾಹಿತಿಗಳು ಎಂಬುದೇ ಅನುಮಾನ' ಎಂದು ಸಾಹಿತಿ ಜಿ.ಟಿ. ವೀರಪ್ಪ ಹೇಳಿದರು.

ಸಂಖ್ಯೆ ಬಗ್ಗೆ ಅನುಮಾನ: ಮಂಡ್ಯ ತಾಲ್ಲೂಕಿನಲ್ಲಿ ಹೆಚ್ಚು ಮತದಾರರು ಇರುವುದಕ್ಕೂ ಅನುಮಾನ ವ್ಯಕ್ತವಾಗಿದೆ. ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನದ ಸ್ಪರ್ಧಾಕಾಂಕ್ಷಿಗಳು ಸ್ವಂತ ಹಣ ಪಾವತಿಸಿ ಸಿಕ್ಕಸಿಕ್ಕವರಿಗೆ ಸದಸ್ಯತ್ವ ಕೊಡಿಸಿದ್ದಾರೆ. ಈ ಕಾರಣದಿಂದ ಮತದಾರರ ಸಂಖ್ಯೆ ಹೆಚ್ಚಾಗಿದೆ ಎಂಬ ಆರೋಪವಿದೆ.

'ಕಬ್ಬು ಕಡಿಯುವವರು, ಕೂಲಿ ಕೆಲಸ ಮಾಡುವವರು, ಅನಕ್ಷರಸ್ಥರಿಗೂ ಸದಸ್ಯತ್ವ ಕೊಡಿಸಲಾಗಿದೆ. ಆ ಮೂಲಕ ಕಸಾಪ ಬೈಲಾ ಉಲ್ಲಂಘನೆ ಮಾಡಲಾಗಿದೆ. ಈ ಕುರಿತು ತನಿಖೆ ನಡೆಸಬೇಕು' ಎಂದು ಯುವ ಸಾಹಿತಿಯೊಬ್ಬರು ಒತ್ತಾಯಿಸಿದರು.

'ಕನ್ನಡ ಓದಲು, ಬರೆಯಲು ಗೊತ್ತಿರುವ ಎಲ್ಲರೂ ಕಸಾಪ ಸದಸ್ಯತ್ವ ಪಡೆಯಬಹುದು. ರೈತರು, ಕೂಲಿ ಕಾರ್ಮಿಕರು ಸದಸ್ಯತ್ವ ಪಡೆಯಬಾರದು ಎಂಬ ವಾದದಲ್ಲಿ ಅರ್ಥವಿಲ್ಲ' ಎಂದು ಜಿಲ್ಲಾ ಘಟಕಕ್ಕೆ 2ನೇ ಬಾರಿ ಸ್ಪರ್ಧಿಸಿರುವ ಹಾಲಿ ಅಧ್ಯಕ್ಷ ರವಿಕುಮಾರ್ ಚಾಮಲಾಪುರ ಹೇಳಿದರು.

ಜಿಲ್ಲಾವಾರು ಮತದಾರರ ವಿವರ

ಜಿಲ್ಲೆ	ಮತದಾರರು
ಬೆಂಗಳೂರು ನಗರ	36,389
ಮಂಡ್ಯ	24,207
ಕಲಬುರ್ಗಿ	16,619
ಬೆಳಗಾವಿ	15,776
ಬಳ್ಳಾರಿ	15,110
ಮೈಸೂರು	13,383
ಹಾಸನ	13,314
ಬೀದರ್	12,838
ತುಮಕೂರು	12,552
ದಾವಣಗೆರೆ	10,825
ಕೋಲಾರ	10,042
ವಿಜಯಪುರ	9,748
ರಾಮನಗರ	9,679
ಶಿವಮೊಗ್ಗ	9,181
ಕೊಪ್ಪಳ	8,950
ಬಾಗಲಕೋಟೆ	8,774
ಹಾವೇರಿ	8,493
ಚಿಕ್ಕಮಗಳೂರು	8,017
ಗ್ರಾಮಾಂತರ ಜಿಲ್ಲೆ	7,418
ಚಿಕ್ಕಬಳ್ಳಾಪುರ	6,828
ಚಿತ್ರದುರ್ಗ	6,759
ರಾಯಚೂರು	6,092
ಗದಗ	6,001
ಧಾರವಾಡ	5,201
ಯಾದಗಿರಿ	4,874
ಚಾಮರಾಜನಗರ	4,830
ದಕ್ಷಿಣ ಕನ್ನಡ	4,556
ಉತ್ತರ ಕನ್ನಡ	4,751
ಕೊಡಗು	2,429
ಉಡುಪಿ	1,984
ಹೊರನಾಡು, ಇತರೆ	4,877
ಒಟ್ಟು ಮತದಾರರು	3,10,520

ಸುದ್ದಿ 2 ನಿಮಿಷ

ರಸಗೊಬ್ಬರ ದರ; ಇಂದು ಸಭೆ

ಕಲಬುರ್ಗಿ: 'ರಸಗೊಬ್ಬರ ದರ ಹೆಚ್ಚಿದ ಕಾರಣ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದಗೌಡ ಅವರ ನೇತೃತ್ವದಲ್ಲಿ ಸೋಮವಾರ (ಏ.12) ಸಭೆ ನಡೆಯಲಿದ್ದು, ಅದರಲ್ಲಿ ಪರಿಹಾರ ದೊರಕುವ ವಿಶ್ವಾಸವಿದೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

'ರಸಗೊಬ್ಬರ ಉತ್ಪಾದನೆಗೆ ಬೇಕಾಗುವ ಫಾಸ್ಪರಿಕ್ ಆ್ಯಸಿಡ್ ದರ ಪ್ರತಿ ಬ್ಯಾರೆಲ್‌ಗೆ ₹ 400 ದಿಂದ ₹ 700 ಡಾಲರ್‌ಗೆ ಹೆಚ್ಚಳವಾಗಿದೆ. ಅಲ್ಲದೇ, ಪಾಶ್ಚಿಮಾತ್ಯ ದೇಶಗಳಿಂದ ಅಮದಾಗುವ ಕಚ್ಚಾ ವಸ್ತುಗಳ ದರ ದಿಢೀರ್ ಹೆಚ್ಚಳಗೊಂಡ ಕಾರಣ ದೇಶದಲ್ಲಿ ರಸಗೊಬ್ಬರ ದರ ಹೆಚ್ಚಳವಾಗಿದೆ' ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ಈಗಾಗಲೇ ಕೃಷಿ ಚಟುವಟಿಕೆಗಳು ಮುಗಿದಿದ್ದು, ಗೊಬ್ಬರಕ್ಕೆ ಬೇಡಿಕೆ ಕಡಿಮೆಯಾಗಬಹುದು. ಹೀಗಾಗಿ ಕಡಿಮೆ ದರದಲ್ಲಿ ಸಿಗುವ ಗೊಬ್ಬರ ಆಮದು ಮಾಡಿಕೊಳ್ಳುವ ಬಗ್ಗೆ ಚರ್ಚಿಸಲಾಗುವುದು' ಎಂದು ಕೇಂದ್ರ ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದಗೌಡ ತಿಳಿಸಿದರು.

'ಬಿಜೆಪಿ ಸರ್ಕಾರದಿಂದ ರೈತರ ಬೆನ್ನಿಗೆ ಚೂರಿ'

ಬೆಂಗಳೂರು: 'ರಸಗೊಬ್ಬರ ದರ ಹೆಚ್ಚಳ ಮಾಡುವ ಮೂಲಕ ಬಿಜೆಪಿ ಸರ್ಕಾರ ರೈತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಹಿಂದೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ಗಂಟೆಗಳಲ್ಲಿ ರೈತರ ಮೇಲೆ ಗೋಲಿಬಾರ್ ನಡೆಸಿತ್ತು. ಈಗ ರಸಗೊಬ್ಬರದ ದರವನ್ನು ಶೇಕಡ 60ರಷ್ಟು ಹೆಚ್ಚಳ ಮಾಡಿದೆ. ಈಗ ಕೇಂದ್ರದ ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡರು ರಸಗೊಬ್ಬರ ಕಂಪನಿಗಳ ಪ್ರತಿನಿಧಿಗಳ ಜತೆ ಸಭೆ ನಡೆಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಬಾರದು' ಎಂದು ಟೀಕಿಸಿದ್ದಾರೆ.

'ರಸಗೊಬ್ಬರಕ್ಕೆ ನೀಡುತ್ತಿದ್ದ ಸಬ್ಸಿಡಿಯಲ್ಲಿ ಶೇ 50ರಷ್ಟು ಕಡಿತ ಮಾಡಲಾಗಿದೆ. ಈಗ ಸದಾನಂದಗೌಡರು ಪ್ರಧಾನಿ ನರೇಂದ್ರ ಮೋದಿ ಜತೆ ಮಾತನಾಡಿ ರಸಗೊಬ್ಬರ ಸಬ್ಸಿಡಿಗಾಗಿ ₹ 1.5 ಲಕ್ಷ ಕೋಟಿ ಅನುದಾನ ಕೊಡಿಸಬೇಕು. ಬಾಯಿ ಮಾತಿನಿಂದ ರೈತರ ಬಾಳು ಬೆಳಗಲು ಸಾಧ್ಯವಿಲ್ಲ. ಇನ್ನಾದರೂ ರೈತರಿಗೆ ಸಹನೀಯ ಬದುಕು ಕಟ್ಟಿಕೊಳ್ಳಲು ಅವಕಾಶ ಕೊಡಿ. ರಸಗೊಬ್ಬರದ ದರ ಹೆಚ್ಚಳವನ್ನು ವಾಪಸ್ ಪಡೆಯಿರಿ' ಎಂದು ಆಗ್ರಹಿಸಿದ್ದಾರೆ.

'ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಏನಾಯಿತು?'

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): 'ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಜೊತೆಗೂಡಿ ಕಟ್ಟಿದ ಸಂಗೊಳ್ಳಿರಾಯಣ್ಣ ಬ್ರಿಗೇಡ್ ಏನಾಯಿತು? ನಾನು ಬೂಟಾಟಿಕೆಗಾಗಿ ಹೋರಾಟ ಮತ್ತು ರಾಜಕಾರಣ ಮಾಡಲ್ಲ. ನನ್ನ ಜೀವ ಇರುವವರಿಗೂ ಮೀಸಲಾತಿ ಪರವಾಗಿಯೇ ಹೋರಾಟ ಮಾಡುವೆ' ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ತಿಳಿಸಿದರು.

'ಸುಳ್ಳು ಹೇಳುವ ಮನುಷ್ಯ ನಾನಲ್ಲ. ಈ ಬಗ್ಗೆ ಯಡಿಯೂರಪ್ಪ, ಈಶ್ವರಪ್ಪ ಚರ್ಚೆಗೆ ಬರಲಿ. ವಿರೂಪಾಕ್ಷಪ್ಪ ಬಂದರೂ ಪರವಾಗಿಲ್ಲ. ಸತ್ಯ ಹೇಳುವುದಕ್ಕೆ ಎಂದಿಗೂ ಹೆದರಬಾರದು' ಎಂದು ಅವರು ತಿಳಿಸಿದರು.

'ಸ್ವಾತಂತ್ರ್ಯ ಪೂರ್ವದಿಂದಲೂ ಕಾಂಗ್ರೆಸ್ ಪಕ್ಷ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಹಿತರಕ್ಷಣೆಯೊಂದಿಗೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿದು ಮೀಸಲಾತಿ ಕಾಪಾಡುತ್ತಿದೆ. ಆದರೆ, ಮೀಸಲಾತಿ ವಿರೋಧಿಯಾದ ಬಿಜೆಪಿ ಸಾಮಾಜಿಕ ನ್ಯಾಯದ ಪರವಾಗಿ ಇರುವ ಒಂದೇ ಒಂದು ನಿದರ್ಶನ ತೋರಿಸಿದರೆ ರಾಜಕೀಯ ನಿವೃತ್ತಿ ಪಡೆಯುವೆ' ಎಂದು ಅವರು ಸವಾಲು ಹಾಕಿದರು.

'ಬಿಜೆಪಿ ಅಭ್ಯರ್ಥಿ ಸೋಲಿನ ಭಯದಿಂದ ಆ ಪಕ್ಷದವರು ಮಸ್ಕಿ ವಿಧಾನಸಭಾ ಕ್ಷೇತ್ರದ ತುಂಬಾ ಮನೆ ಮನೆಗೆ ತೆರಳಿ ಜನರಿಗೆ ಹಣ ಹಂಚಿಕೆ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಕೊಪ್ಪಳದ ಕಿಷ್ಕಿಂದಾ ಪ್ರದೇಶದ ಅಂಜನಾದ್ರಿಯೇ ಜನ್ಮಭೂಮಿ

ಆಂಜನೇಯ ಜನ್ಮಸ್ಥಳ ವಿವಾದ: ಇತಿಹಾಸ ತಜ್ಞರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಆನೆಗೊಂದಿ ಸಮೀಪದ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ ಎಂದು ಜಿಲ್ಲೆಯ ಮತ್ತು ದೇಶದ ಇತಿಹಾಸ ತಜ್ಞರು ವಾದ ಮಂಡಿಸಿದ್ದಾರೆ.

'ತಿರುಪತಿ ತಿರುಮಲದ ವೆಂಕಟೇಶ್ವರ ದೇವಸ್ಥಾನದಲ್ಲಿ ಯುಗಾದಿ ಮುನ್ನಾದಿನದಂದು ಸಾಕ್ಷ್ಯ (ಮಳೆ, ರಾಶಿ ಭವಿಷ್ಯ) ನುಡಿಯುವ ಕಾರ್ಯಕ್ರಮ ಜರುಗುತ್ತದೆ. ಇಲ್ಲಿ ಆಂಜನೇಯ ಜನಿಸಿದ್ದು, ತಿರುಮಲದ ಅಂಜನಾದ್ರಿ ಎಂಬ ಹೇಳಿಕೆ ನೀಡಿದೆ' ಎಂದು ತಜ್ಞರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಇಲ್ಲಿರುವ ಅಂಜನಾದ್ರಿ, ಹನುಮನಹಳ್ಳಿ, ಕಿಷ್ಕಿಂದಾ ಪರ್ವತ, ವಾಲಿ ಕಿಲ್ಲಾ, ಶಬರಿ ಗುಡ್ಡ, ಸೀತಾ ಮಾತೆಯ ಮಂದಿರ, ರಾಮ-ಲಕ್ಷ್ಮಣರು ಭೇಟಿ ನೀಡಿದ ಕುರುಹು, ವಾಲ್ಮೀಕಿ ರಾಮಾಯಣ, ಶ್ರೀರಾಮ ಚರಿತ ಮಾನಸ ಸೇರಿ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಹನುಮ ಉದಯಿಸಿದ ನಾಡು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಎಂಬ ನಿರ್ಧಾರಕ್ಕೆ ಬರಲಾಗಿದೆ' ಎಂದು ಅವರು ಹೇಳುತ್ತಾರೆ.

'ಆನೆಗೊಂದಿ ಸಮೀಪದ ಅಂಜನಹಳ್ಳಿ, ಹನುಮನಹಳ್ಳಿ, ಅಂಜನಾದ್ರಿ ಹನುಮಂತ ಜನಿಸಿರುವುದಕ್ಕೆ ಇಂದಿಗೂ ಪುರಾವೆ ನೀಡುತ್ತವೆ. ಬ್ರಿಟಿಷ್ ಇತಿಹಾಸಕಾರರಿಂದ ಹಿಡಿದು ದೇಶದ ಇತಿಹಾಸ ತಜ್ಞರು ಕಿಷ್ಕಿಂದಾ ಪ್ರದೇಶದ ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳ ಎಂದು ಸಾರಿದ್ದಾರೆ. ಅಲ್ಲದೆ, ಈ ಭಾಗದಲ್ಲಿ ಅಂಜನಾದೇವಿ, ಆಂಜನೇಯ, ಹನುಮಂತ ಎಂಬ ಹೆಸರು ಇಟ್ಟುಕೊಂಡವರು ಲಕ್ಷ ಸಂಖ್ಯೆಯಲ್ಲಿ ಸಿಗುತ್ತಾರೆ' ಎಂದು ಸಾಹಿತಿ ಪ್ರೊ.ಎಚ್.ಎಸ್.ಪಾಟೀಲ ಹೇಳುತ್ತಾರೆ.

ನಿಧನ ವಾರ್ತೆ

ತೋಟಯ್ಯ ಸ್ವಾಮಿ

ಮರಿಯಮ್ಮನಹಳ್ಳಿ (ಬಳ್ಳಾರಿ): ರಂಗಭೂಮಿಯ ಸಂಗೀತ ನಿರ್ದೇಶಕ, ಡಣಾಯಕನಕೆರೆ ಗ್ರಾಮದ ಡಿ.ಎಂ. ತೋಟಯ್ಯಸ್ವಾಮಿ(88) ಭಾನುವಾರ ನಿಧನರಾದರು.

ಅವರಿಗೆ ಪುತ್ರ, ಐವರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ಸಂಜೆ ನಡೆಯಿತು.

ಆರು ದಶಕಗಳಿಗೂ ಹೆಚ್ಚು ಕಾಲ ಸಂಗೀತ ನಿರ್ದೇಶನದಲ್ಲಿ ತೊಡಗಿಸಿಕೊಂಡಿದ್ದ ತೋಟಯ್ಯಸ್ವಾಮಿ, 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ', 'ರಕ್ತರಾತ್ರಿ' ಸೇರಿದಂತೆ ಸಾವಿರಾರು ಪೌರಾಣಿಕ, ಐತಿಹಾಸಿಕ,ಸಾಮಾಜಿಕ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದರು.

ಹಾರ್ಮೋನಿಯಂ, ಕ್ಯಾಷಿಯೊ, ದಿಲ್‌ರುಬಾ ನುಡಿಸುವುದರಲ್ಲಿ ಹೆಸರುವಾಸಿ, ಕರ್ನಾಟಕ ನಾಟಕ ಅಕಾಡೆಮಿ, ಟಿ.ಪಿ.ಕೈಲಾಸಂ ಪ್ರಶಸ್ತಿ ಪಡೆದಿದ್ದರು.

ತಾಪಮಾನ ಹೆಚ್ಚಳ: ಒಂಬತ್ತು ಜಿಲ್ಲೆಗಳಲ್ಲಿ ಕಚೇರಿ ಅವಧಿ ಬದಲಾವಣೆ

ಬೆಂಗಳೂರು: ಬಿಸಿಲಿನಿಂದಾಗಿ ತಾಪಮಾನದಲ್ಲಿ ತೀವ್ರ ಹೆಚ್ಚಳವಾಗಿರುವುದರಿಂದ ಕಲಬುರ್ಗಿ ಮತ್ತು ಬೆಳಗಾವಿ ವಿಭಾಗಗಳ ಒಂಬತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಮೇ ಅಂತ್ಯದವರೆಗೂ ಸರ್ಕಾರಿ ಕಚೇರಿಗಳ ಕೆಲಸದ ಅವಧಿಯನ್ನು ಬದಲಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಭಾನುವಾರ ಆದೇಶ ಹೊರಡಿಸಿದೆ.

ಕಲಬುರ್ಗಿ ವಿಭಾಗದ ಎಲ್ಲ ಏಳು ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿಗಳ ಕೆಲಸದ ಸಮಯವನ್ನು ಬೆಳಿಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ಬದಲಾವಣೆ ಮಾಡಲಾಗಿದೆ. ಸೋಮವಾರದಿಂದಲೇ ಇದು ಅನ್ವಯವಾಗಲಿದೆ. ಮೇ ಅಂತ್ಯದವರೆಗೂ ಇದು ಜಾರಿಯಲ್ಲಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಕಚೇರಿ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಕರ್ತವ್ಯ ನಿರ್ವಹಿಸಬೇಕು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೋವಿಡ್ ಸೇರಿದಂತೆ ವಿಶೇಷ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಿದಾಗ ಸಮಯ ಬದಲಾವಣೆಯ ಆದೇಶ ಅನ್ವಯವಾಗುವುದಿಲ್ಲ ಎಂದು ಇಲಾಖೆ ತಿಳಿಸಿದೆ.

ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ., ರಾಯಚೂರು

ಕ್ರ.ಸಂ:ಆರ್‌ಡಿಸಿಸಿ: ಪ್ರಕಾ/ಇ.ಟಿ/80/2020–21 ದಿನಾಂಕ: 09.04.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

Indent No. DOC/2020-21/IND135 ಮತ್ತು Indent No. DOC/2020-21/IND136

ಉಲ್ಲೇಖಿತ Indent No. DOC/2020-21/IND135 ಮತ್ತು Indent No. DOC/2020-21/IND136ರ ಮೂಲಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ) ರಾಯಚೂರು ಇವರು ಈ ಕೆಳಕಂಡ ಪೂರೈಕೆಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ, ಟೆಂಡರ್ ವಿವರಗಳು ಇಂತಿವೆ:

ಇಂಡೆಂಟ್ ಸಂಖ್ಯೆ	ಪೂರೈಸಬೇಕಾದ ವಿವರಗಳು	ಟೆಂಡರ್ ಶೆಡ್ಯೂಲ್
Indent No. DOC/2020-21/IND135	Supply and installation of MICRO ATM Machines.	ಇ–ಟೆಂಡರ್ ಪ್ರಾರಂಭ ದಿನಾಂಕ : 09-04-2021. ಇ–ಟೆಂಡರ್ ಸಲ್ಲಿಸಲು ಕೊನೆಯ : 10-05-2021. ದಿನಾಂಕ
Indent No. DOC/2020-21/IND136	Providing & Fixing of Fire-Resistant Record Cabinet (with rail and without rail) and File Cabinet to Record Room at Raichur District Central Co-Operative Bank Ltd, Raichur.	ಇ–ಟೆಂಡರ್ ಪ್ರಾರಂಭ ದಿನಾಂಕ : 09-04-2021. ಇ–ಟೆಂಡರ್ ಸಲ್ಲಿಸಲು ಕೊನೆಯ : 23-04-2021 ದಿನಾಂಕ

ಪೂರೈಕೆದಾರರು ಆನ್‌ಲೈನ್ ಮುಖಾಂತರ e-Procurement ಪೋರ್ಟಲ್‌ನಲ್ಲಿ ಪ್ರಕಟಿಸಿದ ನಿಗದಿತ ದಿನಾಂಕದೊಳಗೆ ಟೆಂಡರ್‌ನ್ನು ಸಲ್ಲಿಸತಕ್ಕದ್ದು ಮತ್ತು ಹೆಚ್ಚಿನ ವಿವರಗಳಿಗಾಗಿ http://eproc.karnataka.gov.inರ ಪೋರ್ಟಲ್‌ನಿಂದ ಟೆಂಡರ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.

ಸಹಿ/- ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಅರ್.ಡಿ.ಸಿ.ಸಿ ಬ್ಯಾಂಕ್ ನಿ.,ರಾಯಚೂರು.

ಒಳನೋಟ

ಬೆಂಗಳೂರು: 'ಅನ್ನಭಾಗ್ಯಕ್ಕಿಲ್ಲ ಕಣ್ಗಾವಲು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಏ.11) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಒಳಗಳ್ಳರ ಮೇಲೆ ಕಣ್ಣಿಡಿ

ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿ, ರೈಸ್‌ಮಿಲ್‌ಗೆ ಮಾರುವ ಮೂಲಕ ಬಡವರಿಗೆ ಮೋಸ ಮಾಡುತ್ತಿದ್ದಾರೆ. ಈ ರೀತಿ ಅಕ್ರಮ ದಾಸ್ತಾನು ಮಾಡಿರುವ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಗೋದಾಮುಗಳಲ್ಲಿ ಸಿಸಿಟಿವಿ ಕ್ಯಾಮೆರಾ ಹಾಗೂ ವಿತರಣಾ ವಾಹನಗಳಲ್ಲಿ ಜಿಪಿಎಸ್ ಅಳವಡಿಸುವ ಮೂಲಕ ಕಣ್ಗಾವಲು ಇಡಬೇಕು.

ತಾಯಪ್ಪ, ಬಳ್ಳಾರಿ

ಭ್ರಷ್ಟಚಾರ ಸರಿಯಲ್ಲ

ಬಿಪಿಎಲ್ ಕಾರ್ಡ್ ಹೊಂದಿರುವವರು ಸರ್ಕಾರ ಕೊಡುವ ಪಡಿತರಕ್ಕೆ ಕಾದು ಕೂರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರೊನಾ ಕಾರಣದಿಂದ ಬಡವರಿಗೆ ಕೆಲಸ ಇಲ್ಲವಾಗಿದೆ. ಇವರಿಗೆ ಸರ್ಕಾರ ವಿತರಿಸುವ ಅಕ್ಕಿ, ಗೋಧಿ, ರಾಗಿ ಹಾಗೂ ಇನ್ನಿತರ ದಿನಸಿಯೇ ಆಧಾರ. ಇಂತಹ ಪರಿಸ್ಥಿತಿಯಲ್ಲೂ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿರುವುದು ಸರಿಯಲ್ಲ.

ಅಕ್ಕಿ ಗೋದಾಮಿಗೆ ಕನ್ನ

ಪಡಿತರ ವ್ಯವಸ್ಥೆಯ ಮೇಲೆ ಹದ್ದಿನ ಕಣ್ಣಿಡಬೇಕು.

ಚೈತ್ರಾ, ಮೈಸೂರು

ಲಾರಿಗಳಿಗೆ ಜಿಪಿಎಸ್ ಹಾಕಿ

ಅನ್ನಭಾಗ್ಯ ಯೋಜನೆಯ ಭ್ರಷ್ಟ ಸ್ಥಿತಿ ಅರಿಯಲು 'ಪಡಿತರ ವಿತರಿಸುವ ಲಾರಿಗಳಲ್ಲಿ ಜಿಪಿಎಸ್ ಹಾಗೂ ಗೋದಾಮುಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಪ್ರಸ್ತಾವ ಹಲವಾರು ವರ್ಷಗಳಿಂದ ಇದ್ದರೂ ಅನುದಾನವಿಲ್ಲದೆ, ಹಾಗೇ ಉಳಿದಿದೆ' ಎನ್ನುವ ಆಹಾರ ಇಲಾಖೆಯ ಆಯುಕ್ತರ ಹೇಳಿಕೆಯೇ ಸಾಕು. ಬೇಡದ ವಿಚಾರಗಳಿಗೆ ಅನಗತ್ಯವಾಗಿ ಕೋಟಿಗಟ್ಟಲೆ ಅನುದಾನ ನೀಡಲು ಸಾಧ್ಯವಿರುವಾಗ ತಿನ್ನುವ ಆಹಾರದ ವಿಚಾರದಲ್ಲಿ ಹಿಂದೇಟು ಹಾಕಿರುವ ಸರ್ಕಾರದ ನಡೆಯನ್ನು ಸೂಕ್ಷ್ಮವಾಗಿ ಅರಿಯಬೇಕು.

ಭೀಮಣ್ಣ, ಬಾಗಲಕೋಟೆ

ಅನುದಾನ ಕೊರತೆ ಹೆಸರಲ್ಲಿ ಅಕ್ರಮ

ಪಡಿತರ ವಿತರಣೆಗೆ ಎಂದು ಅಕ್ಕಿ ತುಂಬಿ ಹೊರಡುವ ಲಾರಿಗಳು ಉಗ್ರಾಣ ತಲುಪುವ ಲೆಕ್ಕವಿದೆ. ಆದರೆ, ಅಕ್ಕಿ ಅಲ್ಲಿಗೆ ತಲುಪಿರುವ ಖಾತರಿ ಇಲ್ಲ ಎಂಬ ವಿಚಾರ ಅಚ್ಚರಿ ಮೂಡಿಸಿದೆ. ಇಂತಹ ಲೋಪಗಳ ತಡೆಗೆ ಅನುದಾನವಿಲ್ಲ ಎಂಬ ಹೇಳಿಕೆ ಆಘಾತ ತರಿಸಿದೆ. ಅನುದಾನದ ಕೊರತೆಯನ್ನೇ ನೆಪ ಮಾಡಿಕೊಂಡು ಅಕ್ರಮಕ್ಕೆ ದಾರಿ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ಅಕ್ರಮಗಳನ್ನೂ ತಡೆಯಬೇಕಿದೆ.

ಕೃಷ್ಣ, ಮಂಡ್ಯ

ಹಸಿದವನಿಗಿಲ್ಲ ಅನ್ನಭಾಗ್ಯ

ಧನ ದಾಹದಲ್ಲಿರುವ ಅಧಿಕಾರಿಗಳಿಂದ ಅನ್ನಭಾಗ್ಯ ಯೋಜನೆಯ ಆಹಾರ ಧಾನ್ಯಗಳು ಕಳ್ಳಸಾಗಣೆಯಾಗದಿರಲು ಸಾಧ್ಯವೇ? ಹಳ್ಳಿಗಳಲ್ಲಿ ವಿತರಣೆಯಾಗುವ ವೇಳೆಯೂ ಅಲ್ಲಿನ ಸಿಬ್ಬಂದಿ ದರ್ಪ ಮೆರೆಯುತ್ತಾರೆ. ಹಸಿದವರಿಗೆ ಸಿಗದ ಅನ್ನಭಾಗ್ಯ ಯೋಜನೆಯ ಪಡಿತರ, ಹೊಟ್ಟೆ ತುಂಬಿಸಿಕೊಂಡಿರುವ ಭ್ರಷ್ಟರ ಪಾಲಾಗುತ್ತಿದೆ. ಪಡಿತರ ವ್ಯವಸ್ಥೆಯ ಭ್ರಷ್ಟಾಚಾರ ಬೇರುಮಟ್ಟದವರೆಗೂ ಇದ್ದು, ಕೆಟ್ಟಿರುವ ವ್ಯವಸ್ಥೆಯನ್ನು ಪೂರ್ಣವಾಗಿ ಸರಿಪಡಿಸಬೇಕು.

ಅಶೋಕ್, ಹಾಸನ

ಬಡವರ ಅನ್ನಕ್ಕೂ ಕನ್ನ

ಬಡವರಿಗೆಂದೇ ಮೀಸಲಿರುವ ಪಡಿತರವನ್ನು ಅಕ್ರಮವಾಗಿ ಮಾರಾಟ ಮಾಡುವ ಮೂಲಕ ಬಡವರ ಅನ್ನಕ್ಕೂ ಕನ್ನ ಹಾಕಿದ್ದಾರೆ. ಭ್ರಷ್ಟರಾಗಿರುವ ಅಧಿಕಾರಿಗಳು ಇದನ್ನೇ ವ್ಯಾಪಾರ ಮಾಡಿಕೊಂಡಿದ್ದಾರೆ. ಈ ಅಕ್ರಮ ಜಾಲದ ಮೇಲೆ ಶಿಸ್ತುಕ್ರಮದ ಅಗತ್ಯ ಹೆಚ್ಚಾಗಿದೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಅನ್ನಭಾಗ್ಯ ಯೋಜನೆಯು ಪಾರದರ್ಶಕವಾಗಿ ಅನುಷ್ಠಾನಗೊಂಡು ಬಡವರಿಗೆ ಸದುಪಯೋಗ ಆಗಬೇಕು.

ಆಕಾಶ್, ಬೆಳಗಾವಿ

ಭ್ರಷ್ಟರಿಗೆ ಲಗಾಮು ಹಾಕಿ

ಆಹಾರ ಇಲಾಖೆಯ ಪ್ರಕಾರ ಅನ್ನಭಾಗ್ಯ ಯೋಜನೆಯಡಿ ಗೋದಾಮಿನಿಂದ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿರುವ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ. ಹಸಿದವರಿಗೆ ಅನ್ನ ಎಂಬ ತತ್ವದಡಿ ಜಾರಿಗೆ ತಂದ ಅನ್ನಭಾಗ್ಯ ಯೋಜನೆ ಭ್ರಷ್ಟರ ಪಾಲಾಗುತ್ತಿದೆ. ಅಕ್ಕಿ ಸೇರಿದಂತೆ ಆಹಾರ ಧಾನ್ಯಗಳು ರಾಜಾರೋಷವಾಗಿ ಕಳ್ಳಸಾಗಣೆಯಾಗುತ್ತಿವೆ. ಕಣ್ಗಾವಲಿಗೆ ಅನುದಾನ ಕೊರತೆ ಎಂಬ ಬೇಜವಾಬ್ದಾರಿ ಮಾತುಗಳನ್ನಾಡದೆ, ಕಳ್ಳರಿಗೆ ಲಗಾಮು ಹಾಕಿರಿ.

ಕೆ.ಅಜ್ಮೀರ್, ಹಂಪಿ

ವಿವಿಧೆಡೆ ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ ಗ್ರಾಮದಲ್ಲಿ ಒಣದ್ರಾಕ್ಷಿ ಭಾನುವಾರ ಸುರಿದ ಮಳೆಗೆ ತೊಯ್ದಿರುವುದು

ಹುಬ್ಬಳ್ಳಿ: ಬೆಳಗಾವಿ, ವಿಜಯಪುರ, ಗದಗ, ಉತ್ತರ ಕನ್ನಡ, ಹಾವೇರಿ, ಹುಬ್ಬಳ್ಳಿಯಲ್ಲಿ ಭಾನುವಾರ ಗುಡುಗು ಸಹಿತ ಮಳೆಯಾಗಿದೆ.

ವಿಜಯಪುರ ಜಿಲ್ಲೆಯ ತಿಕೋಟಾದಲ್ಲಿ ಆಲಿಕಲ್ಲು ಮಳೆ ಬಿರುಗಾಳಿಗೆ ಅಲ್ಲಿನ ಕಳ್ಳಕವಟಗಿ ಗ್ರಾಮದ ಶಿವಾನಂದ ಗಿಡ್ನವರ ಹಾಗೂ ಪರಮೇಶ್ವರ ಗಿಡ್ನವರ್ ಸಹೋದರರ, ಮಾರುಕಟ್ಟೆಗೆ ಕಳಿಸುವ ಹಂತದಲ್ಲಿರುವ 6 ಟನ್ ಒಣದ್ರಾಕ್ಷಿ ಹಾನಿಗೊಳಗಾಗಿದೆ.

ಉಳಿದಂತೆ ವಿಜಯಪುರ ನಗರ ಸೇರಿದಂತೆ ಜಿಲ್ಲೆಯಲ್ಲಿ ಅಲ್ಲಲ್ಲಿ ಗುಡುಗು, ಸಿಡಿಲು, ಗಾಳಿಯೊಂದಿಗೆ ತುಂತುರು ಮಳೆಯಾಗಿದೆ.

ಬೆಳಗಾವಿ ನಗರ, ಕಿತ್ತೂರು ಮತ್ತು ಸವದತ್ತಿ ಭಾಗದಲ್ಲಿ ಸಂಜೆ ಜೋರು ಗಾಳಿ ಮತ್ತು ಗುಡುಗು ಸಮೇತ ಸಾಧಾರಣ ಮಳೆಯಾಯಿತು. ಗದಗ ತಾಲ್ಲೂಕಿನ ವಿವಿಧೆಡೆ ಗಾಳಿ, ಗುಡುಗು ಸಹಿತ ಜೋರಾದ ಮಳೆ ಸುರಿದಿದೆ. ಹುಬ್ಬಳ್ಳಿಯಲ್ಲಿ ಸಾಯಂಕಾಲದಿಂದ ರಾತ್ರಿಯವರೆಗೂ ತುಂತುರು ಮಳೆ ಮುಂದುವರಿದಿತ್ತು.

ಕರಾವಳಿಯಲ್ಲಿ ಗಾಳಿ, ಮಳೆ: ಕರಾವಳಿಯ ಕೆಲವೆಡೆ ಉತ್ತಮ ಮಳೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಗುಡುಗು, ಸಿಡಿಲಿನೊಂದಿಗೆ ಮಳೆಯಾಗಿದೆ. ವಿದ್ಯುತ್ ಪೂರೈಕೆ ಸ್ಥಗಿತವಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಸುತ್ತಲಿನ ಪ್ರದೇಶಗಳು, ಕಡಬದ ಕೋಡಿಂಬಾಳದಲ್ಲಿ ಗುಡುಗು, ಸಿಡಿಲಿನೊಂದಿಗೆ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಮೋಡ ಕವಿದ ವಾತಾವರಣವಿದ್ದು, ನರಸಿಂಹರಾಜಪುರದಲ್ಲಿ ಸಾಧಾರಣ ಮಳೆಯಾಗಿದೆ.

ಧಾರಾಕಾರ ಮಳೆ: ಕೊಡಗು ಜಿಲ್ಲೆಯ ನಾಪೋಕ್ಲು, ತಲಕಾವೇರಿ, ವಿರಾಜಪೇಟೆ, ಚೆಟ್ಟಿಮಾನಿ, ಬೆಟ್ಟಗೇರಿ ಹಾಗೂ ಶನಿವಾರಸಂತೆ ಭಾಗದಲ್ಲಿ ಭಾನುವಾರ ಸಂಜೆ ಧಾರಾಕಾರ ಮಳೆಯಾಗಿದೆ.

ಆಲಿಕಲ್ಲು ಮಳೆ: ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಭಾನುವಾರ ಸಾಧಾರಣ ಮಳೆಯಾಗಿದೆ. ಸೊರಬ ಪಟ್ಟಣ ಹಾಗೂ ಸುತ್ತಮುತ್ತ ಆಲಿಕಲ್ಲು ಮಳೆಯಾಗಿದೆ.

ರಿಪ್ಪನ್‌ಪೇಟೆಯಲ್ಲಿ ಸಾಧಾರಣ ಮಳೆಯಾಗಿದೆ. ಇಲ್ಲಿನ ಬಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಮಟೆಕೊಪ್ಪದಲ್ಲಿ ಶನಿವಾರ ಸಂಜೆ ಸಿಡಿಲು ಬಡಿದು ₹ 30 ಸಾವಿರಕ್ಕೂ ಅಧಿಕ ಮೌಲ್ಯದ ಮೇವು ಸುಟ್ಟಿದೆ.

ಪ್ರಕಾಶಕರಿಂದ ನೆರವು: ಮೈಸೂರಿನ ಸುಟ್ಟ ಗ್ರಂಥಾಲಯ ಮರು ನಿರ್ಮಾಣಕ್ಕೆ ಬೆಂಬಲ

‘ಗ್ರಂಥಾಲಯ ಇಲಾಖೆಯಿಂದ ವಸ್ತುಸ್ಥಿತಿ ವರದಿ’

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿಯ ಶಾಂತಿನಗರದಲ್ಲಿ ಸುಟ್ಟುಹೋಗಿರುವ ಗ್ರಂಥಾಲಯದ ಮರುಸ್ಥಾಪನೆಗಾಗಿ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪ್ರಕಾಶಕರು ಪುಸ್ತಕ ಹಾಗೂ ಆರ್ಥಿಕ ನೆರವು ನೀಡಲು ಮುಂದಾಗಿದ್ದಾರೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಬಿ.ಮಂಜುನಾಥ್ ತಿಳಿಸಿದ್ದಾರೆ.

ಬೆಂಕಿಗೆ ಆಹುತಿಯಾಗಿರುವ, ಸೈಯದ್ ಇಸಾಕ್ ನಡೆಸುತ್ತಿದ್ದ ಗ್ರಂಥಾಲಯವಿದ್ದ ಜಾಗವು ಯಾರ ಒಡೆತನದಲ್ಲಿದೆ ಎಂಬುದನ್ನು ಪರಿಶೀಲಿಸಲಾಗುತ್ತದೆ. ಉದ್ಯಾನದ ಜಾಗವಾಗಿದ್ದರೂ ಗ್ರಂಥಾಲಯ ನಿರ್ಮಿಸಲು ಕಾನೂನಿನಲ್ಲಿ ಅವಕಾಶವಿದೆ. ಉದ್ಯಾನವಲ್ಲದ ಪಾಲಿಕೆ ಜಾಗವಾಗಿದ್ದರೂ ಗ್ರಂಥಾಲಯ ನಿರ್ಮಿಸಬಹುದು. ಕೇಂದ್ರ ಸರ್ಕಾರದ ರಾಜಾರಾಮ್ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನದವರು ಸಹ ಈ ಗ್ರಂಥಾಲಯದ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅಗತ್ಯಬಿದ್ದರೆ ಅವರೂ ನೆರವು ನೀಡುವರು ಎಂದು ತಿಳಿಸಿದ್ದಾರೆ.

ಇಸಾಕ್ ಅವರನ್ನು ಭಾನುವಾರ ಭೇಟಿಯಾಗಿ ಚರ್ಚಿಸಿದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎಂ.ರಾಜೇಂದ್ರ

‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರ ಮೂಲಕ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೂ ವಸ್ತುಸ್ಥಿತಿ ಬಗ್ಗೆ ವರದಿ ಕಳುಹಿಸಲಾಗಿದ್ದು, ಇಲಾಖೆ ಮೂಲಕವೂ ನೆರವು ನೀಡುವ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು’ ಎಂದಿದ್ದಾರೆ.

‘ಉಸಿರಿರುವರೆಗೂ ಪತ್ರಿಕೆ ಕೊಡುಗೆ’: ಈ ಗ್ರಂಥಾಲಯಕ್ಕೆ, ತಮ್ಮ ಉಸಿರು ಇರುವವರೆಗೂ ವಾರ ಪತ್ರಿಕೆ, ಮಾಸ ಪತ್ರಿಕೆ ಹಾಗೂ ರಾಜ್ಯ ಮಟ್ಟದ ಒಂದು ದಿನ ಪತ್ರಿಕೆಯನ್ನು ತರಿಸಿ ಕೊಡುವುದಾಗಿ ಹಾಗೂ ಇದರೊಂದಿಗೆ ಪ್ರತಿ ವರ್ಷವೂ ₹ 1 ಸಾವಿರ ಕೊಡುಗೆ ನೀಡುವುದಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿವೃತ್ತ ಉಪ ನಿರ್ದೇಶಕ ಸ.ರ.ಸುದರ್ಶನ ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚನೆ ಮೇರೆಗೆ, ಸ್ಥಳಕ್ಕೆ ಭೇಟಿ ನೀಡಿದ್ದ ಮತ್ತೊಬ್ಬ ಉಪಾಧ್ಯಕ್ಷ ಎಂ.ರಾಜೇಂದ್ರ ‘ಈ ಮೊದಲು ಗ್ರಂಥಾಲಯವಿದ್ದ ಜಾಗವನ್ನೇ ಅವರಿಗೆ ಮಂಜೂರು ಮಾಡಿಸಲಾಗುವುದು’ ಎಂದಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ತಮ್ಮ ಬಳಿಯಿರುವ ಗ್ರಂಥಗಳನ್ನು ಕೊಡುವುದಾಗಿ ತಿಳಿಸಿದರು.

ಪಂಡಿತ್ ರಾಜೀವ್ ತಾರಾನಾಥ್ ನೆರವು



ಮೈಸೂರು: ಸೈಯದ್ ಇಸಾಕ್ ಅವರಿಗೆ ಸರೋದ್ ವಾದಕ ಪಂ. ರಾಜೀವ್ ತಾರಾನಾಥ್ ಅವರು ₹ 50 ಸಾವಿರ ನೆರವು ಪ್ರಕಟಿಸಿದ್ದಾರೆ. ‘ಭಾನುವಾರ ಅವರ ಜತೆ ಮಾತನಾಡಿದೆ. ಎರಡು ದಿನಗಳ ಬಳಿಕ ನನ್ನನ್ನು ಭೇಟಿಯಾಗುವುದಾಗಿ ತಿಳಿಸಿದ್ದಾರೆ. ವೈಯಕ್ತಿಕವಾಗಿ ₹ 50 ಸಾವಿರ ಹಾಗೂ ಕೆಲವು ಪುಸ್ತಕಗಳನ್ನು ಅವರಿಗೆ ಕೊಡುತ್ತೇನೆ. ಇಸಾಕ್‌ಗೆ ನೆರವಾಗುವಂತೆ ನನ್ನ ಹಿತೈಷಿಗಳಿಗೂ ತಿಳಿಸಿದ್ದೇನೆ’ ಎಂದು ರಾಜೀವ್ ತಾರಾನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಓದು ಬರಹ ತಿಳಿಯದ ವ್ಯಕ್ತಿಯೊಬ್ಬರು 11 ಸಾವಿರ ಪುಸ್ತಕಗಳನ್ನು ಇಟ್ಟುಕೊಂಡು ನಡೆಸುತ್ತಿದ್ದ ಗ್ರಂಥಾಲಯವನ್ನು ನೀಚರು ಸುಟ್ಟುಹಾಕಿದ್ದಾರೆ. ಈ ಘಟನೆಯಿಂದ ಇಡೀ ದೇಶಕ್ಕೆ ನಾಚಿಕೆಯಾಗಬೇಕು’ ಎಂದು ಖಂಡಿಸಿದರು.

ಪಿಯುಸಿಎಲ್ ಖಂಡನೆ

ಗ್ರಂಥಾಲಯಕ್ಕೆ ಬೆಂಕಿ ಹಚ್ಚಿ ಪುಸ್ತಕಗಳನ್ನು ಸುಟ್ಟಿರುವುದಕ್ಕೆ ಅಖಿಲ ಭಾರತ ಪ್ರಜಾವೇದಿಕೆ (ಎಐಪಿಎಫ್) ಮತ್ತು ಮೈಸೂರಿನ ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್)ದ ಸತ್ಯಶೋಧನಾ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಬೆಂಕಿ ಹಚ್ಚಿದ್ದು ಅನಾಗರಿಕ ಕೃತ್ಯ ಎಂದು ಕಟುವಾಗಿ ಟೀಕಿಸಿದ್ದು, ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದೆ.

ಮೈಸೂರು ಮಹಾನಗರ ಪಾಲಿಕೆ ಆಡಳಿತವು, ಅದೇ ಜಾಗದಲ್ಲಿ ಬಹುಮಹಡಿಯ ಕಟ್ಟಡ ಕಟ್ಟಿಕೊಟ್ಟು, ಗ್ರಂಥಾಲಯ ಬೃಹತ್ ಪ್ರಮಾಣದಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದೆ.

ಡಾ.ಲಕ್ಷ್ಮೀನಾರಾಯಣ, ಡಾ.ರತಿರಾವ್, ಡಾ.ಪಂಡಿತಾರಾಧ್ಯ, ಜಿ.ಪಿ.ಬಸವರಾಜು, ಎನ್.ಪುರುಷೋತ್ತಮ, ತನ್ವೀರ್ ಪಾಷಾ, ಕಲೀಂ, ನಾ.ದಿವಾಕರ ಸ್ಥಳಕ್ಕೆ ಭೇಟಿ ನೀಡಿದ್ದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕೆ

ವಿಜಯೇಂದ್ರನ ಮುಂದೆ ಹೆಬ್ಬೆಟ್ಟಾದ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ): ‘ಪುತ್ರ ವಿಜಯೇಂದ್ರನ ಮುಂದೆ ಯಡಿಯೂರಪ್ಪ ಹೆಬ್ಬೆಟ್ಟಾಗಿದ್ದಾರೆ. ಕಡತಗಳಿಗೆ ಸಹಿ ಮಾಡಲು ಯಡಿಯೂರಪ್ಪ ಅವರ ಕೈ ನಡುಗುತ್ತದೆ. ಮೇ 2ರ ಒಳಗೆ ಸಿ.ಎಂ. ಬದಲಾವಣೆ ನಿಶ್ಚಿತ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಪುನರುಚ್ಚರಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಎಲ್ಲ ವ್ಯವಹಾರವೂ ಪುತ್ರ ವಿಜಯೇಂದ್ರ ನೇತೃತ್ವದಲ್ಲಿ ನಡೆಯುತ್ತಿದೆ. ಪ್ರತಿ ಕಡತಗಳನ್ನು ತೂಕ ಮಾಡಿ ಯಾವ ಕಡತಕ್ಕೆ ಎಷ್ಟು ಲಕ್ಷ? ಎಂಬುದನ್ನು ಅಳೆದು ಸಹಿಗಾಗಿ ಇಡುತ್ತಾರೆ. ಚುನಾವಣೆಯಲ್ಲಿ ದುಡ್ಡಿನ ಮಳೆ ಹರಿಸಿ ಅಭ್ಯರ್ಥಿ ಗೆಲುವಿಗೆ ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ವಿಜಯೇಂದ್ರ ಸಾವಿರಾರು ಕೋಟಿ ಲೂಟಿ ಮಾಡಿ ವಿದೇಶದಲ್ಲಿ ಇಟ್ಟಿದ್ದಾರೆ. ಫೆಡರಲ್ ಬ್ಯಾಂಕಿನ ಹಗರಣ ಶೀಘ್ರದಲ್ಲೇ ಹೊರಗೆ ಬರಲಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ. ಬಾದಾಮಿ ಕ್ಷೇತ್ರಕ್ಕೆ ₹1,500 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ. ಅಪ್ಪ–ಮಕ್ಕಳ ಆಟ ಬಹಳ ದಿನ ನಡೆಯದು’ ಎಂದು ಹರಿಹಾಯ್ದರು.

ಕೇಳಿದಷ್ಟು ಸಂಬಳ ಕೊಡೋಕೆ ಆಗಲ್ಲ: ಸಾರಿಗೆ ನೌಕರರ ಅಧ್ಯಕ್ಷ ಹದ್ದು ಮೀರಿ ಮಾತನಾಡುತ್ತಾ ಇದ್ದಾರೆ. ಸಾರಿಗೆ ನೌಕರರಿಗೆ ಹೇಳುತ್ತೇನೆ, ಹೊರಗಿನವರನ್ನು ತಂದು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಬೇಡಿ. ದೇಶ ಹಾಳು ಮಾಡುವ ಕೆಲವು ಮಂದಿ ಇದ್ದಾರೆ. ನಾಳೆ ಎಲ್ಲರಿಗೂ ಐಎಎಸ್, ಐಪಿಎಸ್ ರೀತಿ ಪಗಾರ ಕೊಡು ಅಂತಾರೆ. ನಾನೇ ಸಿ.ಎಂ. ಆದ್ರೂ ಕೊಡೋಕೆ ಆಗಲ್ಲ ಎಂದರು.

ಕೋಡಿಹಳ್ಳಿ ಚಂದ್ರಶೇಖರ್ ಅಂಥವರು ನೌಕರರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಸಾವಿರಾರು ಬಸ್ ಖರೀದಿ ಮಾಡುತ್ತಾರೆ. ಒಂದು ಬಸ್ಸಿನ ಹಿಂದೆ ಎಷ್ಟು ಕಮಿಷನ್ ತಿನ್ನುತ್ತಾರೆ ಅನ್ನೊದು ಗೊತ್ತಿದೆ. ಸಾರಿಗೆ ಸಂಸ್ಥೆ ಉದ್ಧಾರವಾಗುವುದು ಯಾವಾಗ, ಸಾರಿಗೆ ಸಚಿವರು ಸೋರಿಕೆಯನ್ನು ತಡೆಗಟ್ಟಬೇಕು ಎಂದು ಹೇಳಿದರು.

‘ಪಂಚಮಸಾಲಿ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಿ’

ಶಿಗ್ಗಾವಿ (ಹಾವೇರಿ): ‘ಮುಖ್ಯಮಂತ್ರಿ ಬದಲಾವಣೆ ಸಂದರ್ಭ ಬಂದರೆ, ಮೊದಲನೆಯದಾಗಿ ಉತ್ತರ ಕರ್ನಾಟಕದವರಿಗೆ ಕೊಡಿ, ಅದರಲ್ಲೂ ಪಂಚಮಸಾಲಿ ಸಮುದಾಯದವರಿಗೆ ಸಿಎಂ ಸ್ಥಾನ ಕೊಡಿ ಎಂದು ಬಿಜೆಪಿ ಹೈಕಮಾಂಡ್‌ಗೆ ಕೇಳುತ್ತೇನೆ’ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪ್ರಧಾನಿ ಮೋದಿ, ಅಮಿತ್ ಷಾ, ನಡ್ಡಾ ಅವರಿಗೆ ಗೊತ್ತಿದೆ. ಪಂಚಮಸಾಲಿ ಸಮಾಜದಲ್ಲಿ ಸಿ.ಎಂ. ಆಗುವ ವ್ಯಕ್ತಿ ಯಾರಿದ್ದಾರೆ ಅಂತ. ಹೀಗಾಗಿ ಅವರನ್ನೇ ಸಿ.ಎಂ. ಮಾಡುತ್ತಾರೆ ಎಂದು ಹೆಸರು ಹೇಳದೆ ಪರೋಕ್ಷವಾಗಿ ಯತ್ನಾಳ ಅವರನ್ನು ಬೆಂಬಲಿಸಿದರು.

ಸಾರಿಗೆ ನೌಕರರಲ್ಲಿ ಬಹುತೇಕ ಮಂದಿ ಉತ್ತರ ಕರ್ನಾಟಕದವರು ಇದ್ದಾರೆ. ಹೀಗಾಗಿ ಮುಷ್ಕರವನ್ನು ನಾವು ಬೆಂಬಲಿಸುತ್ತೇವೆ. ಸರ್ಕಾರ ಕೂಡಲೇ ಅವರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

‘ಯಡಿಯೂರಪ್ಪ– ಈಶ್ವರಪ್ಪ ಮಧ್ಯೆ ಮತಭೇದ ಇರಬಹುದು, ಮನಭೇದ ಇಲ್ಲ’

ಪ್ರಜಾವಾಣಿ ವಾರ್ತೆ

ಅರುಣ ಸಿಂಗ್

ಬಸವಕಲ್ಯಾಣ (ಬೀದರ್ ಜಿಲ್ಲೆ): ‘ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸಚಿವ ಈಶ್ವರಪ್ಪ ಮಧ್ಯೆ ಮತಭೇದ ಇರಬಹುದು. ಆದರೆ, ಮನಭೇದ ಇಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯದ ಉಸ್ತುವಾರಿ ಅರುಣ ಸಿಂಗ್ ಹೇಳಿದರು.

‘ಪ್ರಜಾಪ್ರಭುತ್ವದಲ್ಲಿ ಮತಭೇದ ಇರುವುದು ಸಹಜ. ಅವರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುವವರು. ಈ ಸಿಟ್ಟು ಕ್ಷಣಿಕ, ಸರ್ಕಾರಕ್ಕೇನೂ ತೊಂದರೆ ಇಲ್ಲ’ ಎಂದು ಅವರು ತಿಳಿಸಿದರು.

ಕಾವಲುಗಾರ...ಈಗ ಐಐಎಂ ಸಹಾಯಕ ಪ್ರಾಧ್ಯಾಪಕ

ಪ್ರಜಾವಾಣಿ ವಾರ್ತೆ

ರಂಜಿತ್

ಕಾಸರಗೋಡು: ಕಾಸರಗೋಡಿನಲ್ಲಿ ಬಿಎಸ್‌ಎನ್‌ಎಲ್ ಕಚೇರಿಯಲ್ಲಿ ರಾತ್ರಿ ಕಾವಲುಗಾರನಾಗಿ ಕಾರ್ಯ ನಿರ್ವಹಿಸುತ್ತಿದ್ದ ರಂಜಿತ್ ರಾಮಚಂದ್ರನ್, ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದು ಈಗ ರಾಂಚಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂ–ರಾಂಚಿ) ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾಗಿದ್ದಾರೆ.

ಸದ್ಯ ಅವರು ಬೆಂಗಳೂರಿನಲ್ಲಿ ಕ್ರೈಸ್ಟ್ ವಿ.ವಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದು, ಶೀಘ್ರವೇ ಐಐಎಂ– ರಾಂಚಿಯಲ್ಲಿ ಕರ್ತವ್ಯಕ್ಕೆ ಹಾಜರಾಗುವರು.

ಅದರಲ್ಲೂ, ಪದವಿ ವರೆಗೆ ಮಾತೃಭಾಷೆ ಮಲಯಾಳದಲ್ಲಿ ಓದಿರುವ ಅವರಿಗೆ ಉನ್ನತ ಶಿಕ್ಷಣ, ಪಿಎಚ್.ಡಿ ಪಡೆಯಲು ಭಾಷೆ ಅಡ್ಡಿಯಾಗಲೇ ಇಲ್ಲ. ರಾತ್ರಿ ದುಡಿದು, ಹಗಲಿನ ಸಮಯವನ್ನು ವ್ಯರ್ಥ ಮಾಡದೇ ಯಶಸ್ಸಿನ ಶಿಖರವೇರಿರುವ ಅವರ ಸಾಧನೆ ಇತರರಿಗೆ ಸ್ಫೂರ್ತಿಯಾಗಿದೆ.

ತಾವು ನಡೆದು ಬಂದ ದಾರಿ ಕುರಿತು ಫೇಸ್‌ಬುಕ್‌ನಲ್ಲಿ ರಂಜಿತ್ ಬರೆದುಕೊಂಡಿದ್ದಾರೆ. ಅವರ ಯಶೋಗಾಥೆ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಏಪ್ರಿಲ್ 9ರಂದು ಅವರು ಫೇಸ್‌ಬುಕ್‌ನಲ್ಲಿ ತಮ್ಮ ಯಶೋಗಾಥೆ ಬರೆದುಕೊಂಡಿದ್ದು, ಈಗಾಗಲೇ 37,000 ಲೈಕುಗಳು ಬಂದಿವೆ.

ಪಣತ್ತೂರಿನವರಾದ ರಂಜಿತ್ ಕಾಸರಗೋಡಿನ ಸೇಂಟ್ ಪಯಸ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಪದವಿ ಪಡೆದು, ಐಐಟಿ–ಮದ್ರಾಸ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದರು.

‘ನನಗೆ ಮಲಯಾಳ ಮಾತ್ರ ಗೊತ್ತಿದ್ದರಿಂದ, ಅಧ್ಯಯನ ಮುಂದುವರಿಸುವುದು ಕಷ್ಟ ಎನಿಸಿತು. ಪಿಎಚ್.ಡಿ ಅಧ್ಯಯನವನ್ನು ಅರ್ಧದಲ್ಲಿಯೇ ನಿಲ್ಲಿಸಲು ಯೋಚಿಸಿದೆ. ಆದರೆ, ನನ್ನ ಮಾರ್ಗದರ್ಶಕರಾಗಿದ್ದ ಡಾ.ಸುಭಾಷ್ ನನ್ನಲ್ಲಿ ಉತ್ಸಾಹ ತುಂಬಿದರು. ನನ್ನ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಹೋರಾಟ ನಡೆಸಲು ನಾನು ನಿಶ್ಚಯಿಸಿದೆ’ ಎಂದು ಅವರು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ. ‘ತಂದೆ ರಾಮಚಂದ್ರನ್ ಟೈಲರ್ ವೃತ್ತಿಯಲ್ಲಿದ್ದಾರೆ. ತಾಯಿ ಬೇಬಿ ನರೇಗಾ ಅಡಿ ಕೂಲಿ ಕಾರ್ಮಿಕರಾಗಿದ್ದಾರೆ’ ಎಂದೂ ಬರೆದುಕೊಂಡಿದ್ದಾರೆ. ಈಗಲೋ, ಆಗಲೋ ಬೀಳುತ್ತದೆ ಎಂಬ ಸ್ಥಿತಿಯಲ್ಲಿರುವ ಚಾವಣಿ ಹೊಂದಿದ ತಮ್ಮ ಪುಟ್ಟ ಗುಡಿಸಲಿನ ಚಿತ್ರವನ್ನು ಸಹ ಅವರು ತಮ್ಮ ಬರಹದೊಂದಿಗೆ ಹಂಚಿಕೊಂಡಿದ್ದಾರೆ.

‘ಫೇಸ್‌ಬುಕ್‌ನಲ್ಲಿ ನಾನು ಬರೆದುಕೊಂಡಿರುವುದು ವೈರಲ್ ಆಗುತ್ತದೆ ಎಂದು ಭಾವಿಸಿರಲಿಲ್ಲ. ನನ್ನ ಹೋರಾಟ ಇತರರಿಗೆ ಸ್ಫೂರ್ತಿಯಾಗಲಿ ಎಂಬ ಉದ್ದೇಶದಿಂದ ಬರೆದಿರುವೆ. ಪ್ರತಿಯೊಬ್ಬರು ಒಳ್ಳೆಯದರ ಬಗ್ಗೆಯೇ ಕನಸು ಕಾಣಬೇಕು. ಅದನ್ನು ನನಸಾಗಿಸಲು ಶ್ರಮಿಸಬೇಕು’ ಎಂದು ಹೇಳಿದರು.

ಕೋವಿಡ್ ತಡೆಗೆ ಕಠಿಣ ನಿರ್ಬಂಧ

ಒಂದನೇ ಪುಟದಿಂದ

ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾದರೆ ಸೋಂಕಿತರ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹೆಚ್ಚಿನ ಹಾಸಿಗೆಗಳನ್ನು ಕಾಯ್ದಿರಿಸಬೇಕಾಗುತ್ತದೆ. ಮನೆಗಳಲ್ಲಿ ಪ್ರತ್ಯೇಕ ವಾಸದಲ್ಲಿರುವವರ ಮೇಲೆ ನಿಗಾ ಇಡುವುದಕ್ಕೂ ವಿಶೇಷ ವ್ಯವಸ್ಥೆ ಅಗತ್ಯ. ನಗರಗಳಿಂದ ಹಳ್ಳಿಗಳಿಗೆ ಹೆಚ್ಚಿನ ಜನರು ಮರಳುತ್ತಿದ್ದು, ಅವರ ಮೂಲಕ ಸೋಂಕು ಪ್ರಸರಣವಾಗುವ ಅಪಾಯವೂ ಇದೆ. ಈ ಬಗ್ಗೆಯೂ ನಿಗಾ ಇಡಬೇಕಿದೆ. ಅಂತರ ರಾಜ್ಯ ಪ್ರಯಾಣಿಕರು ರಾಜ್ಯ ಪ್ರವೇಶಿಸುವ ಸಮಯದಲ್ಲಿ ಕಟ್ಟುನಿಟ್ಟಿನ ಪರಿಶೀಲನೆಗೂ ಕ್ರಮ ಕೈಗೊಳ್ಳಲಾಗಿದೆ ಎಂದು ಸುಧಾಕರ್ ವಿವರಿಸಿದರು.

ಕಠಿಣ ನಿರ್ಬಂಧಕ್ಕೆ ಸಲಹೆ: ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರಿಕೆ ಆಗುತ್ತಿರುವುದರಿಂದ ಇನ್ನಷ್ಟು ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸುವಂತೆ ಕೋವಿಡ್ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿ ಹಾಗೂ ವಿಷನ್ ಗ್ರೂಪ್‌ನ ತಜ್ಞರು ಸಲಹೆ ನೀಡಿದ್ದಾರೆ. ಈ ಕುರಿತು ಅಧಿಕೃತವಾಗಿ ವರದಿ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದರು.

’ಕೋವಿಡ್ ಎರಡನೇ ಅಲೆಯ ಅಪಾಯಗಳನ್ನು ತಪ್ಪಿಸಲು ನಗರಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಿರುವುದರ ಜತೆಗೆ ಇನ್ನೂ ಕೆಲವು ಕಠಿಣ ನಿರ್ಬಂಧಗಳನ್ನು ವಿಧಿಸಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ. ಏನೆಲ್ಲಾ ಕ್ರಮಗಳ ಅಗತ್ಯವಿದೆ ಎಂಬುದನ್ನು ಸ್ಪಷ್ಟವಾಗಿ ವರದಿಯ ರೂಪದಲ್ಲಿ ಸಲ್ಲಿಸುವಂತೆ ತಜ್ಞರನ್ನು ಕೋರಿದ್ದೇನೆ’ ಎಂದರು.

ತಾಂತ್ರಿಕ ಸಲಹಾ ಸಮಿತಿ ಮತ್ತು ವಿಷನ್ ಗ್ರೂಪ್‌ನ ತಜ್ಞರು ನೀಡುವ ವರದಿಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲಿಸಲಾಗುವುದು. ಸಂಪುಟದ ಎಲ್ಲ ಸದಸ್ಯರ ಜತೆಗೂ ಚರ್ಚಿಸಿ ಮುಂದಿನ ಕ್ರಮಗಳ ಕುರಿತು ನಿರ್ಧಾರಕ್ಕೆ ಬರಲಾಗುವುದು ಎಂದು ತಿಳಿಸಿದರು.

ಕಳೆದ ಬಾರಿಯಂತೆ ಕೋವಿಡ್ ನಿಯಂತ್ರಣಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರದಿಂದಲೇ ರಿಯಾಯಿತಿ ದರದಲ್ಲಿ ಔಷಧಿ ಒಸಗಿಸಲು ನಿರ್ಧರಿಸಲಾಗಿದೆ. ಟೆಲಿ ತೀವ್ರ ನಿಗಾ ಘಟಕ (ಟೆಲಿ ಐಸಿಯು) ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ತೀರ್ಮಾನಿಸಲಾಗಿದೆ ಎಂದರು.

ಲಸಿಕೆ: ಮಹಿಳೆಯರೇ ಮುಂದು

ರಾಜ್ಯದಲ್ಲಿ ಈವರೆಗೆ 61 ಲಕ್ಷ ಡೋಸ್ ಕೋವಿಡ್ ಲಸಿಕೆ ನೀಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆದ ಮಹಿಳೆಯರೇ ಮಾದರಿಯಾಗಿದ್ದಾರೆ ಎಂದು ಡಾ.ಕೆ.ಸುಧಾಕರ್ ಹೇಳಿದರು.

ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜಿನಲ್ಲಿ ನಡೆದ ಲಸಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಸಚಿವರು, ರಾಜ್ಯಕ್ಕೆ 72 ಲಕ್ಷಕ್ಕೂ ಹೆಚ್ಚು ಲಸಿಕೆ ಬಂದಿದೆ. ಶೇ 53 ರಷ್ಟು ಡೋಸ್‌ಗಳನ್ನು ಮಹಿಳೆಯರಿಗೆ ನೀಡಲಾಗಿದೆ ಎಂದರು.

ಮಸ್ಕಿ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡಗೆ ಕೋವಿಡ್

ಒಂದನೇ ಪುಟದಿಂದ...

'ಮಾನ್ಯ ಮತದಾರ ಬಂಧುಗಳಲ್ಲಿ ನನ್ನ ಕಳಕಳಿಯ ಮನವಿ. ನನಗೆ ಕೋವಿಡ್ ಪಾಸಿಟಿವ್ ಬಂದ ಕಾರಣ ವೈದ್ಯರ ಸಲಹೆ ಮೇರೆಗೆ ಪ್ರತ್ಯೇಕವಾಗಿ ಇದ್ದೇನೆ. ಯಾರೂ ಆತಂಕ ಪಡಬೇಕಿಲ್ಲ. ಶೀಘ್ರ ಗುಣಮುಖನಾಗಿ ಬರುತ್ತೇನೆ. ಏ.17 ರಂದು ಮತದಾನ ಇದ್ದು, ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ತಮ್ಮನ್ನು ಭೇಟಿ ಮಾಡುತ್ತಾರೆ. ಅವರನ್ನು ನಾನೇ ಎಂದು ಪರಿಭಾವಿಸಿ ಆಶೀರ್ವದಿಸಲು ಮತ್ತು ಕಮಲದ ಗುರುತಿಗೆ ಮತ ನೀಡಲು ಕೋರುತ್ತೇನೆ' ಎಂದು ಪಾಟೀಲ ಅವರು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹರಿಬಿಟ್ಟಿದ್ದಾರೆ. ‘ನಿಮ್ಮ ಮತ್ತು ನಿಮ್ಮ ಕುಟುಂಬದವರ ಆರೋಗ್ಯದ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳಲು ವಿನಂತಿಸುತ್ತೇನೆ’ ಎಂದಿದ್ದಾರೆ.

ಮುಷ್ಕರ ಬಿಟ್ಟರಷ್ಟೇ ವರ್ಗ

ಒಂದನೇ ಪುಟದಿಂದ

ಈ ಎಲ್ಲರೂ ವರ್ಗಾವಣೆಗೊಂಡಿರುವ ಸ್ಥಳದಲ್ಲಿ ತಕ್ಷಣವೇ ಕರ್ತವ್ಯಕ್ಕೆ ಹಾಜರಾಗದಿದ್ದರೆ ಕಠಿಣ ಕ್ರಮ ಜರುಗಿಸುವುದಾಗಿ ಭಾನುವಾರ ಎಚ್ಚರಿಕೆ ನೀಡಲಾಗಿದೆ.

ಮುಷ್ಕರದಲ್ಲಿ ಭಾಗಿಯಾಗಿರುವ ನೌಕರರು ಅಂತರ ನಿಗಮಗಳ ವರ್ಗಾವಣೆಗೆ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲು ಸಾರಿಗೆ ನಿಗಮಗಳು ನಿರ್ಧರಿಸಿವೆ. ಈ ಎಲ್ಲರನ್ನೂ ಅಂತರ ನಿಗಮಗಳ ವರ್ಗಾವಣೆ ಪ್ರಕ್ರಿಯೆಯಿಂದ ಹೊರಗಿಡಲಾಗುವುದು ಎಂದು ಪ್ರಕಟಿಸಲಾಗಿದೆ.

‘ಮುಷ್ಕರದಲ್ಲಿ ಭಾಗಿಯಾಗಿರುವ ನೌಕರರು ಅಂತರ ನಿಗಮಗಳ ವರ್ಗಾವಣೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸದೇ ಇರಲು ತೀರ್ಮಾನಿಸಲಾಗಿದೆ. ಈಗಾಗಲೇ ಕೋರಿಕೆಯ ಮೇರೆಗೆ ಅಂತರ ವಿಭಾಗ ವರ್ಗಾಗಣೆ ಪಡೆದುಕೊಂಡು ಕೆಲಸ ಮಾಡುತ್ತಿರುವವರು ತಕ್ಷಣ ಕೆಲಸಕ್ಕೆ ಹಾಜರಾಗದಿದ್ದರೆ ಅವರ ವರ್ಗಾವಣೆ ಆದೇಶ ರದ್ದುಪಡಿಸಲಾಗುವುದು’ ಎಂದು ಅಂತರ ನಿಗಮ ವರ್ಗಾವಣೆ ಉಸ್ತುವಾರಿ ಸಮಿತಿ ಅಧ್ಯಕ್ಷರೂ ಆಗಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದ್ದಾರೆ.

ಮತ್ತಷ್ಟು ಮಂದಿ ವಜಾ: ಮುಷ್ಕರದಲ್ಲಿ ಭಾಗಿಯಾಗಿರುವ ಟ್ರೈನಿ ಮತ್ತು ಪ್ರೊಬೇಷನರಿ ನೌಕರರನ್ನು ಕೆಲಸದಿಂದ ವಜಾಗೊಳಿಸುವ ಪ್ರಕ್ರಿಯೆಯನ್ನು ಸಾರಿಗೆ ನಿಗಮಗಳು ಮುಂದುವರಿಸಿವೆ. 62 ಟ್ರೈನಿ ಮತ್ತು 60 ಪ್ರೊಬೇಷನರಿ ಸಿಬ್ಬಂದಿಯನ್ನು ವಜಾಗೊಳಿಸಿ ಬಿಎಂಟಿಸಿ ಭಾನುವಾರ ಆದೇಶ ಹೊರಡಿಸಿದೆ. ಇತರ ಮೂರು ನಿಗಮಗಳೂ ಕೆಲವು ನೌಕರರನ್ನು ಕೆಲಸದಿಂದ ವಜಾಗೊಳಿಸಿವೆ.

ಕರ್ತವ್ಯಕ್ಕೆ ಹಾಜರಾಗುವ ಸಿಬ್ಬಂದಿಗೆ ಅಡ್ಡಿಪಡಿಸುವ ನೌಕರರ ವಿರುದ್ಧ ಸಾರಿಗೆ ನಿಗಮಗಳಿಂದಲೇ ದೂರು ದಾಖಲಿಸುವ ಪ್ರಕ್ರಿಯೆಯನ್ನೂ ಆರಂಭಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಭಾನುವಾರ ವಿಜಯಪುರದಲ್ಲಿ ಆರು ಹಾಗೂ ಮೈಸೂರಿನಲ್ಲಿ ಇಬ್ಬರು ನೌಕರರನ್ನು ಬಂಧಿಸಲಾಗಿದೆ.

2,500 ಬಸ್ ಸಂಚಾರ: ನಾಲ್ಕು ನಿಗಮಗಳಲ್ಲಿ ಒಟ್ಟು 10,000 ನೌಕರರು ಭಾನುವಾರ ಕೆಲಸಕ್ಕೆ ಹಾಜರಾಗಿದ್ದಾರೆ. ಒಂದೇ ದಿನ 2,500ಕ್ಕೂ ಹೆಚ್ಚು ಬಸ್‌ಗಳು ಸಂಚಾರ ನಡೆಸಿವೆ. ಸೋಮವಾರ ಈ ಸಂಖ್ಯೆಯಲ್ಲಿ ಮತ್ತಷ್ಟು ಹೆಚ್ಚಳವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಂಗಳೂರು ಘಟಕ–2ರಲ್ಲಿ ಎಲ್ಲ ಬಸ್‌ಗಳನ್ನೂ ಓಡಿಸಲಾಗಿದೆ. ಮೈಸೂರು ನಗರ ಸಾರಿಗೆಯ ಎಲ್ಲ ಬಸ್‌ಗಳೂ ಭಾನುವಾರ ಸಂಚಾರ ಮಾಡಿವೆ ಎಂದು ತಿಳಿಸಿದ್ದಾರೆ.

ಪಾಸ್‌ಗಳ ಅವಧಿ ವಿಸ್ತರಣೆ

ಮುಷ್ಕರಕ್ಕೆ ಸರಿಸಮನಾಗಿ ವಿದ್ಯಾರ್ಥಿ ಬಸ್ ಪಾಸ್ ಮತ್ತು ಮಾಸಿಕ ಬಸ್ ಪಾಸ್‌ಗಳ ಅವಧಿಯನ್ನು ವಿಸ್ತರಣೆ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದ್ದಾರೆ.

ಬಸ್ಸಿಗೆ ಕಲ್ಲು: ಇಬ್ಬರ ಬಂಧನ

ಹುಣಸೂರು (ಮೈಸೂರು ಜಿಲ್ಲೆ): ಹುಣಸೂರು ತಾಲ್ಲೂಕಿನ ನಾಲ್ಕು ಕಡೆಗಳಲ್ಲಿ ಸಾರಿಗೆ ಸಂಸ್ಥೆಯ ಬಸ್ಸುಗಳ ಮೇಲೆ ಭಾನುವಾರ ಸಂಜೆ ಕಲ್ಲು ತೂರಾಟ ನಡೆದಿದೆ. ಕಿಟಕಿಗಳ ಗಾಜುಗಳು ಪುಡಿಯಾಗಿದ್ದು, ಬಸ್ಸೊಂದರಲ್ಲಿದ್ದ ಪ್ರಯಾಣಿಕರೊಬ್ಬರು ಗಾಯಗೊಂಡಿದ್ದಾರೆ.

ಬನ್ನಿಕುಪ್ಪೆ ಬಳಿ ಬಸ್ ಮೇಲೆ ಕಲ್ಲು ತೂರಿ ಜಖಂಗೊಳಿಸಿದ ಪ್ರಕರಣ ಸಂಬಂಧ, ಹುಣಸೂರು ಬಸ್ ಡಿಪೊ ಮೆಕ್ಯಾನಿಕ್ ವಿಭಾಗದ ಕೃಷ್ಣಮೂರ್ತಿ ಹಾಗೂ ಸಂತೋಷ ಭಜಂತ್ರಿ ಎಂಬುವವರನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ, ಡಿಪೊ ವ್ಯವಸ್ಥಾಪಕ ವಿಪಿನ್ ಕೃಷ್ಣ ಅವರು ಹುಣಸೂರು ಗ್ರಾಮಾಂತರ ಮತ್ತು ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿದ್ದರು.

ಪ್ರಕರಣ ದಾಖಲು: ಮೈಸೂರು ಹೊರವಲಯದ ಹಿನಕಲ್‌ನಲ್ಲಿರುವ ವಿಜಯನಗರ ಬಸ್ ಡಿಪೋಕ್ಕೆ ಬರುತ್ತಿದ್ದ ನೌಕರರನ್ನು ತಡೆದು, ಕರ್ತವ್ಯಕ್ಕೆ ಅಡ್ಡಿಪಡಿಸಿದ ಸಾರಿಗೆ ಸಂಸ್ಥೆಯ ನೌಕರರಾದ ವಿಶ್ವನಾಥ್, ಲೋಕೇಶ್, ಮಂಜುನಾಥ್ ಎಂಬುವವರ ವಿರುದ್ಧ ವಿಜಯನಗರ ಡಿಪೋ ವ್ಯವಸ್ಥಾಪಕ ನಟರಾಜು ದೂರು ದಾಖಲಿಸಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘ

ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು–560004

ಚುನಾವಣಾ ವಿಭಾಗದ ದೂರವಾಣಿ: 080–26611031 ಅಂತರ್ಜಾಲ ವಿಳಾಸ: www.rvsangha.org

ರಾ.ಒ.ಸಂ/ಆಡಳಿತ/2020–21 ದಿನಾಂಕ: 10–04–2021

ಪ್ರಕಟಣೆ

ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಗೆ ಮತದಾನ ಮಾಡಲು ಅರ್ಹರಿರುವ ಸದಸ್ಯರ ಅಂತಿಮ ಮತದಾರರ ಪಟ್ಟಿಯನ್ನು (Final Voters list) ರಾಜ್ಯ ಒಕ್ಕಲಿಗರ ಸಂಘದ ವೆಬ್‌ಸೈಟ್ www.rvsangha.org ನಲ್ಲಿ ದಿನಾಂಕ: 10–04–2021 ರಂದು ಪ್ರಕಟಿಸಲಾಗಿದೆ. ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯು ದಿನಾಂಕ: 16–05–2021 ರಂದು ನಡೆಯಲಿದ್ದು, ಬೆಂಗಳೂರು ಹೊರತು ಪಡಿಸಿ ಉಳಿದ ಜಿಲ್ಲೆಗಳಲ್ಲಿ ತಾಲ್ಲೂಕುವಾರು ಮತದಾರರ ಪಟ್ಟಿ ಮತ್ತು ಬೆಂಗಳೂರು ನಗರದಲ್ಲಿ ಪಿನ್ ಕೋಡ್‌ವಾರು ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಪಡಿಸಲಾಗಿರುತ್ತದೆ. ಸದರಿ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್ ವಿಳಾಸದಲ್ಲಿ ಪರಿಶೀಲಿಸಿಕೊಳ್ಳಬಹುದು. ಪ್ರಕಟಿತ ಪಟ್ಟಿಯು ಅಂತಿಮ ಮತದಾರರ ಪಟ್ಟಿಯಾಗಿದ್ದು, ಸದರಿ ಪಟ್ಟಿಗೆ ಯಾವುದೇ ಆಕ್ಷೇಪಣೆ/ಅಹವಾಲು ಸಲ್ಲಿಸಲು ಅವಕಾಶವಿರುವುದಿಲ್ಲ.

ಅಂತಿಮ ಮತದಾರರ ಪಟ್ಟಿ ಅವಶ್ಯವಿರುವ ಸದಸ್ಯರು ಸಂಘದ ಚುನಾವಣಾ ವಿಭಾಗದಲ್ಲಿ ಅರ್ಜಿ ಸಲ್ಲಿಸಿ ನಿಗದಿಪಡಿಸಿದ ಶುಲ್ಕ ಪಾವತಿಸಿ, ಅಂತಿಮ ಮತದಾರರ ಪಟ್ಟಿ ಮತ್ತು ದೂರವಾಣಿ ಸಂಖ್ಯೆಗಳ ಮಾಹಿತಿಯುಳ್ಳ ಸಿಡಿ (ಸಾಫ್ಟ್ ಕಾಪಿ) ಪಡೆಯಬಹುದು.

ವಿಶೇಷ ಸೂಚನೆ: ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಗೆ ಮತದಾನ ಮಾಡಲು ಗುರುತಿನ ಚೀಟಿ ಕಡ್ಡಾಯವಾಗಿದ್ದು, ಸಂಘದ ಸದಸ್ಯತ್ವ ಪಡೆದು ಈವರೆಗೆ ಗುರುತಿನ ಚೀಟಿ ಪಡೆಯದ ಸದಸ್ಯರು ಮೇಲ್ಕಂಡ ವಿಳಾಸದಲ್ಲಿ ಸ್ವೀಕೃತಿ ಸಲ್ಲಿಸಿ ಗುರುತಿನ ಚೀಟಿ ಪಡೆದುಕೊಳ್ಳಲು ಸೂಚಿಸಿದೆ. ಈಗಾಗಲೇ ಗುರುತಿನ ಚೀಟಿ ಪಡೆದಂತಹ ಸದಸ್ಯರುಗಳು ಒಂದು ವೇಳೆ ಗುರುತಿನ ಚೀಟಿಯನ್ನು ಕಳೆದು ಕೊಂಡಿದ್ದಲ್ಲಿ, ಮೇಲ್ಕಂಡ ವಿಳಾಸದ ಸಂಘದ ಚುನಾವಣಾ ವಿಭಾಗದಲ್ಲಿ ರೂ. 100/–ಗಳ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿ, ಮತ್ತೊಂದು ಗುರುತಿನ ಚೀಟಿ ಪಡೆಯಲು ದಿನಾಂಕ: 05–05–2021 ರಂದು ಕೊನೆಯ ದಿನಾಂಕವಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿ
ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು–560004

ಹೆಚ್ಚಿದ ಜನದಟ್ಟಣೆ • ಖಾಸಗಿ–ಸರ್ಕಾರಿ ಬಸ್ ಪೈಪೋಟಿ • ಇದುವರೆಗೆ 456 ಮಂದಿ ನೌಕರರ ವಜಾ

ಮುಷ್ಕರ ಮುಂದುವರಿಕೆ: ಸ್ವಂತ ವಾಹನಗಳೇ ಆಧಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ ಐದನೇ ದಿನವೂ ಮುಂದುವರಿದಿದ್ದು, ಸಾರ್ವಜನಿಕರು ಭಾನುವಾರ ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಂಡಂತೆ ಕಂಡುಬಂದರು. ಸ್ವಂತ ವಾಹನ ಇದ್ದವರು ಬೈಕ್, ಕಾರುಗಳಲ್ಲಿ ತಮ್ಮ ಊರಿಗೆ ತೆರಳುವುದು ಸಾಮಾನ್ಯವಾಗಿತ್ತು.

ಸರ್ಕಾರಿ ಬಸ್‌ಗಳ ಸಂಖ್ಯೆ ಕಡಿಮೆಯಿದ್ದರೆ, ಖಾಸಗಿ ಬಸ್‌ಗಳಲ್ಲಿ ದೂರದ ಊರಿಗೆ ನೇರ ಬಸ್ ಸೌಲಭ್ಯ ಇರಲಿಲ್ಲ. ಅಲ್ಲದೆ, ಮೆಜೆಸ್ಟಿಕ್ ತಲುಪಲು ಆಟೊ, ಟ್ಯಾಕ್ಸಿಯವರಿಗೆ ಹೆಚ್ಚು ಹಣ ನೀಡುವ ಬದಲು ಸ್ವಂತ ವಾಹನದಲ್ಲಿ ನೇರವಾಗಿ ಊರಿಗೆ ಹೋಗುವುದೇ ಉತ್ತಮ ಎಂದು ನಿರ್ಧಾರ ಮಾಡಿದವರಂತೆ ಜನ ಊರಿನತ್ತ ಮುಖ ಮಾಡಿದ್ದರು.

‘ತುಮಕೂರಿನಿಂದ ಮತ್ತೆ 15 ಕಿ.ಮೀ. ದೂರದಲ್ಲಿರುವ ಹಳ್ಳಿಗೆ ಹೋಗಬೇಕು. ಎರಡು ಕಡೆ ಬಸ್‌ಗಳಿಗೆ ಮತ್ತು ಆಟೊಗೆ ದುಡ್ಡು ಕೊಡುವ ಬದಲು ಬೈಕ್‌ನಲ್ಲಿಯೇ ಕುಟುಂಬ ಸಮೇತ ಊರಿಗೆ ಹೋಗುತ್ತಿದ್ದೇವೆ’ ಎಂದು ಬೈಕ್ ಸವಾರ ರಮೇಶ್ ಹೇಳಿದರು.

‘ಚಿತ್ರದುರ್ಗಕ್ಕೆ ಹೋಗಬೇಕು. ಬಸ್‌ಗಳು ಇಲ್ಲದೆ ಸಮಸ್ಯೆಯಾಗಿದೆ. ಖಾಸಗಿ ಬಸ್ ಟಿಕೆಟ್, ಆಟೊ ಪ್ರಯಾಣ ದರ ಎಲ್ಲ ಲೆಕ್ಕ ಹಾಕಿದರೆ, ಸ್ವಂತ ವಾಹನಕ್ಕೆ ಪೆಟ್ರೋಲ್ ಹಾಕಿಸಿಕೊಂಡು ಹೋಗುವುದೇ ಉತ್ತಮ ಎನಿಸಿತು’ ಎಂದು ಕಾರಿನಲ್ಲಿ ಕುಟುಂಬ ಸಮೇತ ಹೊರಟಿದ್ದ ಕಿರಣ್ ಹೇಳಿದರು.

‘ಬೈಕ್‌ನಲ್ಲಿ ಹೋದರೆ ಟೋಲ್ ಕೂಡ ಕಟ್ಟಬೇಕಾಗಿಲ್ಲ. ಪರಿಸ್ಥಿತಿ ನೋಡಿದರೆ ಮತ್ತೆ ಲಾಕ್‌ಡೌನ್ ಮಾಡುವ ಸಾಧ್ಯತೆ ಇದೆ. ಹೀಗಾಗಿ, ಸ್ವಂತ ವಾಹನದಲ್ಲಿಯೇ ಊರಿಗೆ ಹೋಗುವುದು ಒಳ್ಳೆಯದು ಎಂದು ನಿರ್ಧರಿಸಿದೆವು’ ಎಂದು ಹೇಳಿದರು ಬಸವರಾಜ್.

ದಟ್ಟಣೆ: ನಗರದಲ್ಲಿ ಭಾನುವಾರ ಬಿಎಂಟಿಸಿಯ ಸುಮಾರು 300ಕ್ಕೂ ಹೆಚ್ಚು ಬಸ್‌ಗಳು ರಸ್ತೆಗಿಳಿದರೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದುದರಿಂದ ಸಮರ್ಪಕ ಸೇವೆ ನೀಡಲು ಸಾಧ್ಯವಾಗಲಿಲ್ಲ. ನಗರದ ವಿವಿಧೆಡೆಯಿಂದ ಮೆಜೆಸ್ಟಿಕ್‌ಗೆ ಬರಲು ಟ್ಯಾಕ್ಸಿ, ಆಟೊಗಳನ್ನೇ ಜನ ಅವಲಂಬಿಸಬೇಕಾಯಿತು.

ಬಿಎಂಟಿಸಿ ಬಸ್ ನಿಲ್ದಾಣವಲ್ಲದೆ, ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯದ ಬಸ್‌ಗಳು ಇದ್ದುದರಿಂದ ದಟ್ಟಣೆ ಉಂಟಾಯಿತು. ಹೊರ ಊರಿಗೆ ತೆರಳಬೇಕಾದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರಲಿಲ್ಲ. ಅಂದರೆ, ಹಬ್ಬದ ಸಂದರ್ಭದಲ್ಲಿ ಸಾಮಾನ್ಯವಾಗಿ ಇರುತ್ತಿದ್ದಷ್ಟು ಪ್ರಯಾಣಿಕರು ಭಾನುವಾರ ಕಂಡು ಬರಲಿಲ್ಲ.

‘ಸ್ವಂತ ವಾಹನವಿದ್ದವರು ಹೋಗುತ್ತಾರೆ. ಆದರೆ, ಬೈಕ್ ಕೂಡ ಇಲ್ಲದ ನಮ್ಮಂಥವರು ಖಾಸಗಿ ಬಸ್‌ಗಳಿಗೆ ಹೆಚ್ಚು ದುಡ್ಡು ಕೊಟ್ಟು ಪ್ರಯಾಣಿಸಲೇಬೇಕಾಗಿದೆ’ ಎಂದು ಅಂಬಿಕಾ ಎಂಬುವರು ಅಳಲು ತೋಡಿಕೊಂಡರು.

ಇಂದು ಪ್ರತಿಭಟನೆ: ಮುಷ್ಕರವನ್ನು ತೀವ್ರಗೊಳಿಸಲು ನಿರ್ಧರಿಸಿರುವ ನೌಕರರು, ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ. ತಟ್ಟೆ, ಲೋಟ ಬಡಿದುಕೊಂಡು ಧರಣಿ ನಡೆಸಲಿದ್ದಾರೆ.

ಬೈಕ್‌ನಲ್ಲಿಯೇ ಊರಿಗೆ ತೆರಳಲು ಕುಟುಂಬವೊಂದು ಸಿದ್ಧತೆ ನಡೆಸುತ್ತಿದ್ದ ದೃಶ್ಯ ನೆಲಮಂಗಲ ಬಳಿ ಭಾನುವಾರ ಕಂಡು ಬಂತು ಪ್ರಜಾವಾಣಿ ಚಿತ್ರ

ಮತ್ತೆ 122 ನೌಕರರು ವಜಾ

ತರಬೇತಿ ನಿರತ ಮತ್ತು ಪ್ರೊಬೇಷನರಿ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ವಜಾಗೊಳಿಸುವ ಪ್ರಕ್ರಿಯೆಯನ್ನು ಬಿಎಂಟಿಸಿ ಮುಂದುವರಿಸಿದೆ.

ಐದು ದಿನಗಳಿಂದ ಕರ್ತವ್ಯಕ್ಕೆ ಹಾಜರಾಗದೆ ಮುಷ್ಕರ ಬೆಂಬಲಿಸಿ ನೇಮಕಾತಿ ನಿಯಮ ಉಲ್ಲಂಘಿಸಿದ ಆರೋಪದಡಿ ಮತ್ತೆ 60 ತರಬೇತಿ ನೌಕರರು ಮತ್ತು 62 ಪ್ರೊಬೇಷನರಿ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ವಜಾಗೊಳಿಸಲಾಗಿದೆ. ಆ ಮೂಲಕ ಕಳೆದ ನಾಲ್ಕು ದಿನಗಳಲ್ಲಿ ನಿಗಮದ 456 ಮಂದಿ ನೌಕರರನ್ನು ವಜಾಗೊಳಿಸಿದಂತಾಗಿದೆ.

ಬಿಎಂಟಿಸಿಯು ಏ.7 ಮತ್ತು 8ರಂದು ನಿಗಮದ 1,484 ಮಂದಿ ತರಬೇತಿ ನಿರತ ನೌಕರರು ಹಾಗೂ 1,293 ಮಂದಿ ಪ್ರೊಬೇಷನರಿ ನೌಕರರಿಗೆ ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿತ್ತು. ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿತ್ತು.

ಖಾಸಗಿ ಚಾಲಕನಿಂದ ಅಪಘಾತ

ಬಿಎಂಟಿಸಿಯು ತನ್ನ ಬಸ್‌ಗಳನ್ನು ಖಾಸಗಿ ಚಾಲಕರಿಗೆ ಓಡಿಸಲು ಅನುಮತಿ ನೀಡಿತ್ತು. ಅತ್ತಿಬೆಲೆಯಿಂದ ಸರ್ಜಾಪುರದ ಕಡೆಗೆ ಹೊರಟಿದ್ದ ಬಸ್ ಭಾನುವಾರ ಮಧ್ಯಾಹ್ನ ಮರವೊಂದಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೆ ಈಡಾಯಿತು. ಬಸ್‌ನಲ್ಲಿದ್ದ ಅನೇಕರಿಗೆ ಗಾಯಗಳಾದವು. ಪ್ರಯಾಣಿಕರು ಚಾಲಕ ಮತ್ತು ಬಿಎಂಟಿಸಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಅನುಭವ ಇಲ್ಲದವರಿಗೆಲ್ಲ ಬಸ್ ಓಡಿಸಲು ಬಿಎಂಟಿಸಿ ಅನುಮತಿ ನೀಡುತ್ತಿದೆ. ಸರ್ಕಾರ ಸಾರ್ವಜನಿಕರ ಜೀವದ ಜೊತೆ ಆಟವಾಡುತ್ತಿದೆ’ ಎಂದು ಸ್ಥಳೀಯರು ದೂರಿದರು.

ರಾತ್ರಿ ಕರ್ಫ್ಯೂ; 61 ವಾಹನ ಜಪ್ತಿ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಶನಿವಾರ ರಾತ್ರಿ ಜಾರಿ ಮಾಡಿದ್ದ ಕರ್ಫ್ಯೂ ವೇಳೆ 61 ವಾಹನಗಳನ್ನು ಆಗ್ನೇಯ ವಿಭಾಗದ ಪೊಲೀಸರು ಜಪ್ತಿ ಮಾಡಿದ್ದಾರೆ.

‘ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ತುರ್ತು ಸೇವಾ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶವಿತ್ತು. ಇದೇ ಸಂದರ್ಭದಲ್ಲಿ ಕೆಲವರು, ಅನಗತ್ಯವಾಗಿ ವಾಹನಗಳಲ್ಲಿ ಓಡಾಡುತ್ತಿದ್ದರು. ಅಂಥವರನ್ನು ತಡೆದು ವಾಹನ ಜಪ್ತಿ ಮಾಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘55 ದ್ವಿಚಕ್ರ ವಾಹನ, 5 ಕಾರುಗಳು ಹಾಗೂ ಆಟೊ ಜಪ್ತಿ ಮಾಡಲಾಗಿದೆ. ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ’ ಎಂದರು.

ಏಪ್ರಿಲ್ 20ರವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿರಲಿದೆ. ಪ್ರತಿಯೊಂದು ರಸ್ತೆಯಲ್ಲೂ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಬಿಎಂಟಿಸಿ ನಿರ್ಧಾರದ ವಿರುದ್ಧ ಹಿರಿಯ ನೌಕರರ ಅಸಮಾಧಾನ

‘ಪ್ರಮಾಣಪತ್ರ ಕೊಡಲ್ಲ, ವಜಾ ಮಾಡಿ’

• ಗುರು ಪಿ.ಎಸ್.

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ವೈದ್ಯಕೀಯ ಹಾಗೂ ದೈಹಿಕ ಕ್ಷಮತೆಯ ಪ್ರಮಾಣಪತ್ರ ಕೇಳುವ ನೆಪದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಬಲವಂತ ಮಾಡಲಾಗುತ್ತಿದೆ. ನಾವು ಪ್ರಮಾಣಪತ್ರ ಕೊಡುವುದಿಲ್ಲ. ಕಡ್ಡಾಯ ನಿವೃತ್ತಿ ಕೊಡಲಿ ಅಥವಾ ವಜಾ ಮಾಡಲಿ’

ಬಿಎಂಟಿಸಿ ವಿರುದ್ಧ ಹಿರಿಯ ಚಾಲಕರು ಮತ್ತು ನಿರ್ವಾಹಕರು ಹೀಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. 55 ವರ್ಷ ಮೇಲ್ಪಟ್ಟ ನೌಕರರು ಸೋಮವಾರ ಸಂಜೆಯ ವೇಳೆಗೆ (ಏ.12) ವೈದ್ಯಕೀಯ ಮತ್ತು ದೈಹಿಕ ಕ್ಷಮತೆಯ ಪ್ರಮಾಣಪತ್ರ ನೀಡಬೇಕು ಎಂಬ ಬಿಎಂಟಿಸಿ ಸೂಚನೆಯ ವಿರುದ್ಧ ಹರಿಹಾಯ್ದಿದ್ದಾರೆ.

‘ನಾನು 32 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಯಾವ ವರ್ಷವೂ ಈ ಪ್ರಮಾಣಪತ್ರಗಳನ್ನು ಕೇಳಿರಲಿಲ್ಲ. ಸೇವೆಗೆ ಸೇರುವಾಗ ಕೇಳುವುದು ಸ್ವಾಭಾವಿಕ. ಆದರೆ, ಈಗ ಮುಷ್ಕರ ನಡೆಯುತ್ತಿರುವ ಸಂದರ್ಭದಲ್ಲಿ ಇದನ್ನೆಲ್ಲ ಸರ್ಕಾರ ಮಾಡುತ್ತಿದೆ. ಭಾನುವಾರ ಬೆಳಿಗ್ಗೆಯಿಂದ 20ಕ್ಕೂ ಹೆಚ್ಚು ಸಲ ಕರೆ ಮಾಡಿದ್ದಾರೆ. ನಾನು ಪ್ರಮಾಣಪತ್ರ ಕೊಡುವುದಿಲ್ಲ’ ಎಂದು ಚಾಲಕ ಸಿ. ಮುನಿರಾಜ ಹೇಳಿದರು.

‘ವಾಟ್ಸ್‌ಆ್ಯಪ್ ಅಥವಾ ಇ–ಮೇಲ್ ಮೂಲಕವಾಗಲಿ, ಮಕ್ಕಳ ಮೂಲಕವಾಗಿ ಪ್ರಮಾಣಪತ್ರ ಕೊಡಲು ಅವಕಾಶ ಕೊಡುತ್ತಿಲ್ಲ. ಖುದ್ದಾಗಿ ಬರಲು ಹೇಳುತ್ತಿದ್ದಾರೆ. ನಾವೇ ನೇರವಾಗಿ ಹೋದರೆ ನಮ್ಮನ್ನು ಕೂಡಿ ಹಾಕುತ್ತಾರೆ. ಕರ್ತವ್ಯಕ್ಕೆ ಹಾಜರಾಗುವಂತೆ ಒತ್ತಡ ಹಾಕುತ್ತಾರೆ’ ಎಂದು ಅವರು ದೂರಿದರು.

‘ಬೆಸ್ಕಾಂ, ಬಿಡಿಎ, ಬಿಬಿಎಂಪಿ ಅಥವಾ ಜಲಮಂಡಳಿ ಯಾವುದೇ ಸಂಸ್ಥೆ ತೆಗೆದುಕೊಂಡರೂ ಆ ನೌಕರರಿಗೆ ನಮಗಿಂತ ಎರಡರಷ್ಟು ವೇತನವಿದೆ. 32 ವರ್ಷ ಕೆಲಸ ಮಾಡಿದರೂ ನಮಗೆ ₹50ಸಾವಿರ ಆಸುಪಾಸು ವೇತನವಿದೆ. ಇಷ್ಟೇ ವರ್ಷ ಸೇವೆ ಸಲ್ಲಿಸಿದವರಿಗೆ ಬೇರೆ ಇಲಾಖೆಯಲ್ಲಿ ₹1ಲಕ್ಷಕ್ಕೂ ಹೆಚ್ಚು ವೇತನವಿದೆ. ನ್ಯಾಯ ಕೇಳುವುದು ತಪ್ಪೇ’ ಎಂದು ಅವರು ಪ್ರಶ್ನಿಸಿದರು.

ಇತ್ಯರ್ಥಗೊಳಿಸಲಿ: ‘ವಜಾ ಮಾಡಿದರೂ ಅಥವಾ ಕಡ್ಡಾಯ ನಿವೃತ್ತಿಗೊಳಿಸಿದರೂ ಹೆದರುವುದಿಲ್ಲ. ನಿವೃತ್ತಿ ನಂತರ ನಮಗೆ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಬೇಗ ನೀಡಲಿ. ಐದು ವರ್ಷ ಸೇವಾವಧಿ ಕಡಿಮೆಯಾದರೂ ಪರವಾಗಿಲ್ಲ, ನಿವೃತ್ತಿ ನಂತರ ಬರುವ ಹಣವನ್ನೇ ಬಂಡವಾಳ ಮಾಡಿಕೊಂಡು ಬೇರೆ ಏನಾದರೂ ಮಾಡುತ್ತೇವೆ’ ಎಂದು ಚಾಲಕರೊಬ್ಬರು ಹೇಳಿದರು.

‘30 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಆದರೆ, ಕಳೆದ ಒಂದು ವರ್ಷದಿಂದ ತುಂಬಾ ಕಿರುಕುಳ ನೀಡುತ್ತಿದ್ದಾರೆ. ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಕೆಲಸ ಮಾಡಬೇಕು. ಹಳೆಯ ಬಸ್‌ಗಳನ್ನು ಕೊಟ್ಟು ಓಡಿಸಲು ಹೇಳುತ್ತಾರೆ. ಸಂಸ್ಥೆಯನ್ನು ಖಾಸಗಿಯವರಿಗೆ ಕೊಡುವ ಉದ್ದೇಶದಿಂದಲೇ ಸರ್ಕಾರ ಹೀಗೆ ಮಾಡುತ್ತಿದೆ’ ಎಂದು ಅವರು ದೂರಿದರು.

106 ಕೆ.ಜಿ ಗಾಂಜಾ ಜಪ್ತಿ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಜಾಲ ಭೇದಿಸಿರುವ ಕೋರಮಂಗಲ ಪೊಲೀಸರು, ಮೂವರು ಆರೋಪಿಗಳನ್ನು ಸೆರೆ ಹಿಡಿದಿದ್ದಾರೆ.

‘ಕನಕಪುರ ತಾಲ್ಲೂಕಿನ ಕುಪ್ಪದೊಡ್ಡಿಯ ಕೆ. ರವಿಕುಮಾರ್ (25), ಕೊಳ್ಳೇಗಾಲ ಚಿಕ್ಕಲಕೂರಿನ ಮಾರಪ್ಪ ಅಲಿಯಾಸ್ ಕುಳ್ಳ (24) ಹಾಗೂ ಒಡಿಶಾ ಕಟಕ್ ಜಿಲ್ಲೆಯ ರಾಜ ಕಿಶೋರ್ ನಾಯಕ್ (26) ಬಂಧಿತರು. ಅವರಿಂದ 106 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೋರಮಂಗಲ 8ನೇ ಹಂತದ 2ನೇ ಮುಖ್ಯರಸ್ತೆಯ ಬೇಕರಿಯೊಂದರ ಬಳಿ ಬರುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಗಾಂಜಾ ಮಾರಾಟ ಮಾಡಿ ಹೋಗುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಬಾಡಿಗೆ ಮನೆಯಲ್ಲಿ ಗಾಂಜಾ: ‘ಕೆಲಸದ ಸ್ಥಳದಲ್ಲಿ ಆರೋಪಿಗಳು ಪರಿಚಯವಾಗಿತ್ತು. ನಂತರ ಗಾಂಜಾ ಮಾರಾಟ ಮಾಡಿ ಅಕ್ರಮವಾಗಿ ಹಣ ಗಳಿಸಲು ಮುಂದಾಗಿದ್ದರು’ ಎಂದೂ ಪೊಲೀಸರು ಹೇಳಿದರು.

‘ಆಂಧ್ರಪ್ರದೇಶದಿಂದ ಗಾಂಜಾ ಖರೀದಿಸಿ ನಗರಕ್ಕೆ ತಂದಿದ್ದ ಆರೋಪಿಗಳು, ಬೇಗೂರು ಮೈಲಸಂದ್ರ ಬಳಿಯ ಬಾಡಿಗೆ ಮನೆಯೊಂದರಲ್ಲಿ ಸಂಗ್ರಹಿಸಿಟ್ಟಿದ್ದರು. ಮನೆ ಮೇಲೆ ದಾಳಿ ಮಾಡಿ, ಚೀಲದಲ್ಲಿ ಕಟ್ಟಿಟ್ಟಿದ್ದ ಗಾಂಜಾವನ್ನು ಜಪ್ತಿ ಮಾಡಲಾಗಿದೆ’ ಎಂದರು.

‘ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕಾರ್ಮಿಕರಿಗೆ ಆರೋಪಿಗಳು ಗಾಂಜಾ ಮಾರುತ್ತಿದ್ದರು. ಈ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದೆ’ ಎಂದೂ ತಿಳಿಸಿದರು.

ಜಪ್ತಿ ಮಾಡಲಾದ ಗಾಂಜಾ ಚೀಲಗಳ ಜೊತೆಯಲ್ಲಿ ಆರೋಪಿಗಳು

ಪಾಲಿಶ್ ಯಂತ್ರಕ್ಕೆ ಸಿಲುಕಿ ಬಾಲಕ ಸಾವು

ಬೆಂಗಳೂರು: ಸೀರೆ ಪಾಲಿಶ್ ಮಾಡುವ ಯಂತ್ರಕ್ಕೆ ಸಿಲುಕಿ ಸಚಿನ್ (14) ಎಂಬಾತ ಮೃತಪಟ್ಟಿದ್ದು, ಈ ಸಂಬಂಧ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೃತ ಸಚಿನ್‌ನ ಪೋಷಕರು ಉತ್ತರಪ್ರದೇಶದವರು. ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಹೊಸಗುಡ್ಡದಹಳ್ಳಿಯಲ್ಲಿ ನೆಲೆಸಿದ್ದರು’ ಎಂದು ಪೊಲೀಸರು ಹೇಳಿದರು.

‘ಬಾಲಕನ ಅಕ್ಕ, ಹೊಸಗುಡ್ಡದಹಳ್ಳಿಯಲ್ಲಿರುವ ಸೀರೆಗೆ ಪಾಲಿಶ್ ಮಾಡುವ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಶನಿವಾರ ಮಧ್ಯಾಹ್ನ ಅಕ್ಕನಿಗೆ ಊಟ ಕೊಡಲೆಂದು ಬಾಲಕ ಸಚಿನ್, ಕೇಂದ್ರಕ್ಕೆ ಬಂದಿದ್ದ. ಊಟ ಕೊಟ್ಟು ವಾಪಸು ಹೋಗುವಾಗ ಆಕಸ್ಮಿಕವಾಗಿ ಯಂತ್ರದ ಬಳಿ ಕೈ ಇಟ್ಟಿದ್ದ. ಕೈ ಯಂತ್ರದೊಳಗೆ ಹೋಗಿ ಮುರಿದಿತ್ತು. ತಲೆಗೂ ಪೆಟ್ಟಾಗಿ ರಕ್ತ ಸೋರುತ್ತಿತ್ತು.’

‘ಕೇಂದ್ರದಲ್ಲಿದ್ದ ಸಿಬ್ಬಂದಿ, ಬಾಲಕನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಬಾಲಕ ಮೃತಪಟ್ಟಿದ್ದಾನೆ. ಬಾಲಕನ ಸಾವಿಗೆ ಯಾರ ನಿರ್ಲಕ್ಷ್ಯ ಕಾರಣವೆಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದೂ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಕೊಚ್ಚಿ ರೌಡಿ ‘ಕಾಡು’ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ರೌಡಿ ಸುನೀಲ್ ಅಲಿಯಾಸ್ ಕಾಡುನನ್ನು (34) ಮಾರಕಾಸ್ತ್ರಗಳಿಂದ ಕೊಚ್ಚಿ ಶನಿವಾರ ತಡರಾತ್ರಿ ಕೊಲೆ ಮಾಡಲಾಗಿದೆ.

‘ಸ್ಥಳೀಯ ನಿವಾಸಿಯಾಗಿದ್ದ ಸುನೀಲ್, ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಬ್ಯಾಟರಾಯನಪುರ ಠಾಣೆ ರೌಡಿ ಪಟ್ಟಿಯಲ್ಲಿ ಆತನ ಹೆಸರಿತ್ತು’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ಕಸ್ತೂರಿ ನಗರದಲ್ಲಿ ಸುನೀಲ್‌ನನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳ ತಂಡ, ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದೆ. ತೀವ್ರ ರಕ್ತಸ್ರಾವದಿಂದ ಸುನೀಲ್ ರಸ್ತೆಯಲ್ಲೇ ನರಳಿ ಪ್ರಾಣ ಬಿಟ್ಟಿದ್ದಾನೆ. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ತಿಳಿಸಿದರು.

‘ರೌಡಿ ಸೋಮನ ಕೊಲೆ ಪ್ರಕರಣದ ಆರೋಪಿಯಾಗಿದ್ದ ಸುನೀಲ್, ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಅದೇ ಕಾರಣಕ್ಕೆ ಸುನೀಲ್ ಹಾಗೂ ರೌಡಿ ಸೋಮನ ಸಹಚರರ ನಡುವೆ ಆಗಾಗ ಜಗಳವಾಗುತ್ತಿತ್ತು. ಸೋಮನ ಸಹಚರರೇ ಕೃತ್ಯ ಎಸಗಿರುವ ಅನುಮಾನವಿದೆ’ ಎಂದರು.

ಈಜು ಕೋಚ್ ಆತ್ಮಹತ್ಯೆ

ಬೆಂಗಳೂರು: ಈಜು ಮತ್ತು ಡೈವಿಂಗ್ ಕೋಚ್ ಶಿಲ್ಪಾ (41) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿಲ್ಪಾ

‘ಮಾರೇನಹಳ್ಳಿ ನಿವಾಸಿಯಾಗಿದ್ದ ಶಿಲ್ಪಾ, ಪತಿ ನೀಲಕೃಷ್ಣ ಪ್ರಸಾದ್ ಜೊತೆ ವಾಸವಿದ್ದರು. ಶುಕ್ರವಾರ (ಏಪ್ರಿಲ್ 9) ಬೆಳಿಗ್ಗೆ ಪತಿ ಕೆಲಸ ನಿಮಿತ್ತ ಹೊರಗಡೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಶಿಲ್ಪಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಗರದ ಶಾಲೆಯೊಂದರಲ್ಲಿ ಕೋಚ್ ಆಗಿ ಕೆಲಸ ಮಾಡುತ್ತಿದ್ದ ಶಿಲ್ಪಾ ಅವರಿಗೆ ಏಕಲವ್ಯ ಪ್ರಶಸ್ತಿ ಸಹ ಸಿಕ್ಕಿತ್ತು. ಕಳೆದ ವರ್ಷ ಲಾಕ್‌ಡೌನ್‌ದಿಂದಾಗಿ ಶಾಲೆ ಬಂದ್ ಆಗಿ ಕೆಲಸ ಹೋಗಿತ್ತು. ಈ ವರ್ಷ ವಾಪಸು ಕೆಲಸಕ್ಕೆ ತೆಗೆದುಕೊಂಡಿರಲಿಲ್ಲ. ನಾಲ್ಕು ತಿಂಗಳ ಹಿಂದಷ್ಟೇ ಶಿಲ್ಪಾ ಅವರ ತಾಯಿಯೂ ತೀರಿಕೊಂಡಿದ್ದರು.’

‘ಕೆಲಸ ಹೋಗಿದ್ದರಿಂದ ಹಾಗೂ ತಾಯಿ ತೀರಿಕೊಂಡಿದ್ದರಿಂದ ಮಾನಸಿಕವಾಗಿ ನೊಂದಿದ್ದರು ಎನ್ನಲಾದ ಶಿಲ್ಪಾ ಈ ರೀತಿ ಮಾಡಿಕೊಂಡಿದ್ದಾರೆ. ಕೊಠಡಿಯಲ್ಲಿ ಮರಣ ಪತ್ರವೂ ಸಿಕ್ಕಿದ್ದು, ಪರಿಶೀಲಿಸಲಾಗುತ್ತಿದೆ. ಪತಿ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕತ್ತು ಕೊಯ್ದು ಮಹಿಳೆ ಹತ್ಯೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಶಾಹಿನಾ ತಾಜ್ (40) ಎಂಬುವರನ್ನು ಶನಿವಾರ ಕತ್ತು ಕೊಯ್ದು ಕೊಲೆ ಮಾಡಲಾಗಿದೆ.

‘ಬೇಗೂರು ಸುಭಾಷ್‌ನಗರದಲ್ಲಿ ಶಾಹಿನಾ ತಾಜ್ ಹಾಗೂ ಪತಿ ಚಾಂದ್ ಪಾಷಾ ವಾಸವಿದ್ದರು. ಆಟೊ ಚಾಲಕರಾಗಿದ್ದ ಚಾಂದ್, ಶನಿವಾರ ಬೆಳಿಗ್ಗೆ ಎಂದಿನಂತೆ ಕೆಲಸಕ್ಕೆ ಹೋಗಿದ್ದಾಗ ಈ ಘಟನೆ ನಡೆದಿದೆ’ ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿ ಶಾಹಿನಾ ಒಬ್ಬರೇ ಇರುವುದನ್ನು ತಿಳಿದುಕೊಂಡ ದುಷ್ಕರ್ಮಿಗಳು, ಮನೆಯೊಳಗೆ ನುಗ್ಗಿ, ಆಯುಧದಿಂದ ಕತ್ತು ಕೊಯ್ದಿದ್ದಾರೆ. ತೀವ್ರ ರಕ್ತಸ್ರಾವದಿಂದಾಗಿ ಶಾಹಿನಾ ಸ್ಥಳದಲ್ಲೇ ಮೃಪತಟ್ಟಿದ್ದಾರೆ’ ಎಂದೂ ತಿಳಿಸಿದರು.

‘ಕೆಲಸಕ್ಕೆ ಹೋಗಿದ್ದ ಚಾಂದ್, ರಾತ್ರಿ ಮನೆಗೆ ಬಂದಿದ್ದರು. ಬೆಡ್ ಮೇಲೆ ಶಾಹಿನಾ ಮೃತದೇಹವಿತ್ತು. ಅದನ್ನು ನೋಡಿದ್ದ ಅವರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ಹೇಳಿದರು.

‘ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದೆ. ಮನೆ ಅಕ್ಕ–ಪಕ್ಕದ ಸಿ.ಸಿ.ಟಿ.ವಿ ಕ್ಯಾಮೆರಾ ಡಿವಿಆರ್ ಪಡೆದು ಪರಿಶೀಲನೆ ನಡೆಲಾಗುತ್ತಿದೆ’ ಎಂದರು.

ಸುದ್ದಿ 2 ನಿಮಿಷ

ಆರೋಗ್ಯ ವೈದ್ಯಾಧಿಕಾರಿ ಅಮಾನತು

ಬೆಂಗಳೂರು: ಕೋವಿಡ್ ಪರೀಕ್ಷೆಯಲ್ಲಿ ಅಕ್ರಮ ನಡೆಸಿದ ಆರೋಪದ ಮೇರೆಗೆ ಯಲಹಂಕ ವಲಯದ ಕೊಡಿಗೆಹಳ್ಳಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ಇಬ್ಬರು ನೌಕರರನ್ನು ಬಿಬಿಎಂಪಿಯು ಸೇವೆಯಿಂದ ವಜಾ ಮಾಡಿದೆ. ಕೋವಿಡ್ ಪರೀಕ್ಷಾ ಕಾರ್ಯದ ಉಸ್ತುವಾರಿಯನ್ನು ಸಮರ್ಪಕವಾಗಿ ನಿರ್ವಹಿಸದ ಈ ಪಿಎಚ್‌ಸಿಯ ಆರೋಗ್ಯ ವೈದ್ಯಾಧಿಕಾರಿ ಡಾ.ಪ್ರೇಮಾನಂದ ಅವರನ್ನು ಪಾಲಿಕೆ ಅಮಾನತು ಮಾಡಿದೆ.

ಕೊಡಿಗೆಹಳ್ಳಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆಗಾಗಿ ಜನರ ಮೂಗಿನ ದ್ರವ ಸಂಗ್ರಹಿಸುವ ಕೆಲಸಕ್ಕೆ ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡಿದ್ದ ನಾಗರಾಜು ಹಾಗೂ ಹೇಮಂತ್ ವಜಾಗೊಂಡವರು.

ಕೊಡಿಗೆಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೌಕರರಿಬ್ಬರು ಕೋವಿಡ್ ಪರೀಕ್ಷೆಗಾಗಿ ಬಂದ ವ್ಯಕ್ತಿಗಳ ಮೂಗಿನ ದ್ರವವನ್ನು ಕಡ್ಡಿಯಿಂದ ಸಂಗ್ರಹಿಸದೆಯೇ, ಆ ಕಡ್ಡಿಗಳನ್ನು ವೈರಾಣು ರವಾನೆ ಪರಿಕರದಲ್ಲಿ (ವಿಟಿಎಂ) ಜೋಡಿಸುವ ಮೂಲಕ ವಂಚನೆ ನಡೆಸುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದನ್ನು ಪರಿಶೀಲಿಸಿದಾಗ ಮೂಗಿನ ದ್ರವ ಸಂಗ್ರಹಿಸುವ ಸಿಬ್ಬಂದಿ ತಪ್ಪೆಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿತ್ತು.

ಎಫ್‌ಐಆರ್ ದಾಖಲು: ‘ನಾಗರಾಜು ಹಾಗೂ ಹೇಮಂತ್ ತಾವು ಪಿಎಚ್‌ಸಿಯಲ್ಲಿ ಇಲ್ಲದೇ ಇದ್ದಾಗ ಕೋವಿಡ್ ಪರೀಕ್ಷೆ ನಡೆಸುವಾಗ ಅಕ್ರಮ ನಡೆಸಿದ್ದಾರೆ’ ಎಂದು ಆರೋಪಿಸಿ ಆರೋಗ್ಯ ವೈದ್ಯಾಧಿಕಾರಿ ಡಾ.ಪ್ರೇಮಾನಂದ ಅವರು ಕೊಡಿಗೇಹಳ್ಳಿ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಆಮ್ ಆದ್ಮಿ ಪಕ್ಷದಿಂದ ಸೋಂಕು ನಿವಾರಕ ಸಿಂಪಡಣೆ

ಬೆಂಗಳೂರು: ಆಮ್ ಆದ್ಮಿ ಪಕ್ಷವು ‘ಸುರಕ್ಷಿತ ಯುಗಾದಿ- ಸಂತಸ ಯುಗಾದಿ’ ಎಂಬ ಘೋಷವಾಕ್ಯದೊಂದಿಗೆ ನಗರದ ಎಲ್ಲ ವಾರ್ಡ್‌ಗಳಲ್ಲಿನ ಮಾರುಕಟ್ಟೆ, ಧಾರ್ಮಿಕ ಕ್ಷೇತ್ರ, ಬಸ್ ನಿಲ್ದಾಣ ಸೇರಿದಂತೆ ಜನಸಂದಣಿಯ ಇತರ ಸ್ಥಳಗಳಲ್ಲಿ ಕೊರೊನಾ ಸೋಂಕು ನಿವಾರಕ ಸಿಂಪಡಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ನಗರದ ಎನ್.ಆರ್.ರಸ್ತೆಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೇಂದ್ರ ಕಚೇರಿಯ ಮುಂಭಾಗದ ಬಸ್ ನಿಲ್ದಾಣದಲ್ಲಿ ಪಕ್ಷದ ಕಾರ್ಯಕರ್ತರು ಸೋಂಕು ನಿವಾರಕ ಸಿಂಪಡಿಸಿದರು.

ಪಕ್ಷದ ಚುನಾವಣಾ ಉಸ್ತುವಾರಿ ಶಾಂತಲಾ ದಾಮ್ಲೆ, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ, ಬೆಂಗಳೂರು ನಗರದ ಉಪಾಧ್ಯಕ್ಷ ಸುರೇಶ್ ರಾಥೋಡ್ ಅವರು ಸಾರ್ವಜನಿಕರಿಗೆ ಉಚಿತವಾಗಿ ಮಾಸ್ಕ್‌ಗಳನ್ನು ವಿತರಿಸಿದರು. ಜೊತೆಗೆ ಕೋವಿಡ್ ಕುರಿತು ನಾಗರಿಕರಲ್ಲಿ ಅರಿವು ಮೂಡಿಸಿದರು.

ಕೊರೊನಾ ಲಸಿಕಾ ಮಹೋತ್ಸವಕ್ಕೆ ಚಾಲನೆ

‘ಲಸಿಕೆ ಪಡೆಯುವಲ್ಲಿ ಮಹಿಳೆಯರ ಮೇಲುಗೈ’

ನಗರದ ಕೋವಿಡ್ ಪ್ರಕರಣಗಳು

4,81,982 ಒಟ್ಟು ಸೋಂಕಿತರು

4,25,930 ಗುಣಮುಖರಾದವರು

51,236 ಸಕ್ರಿಯ ಪ್ರಕರಣ

4,815 ಸಾವು

ಭಾನುವಾರದ ಏರಿಕೆ

7,584 ದೃಢಪಟ್ಟ ಪ್ರಕರಣ

1,184 ಗುಣಮುಖ | 27 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ 61 ಲಕ್ಷ ಕೋವಿಡ್ ಲಸಿಕೆ ನೀಡಲಾಗಿದ್ದು, ಈ ಪೈಕಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಮಾದರಿಯಾಗಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯು ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಲಸಿಕಾ ಮಹೋತ್ಸವ’ದಲ್ಲಿ ಅವರು ಮಾತನಾಡಿದರು.

‘ರಾಜ್ಯಕ್ಕೆ 72 ಲಕ್ಷಕ್ಕೂ ಹೆಚ್ಚು ಲಸಿಕೆ ಬಂದಿದೆ. ಇದರಲ್ಲಿ 61 ಲಕ್ಷ ಕೋವಿಡ್ ಲಸಿಕೆ ನೀಡಲಾಗಿದೆ. ಲಸಿಕೆ ಪಡೆದವರಲ್ಲಿ ಶೇ 53ರಷ್ಟು ಮಹಿಳೆಯರೇ ಇದ್ದಾರೆ. ಈ ಶತಮಾನದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ’ ಎಂದರು.

‘ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ, ಶೈಕ್ಷಣಿಕ ಅಸಮಾನತೆ ನಿವಾರಿಸಲು ಶ್ರಮಿಸಿದ ಜ್ಯೋತಿಬಾಫುಲೆ ಅವರ ಜನ್ಮದಿನ ಹಾಗೂ ಸಮಾನತೆ, ಸ್ವಾತಂತ್ರ್ಯಕ್ಕೆ ಹೋರಾಡಿದ ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ಲಸಿಕಾ ಮಹೋತ್ಸವ ಆಚರಿಸಲಾಗುತ್ತಿದೆ’

‘ಲಸಿಕೆ ವಿಚಾರದಲ್ಲಿ ರಾಜಕೀಯ, ಧರ್ಮ, ಭಾಷೆ ಬೆರೆಸುವ ಕೆಲಸ ಮಾಡಬಾರದು. ಸಾಂಕೇತಿಕವಾಗಿ ಎಲ್ಲ ಧರ್ಮದ ಮಹಿಳೆಯರಿಗೆ ಲಸಿಕೆ ನೀಡುವ ಮೂಲಕ ವಿಶೇಷ ಲಸಿಕೋತ್ಸವಕ್ಕೆ ಚಾಲನೆ ನೀಡಲಾಗಿದೆ’ ಎಂದು ಹೇಳಿದರು.

ಲಸಿಕಾ ಮಹೋತ್ಸವದಲ್ಲಿ ಮಹಿಳೆಯರಿಗೆ ಲಸಿಕೆ ಹಾಕಲಾಯಿತು. ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಡಾ.ಅರುಂಧತಿ ಚಂದ್ರಶೇಖರ್, ಆರೋಗ್ಯ ಇಲಾಖೆ ನಿರ್ದೇಶಕ ಡಾ.ಓಂಪ್ರಕಾಶ್ ಪಾಟೀಲ ಭಾಗವಹಿಸಿದ್ದರು.

‘ಸ್ಪುಟ್ನಿಕ್’ ಲಸಿಕೆಗೆ 10 ದಿನದಲ್ಲಿ ಅನುಮೋದನೆ ಸಾಧ್ಯತೆ?

ನವದೆಹಲಿ: ರಷ್ಯಾ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆ ‘ಸ್ಪುಟ್ನಿಕ್ ವಿ’ಯನ್ನು ತುರ್ತು ಸಂದರ್ಭದಲ್ಲಿ ಬಳಸಲು ಕೇಂದ್ರ ಸರ್ಕಾರ 10 ದಿನಗಳಲ್ಲಿ ಅನುಮೋದನೆ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಈ ಲಸಿಕೆಗೆ ಅನುಮೋದನೆ ನೀಡುವ ಸಂಬಂಧ ಕೇಂದ್ರೀಯ ಔಷಧ ಪ್ರಮಾಣೀಕರಣ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಮತ್ತಷ್ಟು ವಿವರಗಳನ್ನು ಸಲ್ಲಿಸುವಂತೆ ಲಸಿಕೆ ಅಭಿವೃದ್ಧಿಪಡಿಸಿರುವ ಕಂಪನಿಗೆ ಸೂಚಿಸಿದೆ.

ಭಾರತದಲ್ಲಿ ಈ ಲಸಿಕೆಯ ಕ್ಲಿನಿಕಲ್ ಟ್ರಯಲ್‌ಅನ್ನು ಡಾ.ರೆಡ್ಡೀಸ್ ಲ್ಯಾಬೋರೇಟರೀಸ್ ನಡೆಸಿದೆ. ಹೀಗಾಗಿ ಕ್ಲಿನಿಕಲ್ ಟ್ರಯಲ್‌ನ ಮಾಹಿತಿ ನೀಡುವಂತೆ ಸಿಡಿಎಸ್‌ಸಿಒ ಈ ಕಂಪನಿಗೂ ಸೂಚಿಸಿದೆ.

ಸ್ಪುಟ್ನಿಕ್ ಲಸಿಕೆ

ಒಂದೆಡೆ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ, ಮತ್ತೊಂದೆಡೆ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯ ಕಳವಳಕ್ಕೆ ಕಾರಣವಾಗಿದೆ. ಹೀಗಾಗಿ ಸ್ಪುಟ್ನಿಕ್ ಲಸಿಕೆ ಬಳಕೆಗೆ ಅನುಮೋದನೆ ನೀಡುವುದಕ್ಕೆ ಮಹತ್ವ ಬಂದಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

ST ALOYSIUS COLLEGE (AUTONOMOUS)
Re-Accredited by NAAC with 'A' Grade., 3.62 CGPA
Post Box No. 720, Mangaluru- 3 | www.staloysius.edu.in
Inviting experienced faculty in the following subjects for Year 2021-22
Biochemistry, Chemistry, Computer Science/ Application, Food Science, Business Administration, Commerce, Economics, Visual/Electronic Media, English
Minimum qualification for teaching:
• Master's Degree (Regular) in the respective subjects with more than 55% marks.
• Experienced teachers with Ph.D / NET / KSET preferred for all teaching positions.
Applications to reach us before 20th April 2021 on any of the following platforms:
We encourage online:
www.staloysius.edu.in/placements/careers
or by e-mail: careers@staloysius.edu.in
or by Post.

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

Business Offers

Distributors

EARN UPTO R.40,000 to Rs. 60,000 Manufacturing of Paper plate, Areca plates with minimum investment. With Buy Back agreement for finished goods with best price. Contact:- 7829033399, 9741021222. Our Factory/office: Bangalore

BUSINESS

Business to Business

Finance

“URGENT LOAN Avail @ 3.5% p.a Personal, Business, Project, Takeover all types loan in just 5 days OM FINANCE LTD. Call/ WhatsApp: 8826494700.”

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Announcements

OUR SUBSCRIBERS and guarantors, this is for your information to further communication, our old office of 'VVN CHITS (Karnataka) PRIVATE LIMITED.,' Lakshmi Chambers, #178, 4th floor, 8th 'F'-Main Road, 3rd Block, Jayanagar Bengaluru-560011. has shifted, our NEW ADDRESS IS: No.10, 24th Main, 18th Cross, Puttenahalli Main Road, J.P.Nagar, 7th-Phase, Bengaluru- 560078. This is for your reference and further communication. Contact: 99456-45095

REAL ESTATE SELLING

Sites

R T Nagar

R.T.NAGAR 50X80 BDA Site for sale near BDA complex, 11,000/- psft, Negotiable. Contact. 9844092859/ 9632377775.

Yelahanka

SALE BDA Approved North Facing 1427 Sft Site Jayasurya Nagar III Phase 'A' Block, (Vidhana Soudha Layout) At Agarahara, Yelahanka, Bangalore Contact 9535773366, 9448488818

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

RENTAL PROPERTIES

Accommodation Available

Flats

BRIGADE PANORAMA MYSORE ROAD, 11TH FLOOR, FURNISHED 3 ½ BHK LUXURY APARTMENT LEASE-23 LAKHS, RENT-21800, 9986033339, 9341823353.

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

ಸ್ವತ್ತುಗಳ ಸಮಗ್ರ ದಾಖಲೆ ಆನ್‌ಲೈನ್‌ನಲ್ಲಿ ಅಳವಡಿಕೆ ● 100 ವಾರ್ಡ್‌ಗಳಿಗೆ ವಿಸ್ತರಣೆಯತ್ತ ಬಿಬಿಎಂಪಿ ಹೆಜ್ಜೆ

ಇ ಆಸ್ತಿ: ಸ್ವತ್ತಿನ ದಾಖಲೆಗಳ ಡಿಜಿಟಲ್ ಖಾತರಿ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಜಗತ್ತಿನ ನಾನಾ ಸಮಸ್ಯೆಗಳಿಗೆ ಡಿಜಿಟಲ್ ರೂಪದಲ್ಲಿ ಪರಿಹಾರ ಒದಗಿಸುವ ನೂರಾರು ಕಂಪನಿಗಳ ನೆಲೆವೀಡು ಬೆಂಗಳೂರು. ದೇಶದ ತಂತ್ರಜ್ಞಾನ ಕ್ಷೇತ್ರದ ರಾಜಧಾನಿ ಎಂದೇ ಖ್ಯಾತವಾಗಿರುವ ಈ ನಗರದ ಆಸ್ತಿ ದಾಖಲೆಗಳ ಗೊಂದಲಗಳಿಗೆ ಮಾತ್ರ ಇದುವರೆಗೂ ಮುಕ್ತಿ ಸಿಕ್ಕಿರಲಿಲ್ಲ. ನಗರದ ಆಸ್ತಿ ದಾಖಲೆಗಳನ್ನು ಆನ್‌ಲೈನ್ ವೇದಿಕೆಯಲ್ಲಿ ಅಳವಡಿಸುವ 'ಇ-ಆಸ್ತಿ' ಕಾರ್ಯಕ್ರಮವನ್ನು ಜಾರಿಗೊಳಿಸುವತ್ತ ಬಿಬಿಎಂಪಿ ಹೆಜ್ಜೆ ಇಟ್ಟಿದೆ.

ಏನಿದು ಇ-ಆಸ್ತಿ?

ಆಸ್ತಿ ದಾಖಲೆಗಳನ್ನು ಡಿಜಿಟಲೀಕರಿಸಿ ಅವುಗಳನ್ನು ಆನ್‌ಲೈನ್ ವೇದಿಕೆಯಲ್ಲಿ (http://eaasthi.mrc.gov.in/) ಅಳವಡಿಸುವ ಸಲುವಾಗಿ ಇ-ಆಸ್ತಿ ತಂತ್ರಾಂಶವನ್ನು ಸರ್ಕಾರ ರೂಪಿಸಿದೆ. ಆಸ್ತಿ ದಾಖಲೆಗಳನ್ನು ಈ ತಂತ್ರಾಂಶದ ಮೂಲಕವೇ ನಿರ್ವಹಿಸುವ ಕಾರ್ಯಕ್ರಮವೇ 'ಇ- ಆಸ್ತಿ'. ಇದು ಆಸ್ತಿ ದಾಖಲೆ ನಿರ್ವಹಣೆಯ ಹೆಚ್ಚಿನ ಪ್ರಕ್ರಿಯೆಗಳ್ನು ಸ್ವಯಂಚಾಲಿತಗೊಳಿಸಿ, ಮಾನವನ ಹಸ್ತಕ್ಷೇಪ ಕಡಿಮೆ ಮಾಡಲಿದೆ. ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಡಿಜಿ-ಲಾಕರ್‌ನಲ್ಲಿ ಭದ್ರವಾಗಿಡಲು ನೆರವಾಗುತ್ತದೆ. ದಾಖಲೆಗಳ ಫೋರ್ಜರಿ ಮಾಡುವುದು, ಒಂದೇ ಆಸ್ತಿಯನ್ನು ಏಕಕಾಲದಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿಗೆ ಮಾರಾಟ ಮಾಡುವುದು, ಆಸ್ತಿ ವಿವರಗಳನ್ನು ಅಕ್ರಮವಾಗಿ ತಿದ್ದುವುದು ಮುಂತಾದ ಅನೇಕ ಸಮಸ್ಯೆಗಳಿಗೆ ಇತಿಶ್ರೀ ಹಾಡಬೇಕೆಂಬ ಉದ್ದೇಶದಿಂದ ರಾಜ್ಯ ಸರ್ಕಾರವು ನ್ಯಾಷನಲ್ ಇನ್ಫರ್ಮ್ಯಾಟಿಕ್ಸ್ ಸೆಂಟರ್‌ನ (ಎನ್‌ಐಸಿ) ಸಹಕಾರದಲ್ಲಿ ಇದನ್ನು ಜಾರಿಗೆ ತಂದಿದೆ.

ರಾಜ್ಯದ ಬೇರೆ ನಗರ ಹಾಗೂ ಪಟ್ಟಣಗಳಲ್ಲಿ ಇ-ಆಸ್ತಿ ಜಾರಿಯಾಗಿ ವರುಷಗಳೇ ಉರುಳಿವೆ. ಬಿಬಿಎಂಪಿ ವ್ಯಾಪ್ತಿಯಲ್ಲೂ ಈ ಎಲ್ಲ ಸೇವೆಗಳನ್ನು ಇ-ಆಸ್ತಿ ಮೂಲಕವೇ ನಿರ್ವಹಿಸುವಂತೆ ಸರ್ಕಾರ 2019ರ ಜೂನ್ 12ರಂದೇ ಆದೇಶ ಮಾಡಿತ್ತು. ಬೆಂಗಳೂರು ಮಹಾನಗರದ ಅವಶ್ಯಕತೆಗಳಿಗೆ ಅನುಗುಣವಾಗಿ ಈ ತಂತ್ರಾಂಶದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕಾಗಿದ್ದರಿಂದ ಇಲ್ಲಿ 'ಇ-ಆಸ್ತಿ' ಜಾರಿ ತಡವಾಗಿದೆ. ಶಾಂತಿನಗರ ವಿಧಾನ ಸಭಾ ಕ್ಷೇತ್ರದ ಶಾಂತಲಾ ನಗರ, ನೀಲಸಂದ್ರ ಹಾಗೂ ಶಾಂತಿನಗರ ವಾರ್ಡ್‌ಗಳಲ್ಲಿ ಇದನ್ನು 2020ರ ನ.12ರಿಂದ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಪ್ರಾರಂಭಿಕ ಹೆಜ್ಜೆಯಲ್ಲೇ ಸಿಕ್ಕಿರುವ ಯಶಸ್ಸು ಬಿಬಿಎಂಪಿ ಅಧಿಕಾರಿಗಳಲ್ಲಿ ಭರವಸೆಯನ್ನು ಮೂಡಿಸಿವೆ. ಹಾಗಾಗಿ 'ಇ-ಆಸ್ತಿ' ಕಾರ್ಯಕ್ರಮವನ್ನು ನಗರದ ಕೇಂದ್ರ ವಲಯದ 100 ವಾರ್ಡ್‌ಗಳಿಗೆ ವಿಸ್ತರಿಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ. ಇಷ್ಟೂ ವಾರ್ಡ್‌ಗಳಲ್ಲಿ ಇನ್ನು ಆಸ್ತಿ ದಾಖಲೆಗಳ ನಿರ್ವಹಣೆ ಇ-ಆಸ್ತಿ ತಂತ್ರಾಂಶದ ಮೂಲಕವೇ ನಡೆಯಲಿದೆ.

ಆಸ್ತಿ ಖಾತೆಗಳ ನೋಂದಣಿ, ವರ್ಗಾವಣೆ, ವಿಭಜನೆ, ಒಂದುಗೂಡಿಸುವಿಕೆಗಳನ್ನು ಪ್ರಸ್ತುತ ಸಕಾಲ ಅಡಿ ಅರ್ಜಿ ಸ್ವೀಕರಿಸಿ ನಿರ್ವಹಿಸಲಾಗುತ್ತಿದೆ. ಖಾತಾ ಉದ್ಧೃತ (ಖಾತಾ ಎಕ್ಸ್‌ಟ್ರ್ಯಾಕ್ಟ್) ಹಾಗೂ ಖಾತಾ ದೃಢೀಕರಣಪತ್ರಗಳನ್ನು (ಖಾತಾ ಸರ್ಟಿಫಿಕೇಟ್) ಎನ್‌ಐಸಿ ಅಥವಾ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕಚೇರಿಗಳಲ್ಲಿ ಅರ್ಜಿ ಸಲ್ಲಿಸಿ ಪಡೆಯಲು ಅವಕಾಶವಿದೆ.

ವಿಡಿಯೋ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ತಂತ್ರಾಂಶದಲ್ಲಿ ದಾಖಲೆಗಳ ಅಳವಡಿಕೆ ಸವಾಲಿನ ಹಾದಿ

ರಾಜ್ಯದ ಇತರ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಗಳು ಇ-ಆಸ್ತಿ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೊಳಿಸಿವೆ. ಆದರೆ, ಬೆಂಗಳೂರು ನಗರದ ಆಸ್ತಿಗಳ ಸ್ವರೂಪ ಇತರ ನಗರಗಳಿಗಿಂತ ವಿಭಿನ್ನ. ಇಲ್ಲಿ ಸಾವಿರಾರು ವಸತಿಗಳನ್ನು ಒಂದೇ ಕಟ್ಟಡದಲ್ಲಿ ಹೊಂದಿರುವ ಬೃಹತ್ ಅಪಾರ್ಟ್‌ಮೆಂಟ್ ಸಮುಚ್ಚಯಗಳೂ ಇವೆ. ಅಂತೆಯೆ ಕೊಳೆಗೇರಿಗಳಲ್ಲಿ ಓಣಿ ಓಣಿಗಳಲ್ಲಿ ಹುದುಗಿರುವ ಪುಟ್ಟ ಪೆಟ್ಟಿಗೆಯಂತಹ ವಸತಿಗಳೂ ಇವೆ. ನಗರದಲ್ಲಿರುವ 20 ಲಕ್ಷಕ್ಕೂ ಅಧಿಕ ಆಸ್ತಿಗಳನ್ನು ಡಿಜಿಟಲ್ ವೇದಿಕೆಯಲ್ಲಿ ಅಳವಡಿಸುವುದು ಸವಾಲಿನ ಕೆಲಸವೇ ಸರಿ.

ನಮೂನೆ ಎ/ಬಿಗಾಗಿ ನಾಗರಿಕರು ಅರ್ಜಿ ಸಲ್ಲಿಸಿದಾಗ ಬಿಬಿಎಂಪಿ ಕಂದಾಯ ಪರಿವೀಕ್ಷಕರು ಆಸ್ತಿ ಇರುವ ಸ್ಥಳಕ್ಕೆ ತೆರಳಿ ಅದರ ಸಂಪೂರ್ಣ ವಿವರ ಕಲೆಹಾಕುತ್ತಾರೆ. ಆಸ್ತಿಯ ಫೋಟೊವನ್ನೂ ತೆಗೆಯುತ್ತಾರೆ. ಅದನ್ನು ದತ್ತಾಂಶ ನಿರ್ವಹಣಾ ಸಿಬ್ಬಂದಿ (ಡಿಇಒ) ಇ-ಆಸ್ತಿ ಪೋರ್ಟಲ್‌ನಲ್ಲಿ ಅಳವಡಿಸುತ್ತಿದ್ದಾರೆ. ಮಾಲೀಕರ ಹೆಸರುಗಳು, ವಿಳಾಸ, ಅವರ ಭಾವಚಿತ್ರಗಳು, ಕಟ್ಟಡದ ಫೋಟೊ, ಅಳತೆ, ಮಹಡಿಗಳ ವಿವರ, ಚಕ್ಕುಬಂದಿ, ಇತರ ದಾಖಲೆಗಳು, ಭೂಬಳಕೆ ವಿಧಾನ ಇವೆಲ್ಲ ಮಾಹಿತಿಗಳನ್ನು ತಂತ್ರಾಂಶದಲ್ಲಿ ಅಳವಡಿಸುವುದಕ್ಕೆ ಗಂಟೆಗಟ್ಟಲೆ ಸಮಯ ತಗಲುತ್ತದೆ. ಶಾಂತಿನಗರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿ ಬಸವರಾಜು ಅವರ ತಂಡವು ಇದುವರೆಗೆ 304 ಆಸ್ತಿಗಳ ದಾಖಲೆಗಳನ್ನು ಇ- ಆಸ್ತಿ ತಂತ್ರಾಂಶದಲ್ಲಿ ಅಳವಡಿಸಿದೆ.

ಇನ್ನು ನಾಗರಿಕರೇ ಈ ಎಲ್ಲ ಮಾಹಿತಿ ಅಳವಡಿಸಿ, ಅವುಗಳನ್ನು ಬಿಬಿಎಂಪಿ ಅಧಿಕಾರಿಗಳು ಪರಿಶೀಲಿಸಿ ಅಖೈರುಗೊಳಿಸುವ ವಿಧಾನವನ್ನು ಅನುಸರಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

'ಪ್ರಸ್ತುತ ಆಸ್ತಿ ದಾಖಲೆಯಲ್ಲಿ 18 ಕಾಲಂಗಳ ಮಾಹಿತಿಗಳು ಮಾತ್ರ ಇದ್ದವು. ಇ-ಆಸ್ತಿಯ ನಮೂನೆಯಲ್ಲಿ 42 ಕಾಲಂಗಳಲ್ಲಿ ವಿವರ ತುಂಬಿಸಬೇಕಿದೆ. ಈ ಮಾಹಿತಿಗಳನ್ನು ನಾಗರಿಕರೇ ಭರ್ತಿ ಮಾಡಲು ಅವಕಾಶ ಕಲ್ಪಿಸಲಿದ್ದೇವೆ. ಈ ಸಲುವಾಗಿ ನಾಗರಿಕರೇ ಮಾಹಿತಿ ತುಂಬಿಸುವ ಮಾದರಿಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಯಾರಿಗೆ ಸ್ವತಃ ಈ ಮಾಹಿತಿ ತುಂಬಲು ಸಾಧ್ಯವಿಲ್ಲವೊ ಅವರು ಬೆಂಗಳೂರು ವನ್ ಕೇಂದ್ರಗಳಿಗೆ ತೆರಳಿ ಮಾಹಿತಿ ನೀಡುವ ಮೂಲಕ ಆಸ್ತಿ ಮಾಹಿತಿಯನ್ನು ಡಿಜಿಟಲ್ ಪೋರ್ಟಲ್‌ಗೆ ಅಪ್‌ಲೋಡ್ ಮಡಬಹುದು. ಇದಕ್ಕೆ ಮೂರು ತಿಂಗಳು ಕಾಲಾವಕಾಶ ನೀಡಲಿದ್ದೇವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಬಸವರಾಜು ಎಸ್. 'ಪ್ರಜಾವಾಣಿ'ಗೆ ತಿಳಿಸಿದರು.

ಇ ಆಸ್ತಿ ತಂತ್ರಾಂಶ ಪ್ರಯೋಜನಗಳು

- ಇ- ಆಸ್ತಿ ತಂತ್ರಾಂಶವು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ 'ಕಾವೇರಿ' ತಂತ್ರಾಂಶದ ಜೊತೆ ಸಂಯೋಜನೆಗೊಂಡಿದೆ. ಬಿಬಿಎಂಪಿಯಿಂದ ಪಡೆದ ಡಿಜಿಟಲ್ ಸಹಿ ಇರುವ 'ನಮೂನೆ ಎ' ಅಥವಾ 'ನಮೂನೆ ಬಿ'ಯ ನೋಂದಣಿ ಪ್ರಕ್ರಿಯೆ ಪೂರ್ಣವಾದ ತಕ್ಷಣವೇ ಆಸ್ತಿ ಮಾಲೀಕತ್ವದ ಹಕ್ಕು ವರ್ಗಾವಣೆ ಪ್ರಕ್ರಿಯೆ ಜಾರಿಗೊಳಿಸಲು ಬಿಬಿಎಂಪಿಗೆ ಸ್ವಯಂಚಾಲಿತವಾಗಿ ಮಾಹಿತಿ ರವಾನೆಯಾಗುತ್ತದೆ.
- ನೋಂದಣಿ ಇಲಾಖೆಯಲ್ಲಿ ಹಕ್ಕು ವರ್ಗಾವಣೆಯಾದ ನಂತರ ಆ ಎಲ್ಲ ವಿವರಗಳು ಬಿಬಿಎಂಪಿಗೆ ವರ್ಗಾವಣೆಯಾಗುತ್ತವೆ. ಆದ್ದರಿಂದ ಆಸ್ತಿ ಮಾಲೀಕರು ಬಿಬಿಎಂಪಿಗೆ ಅರ್ಜಿ ಸಲ್ಲಿಸಿ ಖಾತಾ ವರ್ಗಾವಣೆ ಮಾಡಿಸಬೇಕಿಲ್ಲ.
- ಆಸ್ತಿ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡ ಬಗ್ಗೆ ಮಾರಾಟಗಾರರು/ ಖರೀದಿದಾರರಿಗೆ ಎಸ್‌ಎಂಎಸ್/ ಇಮೇಲ್ ಮೂಲಕ ಮಾಹಿತಿ ರವಾನೆಯಾಗುತ್ತದೆ
- ಬಿಬಿಎಂಪಿಯು ದೃಢಪಡಿಸಿರುವ ಮಾಹಿತಿಯ ಆಧಾರದಲ್ಲಿ ನೋಂದಣಿ ಇಲಾಖೆಯಲ್ಲಿ ಹಕ್ಕು ವರ್ಗಾವಣೆ ಪ್ರಕ್ರಿಯೆ ಮುಂದುವರಿಸಬಹುದು
- ನಮೂನೆ-ಎ/ಬಿ ನಲ್ಲಿ ಸ್ವತ್ತಿನ ಮಾಲೀಕರ ಭಾವಚಿತ್ರ, ಚೆಕ್ಕುಬಂದಿ ವಿವರಗಳು ಇರುವುದರಿಂದ ಆಸ್ತಿ ಖರೀದಿದಾರರು ಮೋಸಹೋಗುವ ಸಾಧ್ಯತೆ ಕಡಿಮೆ
- ಯಾರಾದರೂ ನಕಲಿ ದಾಖಲೆ ಸೃಷ್ಟಿಸಿದರೂ ಆಸ್ತಿ ನಮೂನೆಗಳಲ್ಲಿ ಡಿಜಿಟಲ್ ಸಹಿಯ ಬಾರ್‌ಕೋಡ್ ಇರುವುದರಿಂದ ಈ ಅಕ್ರಮವನ್ನು ಸುಲಭವಾಗಿ ಪತ್ತೆಹಚ್ಚಬಹುದು
- ಎಲ್ಲ ನಮೂನೆಗಳನ್ನೂ ಇ-ಆಸ್ತಿ ವೆಬ್‌ಸೈಟ್‌ನಲ್ಲಿ (http://eaasthi.mrc.gov.in/) ಅಳವಡಿಸಿರುವುದರಿಂದ ಸಾರ್ವಜನಿಕರೂ ಅವುಗಳನ್ನು ಅಲ್ಲೇ ವೀಕ್ಷಿಸಬಹುದು. ಸ್ವತ್ತುಗಳ ಸಂಪೂರ್ಣ ವಿವರ ಪಡೆಯಬಹುದು
- ನಿಗದಿತ ಶುಲ್ಕ ಪಾವತಿಸಿ ನಮೂನೆಗಳನ್ನು ಪಡೆದು ಡಿಜಿಲಾಕರ್‌ನಲ್ಲಿ ಶೇಖರಿಸಿಟ್ಟುಕೊಳ್ಳಬಹುದು
- ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ನಿರ್ಮಾಣಕ್ಕೆ ಕಡಿವಾಣ ಬೀಳಲಿದೆ
- ತೆರಿಗೆ ವಂಚನೆಯನ್ನು ನಿಯಂತ್ರಿಸಲೂ ಇದು ನೆರವಾಗುತ್ತದೆ

ಇವುಗಳನ್ನು ಇನ್ನು ಇ-ಆಸ್ತಿ ಮೂಲಕ ನಿರ್ವಹಿಸಲಾಗುತ್ತದೆ. ಭೂಸ್ವಾಧೀನ, ಆಸ್ತಿಗಳ ಮಾರಾಟ, ಆನುವಂಶಿಕವಾಗಿ ಹಕ್ಕು ಹಸ್ತಾಂತರ, ಉಡುಗೊರೆ, ವಿಭಜನೆಗಳ ಮೂಲಕ ಆಸ್ತಿಗಳ ಹಕ್ಕು ವರ್ಗಾವಣೆಯ ಅರ್ಜಿಗಳನ್ನೂ ಇ ಆಸ್ತಿ ಮೂಲಕವೇ ನಿರ್ವಹಿಸಲಾಗುತ್ತದೆ. ಸಕ್ಷಮ ಪ್ರಾಧಿಕಾರದ ಅಧಿಕಾರಿಗಳ ಡಿಜಿಟಲ್ ಸಹಿ ಇರುವ 'ನಮೂನೆ- ಎ' ಅಥವಾ 'ನಮೂನೆ ಬಿ' ಅನ್ನು ಇ- ಆಸ್ತಿ ತಂತ್ರಾಂಶ ಮೂಲಕವೇ ಸೃಜಿಸಲಾಗುತ್ತದೆ. ಕೈಬರಹದ ಸಹಿ ಇರುವ ಹಕ್ಕು ವರ್ಗಾವಣೆ ಪತ್ರ ನೀಡುವಿಕೆ ಸಂಪೂರ್ಣ ಸ್ಥಗಿತಗೊಳ್ಳಲಿದೆ.

ಆಸ್ತಿಯ ಸ್ಥಳದ ವಿವರಗಳು ಜಿಐಎಸ್ (ಜಿಇಪಿಟಿಐಎಸ್) ಜೊತೆ ಜೋಡಿಸಲಾಗಿರುತ್ತದೆ. ಆಸ್ತಿಗೆ ಸಂಬಂಧಪಟ್ಟ ಹೊಣೆಗಾರಿಕೆಗಳ ವಿವರಗಳನ್ನೂ ಇದರಲ್ಲಿ ಸಂಯೋಜಿಸಬಹುದು. ಆಸ್ತಿ ಮಾಲೀಕ ತನ್ನ ಆಸ್ತಿ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ನೋಡಬಹುದು. ಅಗತ್ಯಬಿದ್ದಾಗ ಡಿಜಿಟಲ್ ಸಹಿ ಇರುವ ದಾಖಲೆಯನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆದುಕೊಳ್ಳಬಹುದು. ಇದಕ್ಕೆ ತಗಲುವ ಶುಲ್ಕವನ್ನೂ ಆನ್‌ಲೈನ್‌ನಲ್ಲೇ ಪಾವತಿಸಬಹುದು. ಹಾಗಾಗಿ ಕಚೇರಿಗೆ ಅಲೆಯುವ ಪ್ರಮೇಯವೇ ಎದುರಾಗದು.

ಈ ಹಿಂದೆ ಸರ್ವೆ ವೇಳೆ ಬಿಟ್ಟು ಹೋದ ಅಥವಾ ಸರ್ವೆ ಬಳಿಕ ಸೇರ್ಪಡೆಗೊಂಡ ಆಸ್ತಿಗಳನ್ನೂ ಇ-ಆಸ್ತಿ ತಂತ್ರಾಂಶದಲ್ಲಿ ಅಳವಡಿಸಲು ಹಾಗೂ ಆಸ್ತಿ ಸ್ವರೂಪ, ಅಳತೆ ಮತ್ತು ಮಾಲೀಕತ್ವದ ವಿವರ ಬದಲಾವಣೆಗೂ ಅವಕಾಶ ನೀಡಲಾಗಿದೆ.

ಇ-ಆಸ್ತಿ ಕಾರ್ಯಕ್ರಮ ಆಸ್ತಿ ದಾಖಲೆಗಳ ಬಗ್ಗೆ ಭರವಸೆ ಹೆಚ್ಚಿಸಲಿದೆ. ರಿಯಲ್ ಎಸ್ಟೇಟ್ ವಹಿವಾಟುಗಳನ್ನು ಹೆಚ್ಚಿಸಲಿದೆ. ನಗರದ ಬ್ರ್ಯಾಂಡ್ ಮೌಲ್ಯ ಹೆಚ್ಚಳಕ್ಕೂ ದೀರ್ಘಾವಧಿಯಲ್ಲಿ ಇದು ಗಣನೀಯ ಕೊಡುಗೆ ನೀಡಲಿದೆ.

ಆಸ್ತಿ ವಿವರ ಹೊಸ ಡೇಟಾಬೇಸ್‌ನಲ್ಲಿ ಅಳವಡಿಕೆ ವಿವರ



'ವ್ಯಾಪಾರ ವಹಿವಾಟು ವೃದ್ಧಿಗೂ ಸಹಕಾರಿ'

'ಇ- ಆಸ್ತಿ ಜಾರಿಯಾದ ಬಳಿಕ ಆಸ್ತಿ ದಾಖಲೆಗಳಿಗೆ ಸಂಬಂಧಿಸಿದ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಬೀಳಲಿದೆ. ಬಾರ್‌ಕೋಡ್ ಇರುವ ಡಿಜಿಟಲ್ ಸಹಿ ಸೇರಿದಂತೆ ವಿವಿಧ ಭದ್ರತಾ ಕ್ರಮಗಳನ್ನು ಅಳವಡಿಸಿರುವುದರಿಂದ ಆಸ್ತಿ ದಾಖಲೆ ತಿರುಚಲು ಅವಕಾಶವೇ ಇಲ್ಲ. ಆಸ್ತಿಯ ಮಾಹಿತಿಗಳನ್ನು ಜನರು ಇ- ಆಸ್ತಿ ವೆಬ್‌ಸೈಟ್‌ನಲ್ಲೇ ನೋಡಬಹುದು. ವ್ಯಾಪಾರ ವಹಿವಾಟು ಹೆಚ್ಚಳಕ್ಕೂ ಇದು ಸಹಕಾರಿ. ಪ್ರಾಯೋಗಿಕ ಅನುಷ್ಠಾನದ ವೇಳೆ ಕಂಡುಬಂದ ಲೋಪಗಳನ್ನು ಸರಿಪಡಿಸಿಕೊಂಡು ಬಿಬಿಎಂಪಿಯ ಕೇಂದ್ರ ಪ್ರದೇಶದ 100 ವಾರ್ಡ್‌ಗಳಿಗೆ ಇದನ್ನು ವಿಸ್ತರಿಸಲು ಕ್ರಮಕೈಗೊಂಡಿದ್ದೇವೆ. ಮುಂದೆ ಹೊರ ವಲಯದ ವಾರ್ಡ್‌ಗಳಿಗೂ ವಿಸ್ತರಿಸಲಿದ್ದೇವೆ.

ಗೌರವ್ ಗುಪ್ತ, ಬಿಬಿಎಂಪಿ ಮುಖ್ಯ ಆಯುಕ್ತ

'ಮೂರು ವಾರ್ಡ್‌ಗಳಲ್ಲೂ ಉತ್ತಮ ಪ್ರತಿಕ್ರಿಯೆ'

ಇ-ಆಸ್ತಿ ಕಾರ್ಯಕ್ರಮವನ್ನು ಮೂರು ವಾರ್ಡ್‌ಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡಿದ್ದೇವೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದರ ಅನುಷ್ಠಾನದಲ್ಲಿ ಏನೇನು ಸಮಸ್ಯೆ ಎದುರಾಗಲಿದೆ ಎಂಬುದನ್ನು ಪರಿಶೀಲಿಸಿದ್ದೇವೆ. ಆಸ್ತಿ ದಾಖಲೆಗಳಿಗೆ ಸಂಬಂಧಿಸಿ ಎಆರ್‌ಒ ಕಚೇರಿಗೆ ಅಲೆಯುವ ಪ್ರಮೇಯ ಇರುವುದಿಲ್ಲ. ಸಾರ್ವಜನಿಕರಿಗೆ ಇದರಿಂದ ಭಾರಿ ಅನುಕೂಲಗಳಾಗಲಿವೆ

ಬಸವರಾಜು ಎಸ್, ವಿಶೇಷ ಆಯುಕ್ತ (ಕಂದಾಯ)

'ಇ-ಆಸ್ತಿ ಜಾರಿ ಬಳಿಕ ಭ್ರಷ್ಟಾಚಾರಕ್ಕೆ ಕಡಿವಾಣ'

ಆಸ್ತಿ ದಾಖಲೆ ತೆಗೆದುಕೊಳ್ಳಲು ಬಿಬಿಎಂಪಿ ಕಚೇರಿಗಳಿಗೆ ಕನಿಷ್ಠ ಎರಡು ಸಲ ಅಲೆಯಬೇಕಿದೆ. ಆಸ್ತಿ ದಾಖಲೆ ತಿರುಚುವ ಮೂಲಕ ಅನೇಕ ಅಕ್ರಮಗಳನ್ನು ನಡೆಸಲಾಗುತ್ತಿದೆ. ಇ-ಆಸ್ತಿ ಜಾರಿಗೆ ಬಂದ ಬಳಿಕ ಭ್ರಷ್ಟಾಚಾರಗಳಿಗೆ ಹಾಗೂ ಅಕ್ರಮಗಳಿಗೆ ಕಡಿವಾಣ ಬೀಳಲಿದೆ. ಆಸ್ತಿ ಮಾಲೀಕರು ಯಾವುದೇ ಸ್ಥಳದಿಂದ ಬೇಕಾದರೂ ಆಸ್ತಿ ದಾಖಲೆಗಳನ್ನು ಪಡೆಯಬಹುದು.

ಡಿ.ಎಸ್.ರಾಜಶೇಖರ್, ಪ್ರಜಾ ವೇದಿಕೆ ಬೆಂಗಳೂರು

ಹಿರಿಯ ವಿಚಾರವಾದಿ ಕೆ.ಎಸ್.ಭಗವಾನ್ ಅಭಿಮತ

'ಜನಿವಾರ ಧರಿಸದವರೆಲ್ಲ ಶೂದ್ರರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಿವಾರ ಧರಿಸದವರೆಲ್ಲರೂ ಶೂದ್ರರು. ಶೂದ್ರ ಎಂದರೆ ಗುಲಾಮ, ಅಪ್ಪನಿಗೆ ಹುಟ್ಟಿದವನಲ್ಲ ಎಂದರ್ಥ. ಮನುಸ್ಮೃತಿಯಲ್ಲೂ 'ದಾಸಿ ಪುತ್ರರು' ಎಂಬ ಉಲ್ಲೇಖವಿದೆ' ಎಂದು ಹಿರಿಯ ವಿಚಾರವಾದಿ ಕೆ.ಎಸ್. ಭಗವಾನ್ ಹೇಳಿದರು.

ದಲಿತ ಸಂಘರ್ಷ ಸಮಿತಿಯ (ಸಮತಾವಾದ) ರಾಜ್ಯ ಘಟಕವು ಜ್ಯೋತಿಬಾ ಫುಲೆ ಅವರ 194ನೇ ಜನ್ಮದಿನದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ 'ಜ್ಞಾನ ಪ್ರಸಾರ ಏಕತಾ ಸಮಾರಂಭ'ದಲ್ಲಿ ಅವರು ಮಾತನಾಡಿದರು.

'ಲಕ್ಷ ಜನರ ಪೈಕಿ ಒಬ್ಬರಿಗೂ ಹಿಂದೂ ಧರ್ಮದ ಬಗ್ಗೆ ಅರಿವಿಲ್ಲ. ಶೇ 4ರಷ್ಟು ಜನಸಂಖ್ಯೆ ಹೊಂದಿರುವ ಬ್ರಾಹ್ಮಣರು ಈ ದೇಶ ಆಳುತ್ತಿರುವುದು ದುರ್ದೈವ. ಫುಲೆ ಬ್ರಾಹ್ಮಣ ವಿರೋಧಿಯಲ್ಲ. ಮೇಲು ಕೀಳಿನ ವಿರೋಧಿ. ಗಾಂಧೀಜಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು. ಅವರ ಬಗ್ಗೆ ಗೌರವವಿದೆ. ಆದರೆ, ಅವರು ಒಪ್ಪಿಕೊಂಡ ಸಿದ್ಧಾಂತಗಳು ಅಪಾಯಕಾರಿಯಾಗಿದ್ದವು. ಹಿಂದೂ ಧರ್ಮದ ಪ್ರಕಾರ ಎಲ್ಲ ಶೂದ್ರರೂ ಗುಲಾಮರು. ಹೀಗಾಗಿಯೇ ಅಂಬೇಡ್ಕರ್ ಮತ್ತು ಪೆರಿಯಾರ್ ಮನುಸ್ಮೃತಿ ಸುಟ್ಟುಹಾಕಿದ್ದರು. ನೀವು ನಿಮ್ಮ ಮನಸ್ಸಿನಲ್ಲೇ ಅದನ್ನು ಸುಟ್ಟುಹಾಕಬೇಕು. ನಮ್ಮ ದೇಶದಲ್ಲಿ ಎರಡು ಬಗೆಯ ಗುಲಾಮಗಿರಿ ಇದೆ. ಈ ಪೈಕಿ ಆಂತರಿಕ ಗುಲಾಮಗಿರಿ ಅತ್ಯಂತ ಅಪಾಯಕಾರಿ' ಎಂದು ಹೇಳಿದರು.

ಭಗವಾನ್ (ಎಡದಿಂದ ಎರಡನೆಯವರು) ಮತ್ತು ಎಚ್.ಮಾರಪ್ಪ ಸಮಾಲೋಚನೆ ನಡೆಸಿದರು. ಕಲೈಸೆಲ್ವಿ ಇದ್ದಾರೆ –ಪ್ರಜಾವಾಣಿ ಚಿತ್ರ

'ವಿವೇಕಾನಂದರು ಹಿಂದೂ ಧರ್ಮವನ್ನು ಎತ್ತಿಹಿಡಿದಿದ್ದಾಗಿ ಅನೇಕರು ಹೇಳುತ್ತಾರೆ. ಅವರಷ್ಟು ಕಟುವಾಗಿ ಹಿಂದೂ ಧರ್ಮ ಟೀಕಿಸಿದವರು ಮತ್ತೊಬ್ಬರಿಲ್ಲ. ಶೂದ್ರನಾದ ಶಂಭೂಕ ತಪಸ್ಸು ಮಾಡಿದ ಎಂಬ ಕಾರಣಕ್ಕೆ ರಾಮನು ಆತನ ತಲೆ ಕತ್ತರಿಸುತ್ತಾನೆ ಎಂದು ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಅಂತಹ ರಾಮನನ್ನು ದೇವರೆಂದು ಪೂಜಿಸಬೇಕೇ. ರಾಮ, ಕೃಷ್ಣರೆಲ್ಲಾ ಚಾತುರ್ವರ್ಣದ ಪ್ರತಿಪಾದಕರು. ಇಂತಹ ದೇವರನ್ನೆಲ್ಲಾ ತಿರಸ್ಕರಿಸಬೇಕು' ಎಂದು ತಿಳಿಸಿದರು.

'ಕೊರೊನಾ ಸಂದರ್ಭದಲ್ಲಿ ಮಂದಿರ, ಮಸೀದಿ ಹಾಗೂ ಚರ್ಚ್‌ಗಳನ್ನೆಲ್ಲಾ ಮುಚ್ಚಿದರು. ಒಂದೊಮ್ಮೆ ದೇವರು ಇದ್ದಿದ್ದರೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮನ್ನೇಕೆ ಕಾಪಾಡಲಿಲ್ಲ. ಆಳುವವರು ನಮ್ಮಲ್ಲಿ ಮೌಢ್ಯ ಬಿತ್ತುತ್ತಿದ್ದಾರೆ. ದೇವಸ್ಥಾನಗಳನ್ನು ಕಟ್ಟಿ ನಮ್ಮನ್ನು ಮೂರ್ಖರನ್ನಾಗಿಸುತ್ತಿದ್ದಾರೆ. ಓದುವ ಹವ್ಯಾಸ ಮೈಗೂಡಿಸಿಕೊಂಡಾಗ ಮಾತ್ರ ಇಂತಹ ಹುನ್ನಾರಗಳನ್ನು ಅರಿಯಲು, ಪ್ರತಿರೋಧಿಸಲು ಸಾಧ್ಯ' ಎಂದರು.

ಪೆರಿಯಾರ್ ವಿಚಾರವಾದಿ ಕಲೈಸೆಲ್ವಿ, 'ಫುಲೆ ಹಾಗೂ ಪೆರಿಯಾರ್ ಅವರ ಚಳವಳಿಯಿಂದ ಹೆಚ್ಚು ಅನುಕೂಲವಾಗಿದ್ದು ಬ್ರಾಹ್ಮಣ ಹೆಣ್ಣು ಮಕ್ಕಳಿಗೆ. ಅವರು ಈ ಮಹಾನ್ ಚೇತನರನ್ನು ಸ್ಮರಿಸದಿರುವುದು ವಿಪರ್ಯಾಸ' ಎಂದರು.

ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಎಚ್.ಮಾರಪ್ಪ, ಗೌರವಾಧ್ಯಕ್ಷ ಕೆ.ತಮ್ಮಯ್ಯ ಇದ್ದರು.

ಫುಲೆ ದಂಪತಿಗೆ 'ಭಾರತ ರತ್ನ' ನೀಡಲಿ

'ಜ್ಯೋತಿಬಾ ಫುಲೆ ಭಾರತದ ಪುನರುಜ್ಜೀವನದ ಪಿತಾಮಹ. ಅವರ ಪತ್ನಿ ಸಾವಿತ್ರಿಬಾಯಿ ಫುಲೆ ದೇಶದ ಮೊದಲ ಶಿಕ್ಷಕಿ. ಜಾತಿ ವ್ಯವಸ್ಥೆಯ ವಿರುದ್ಧ ಮೊದಲು ದನಿ ಎತ್ತಿದವರು ಮಹಾತ್ಮ ಫುಲೆ. ಹೀಗಾಗಿ ಈ ದಂಪತಿಗೆ ಕೇಂದ್ರ ಸರ್ಕಾರವು 'ಭಾರತ ರತ್ನ' ನೀಡಿ ಗೌರವಿಸಬೇಕು. ಈ ವಿಚಾರವಾಗಿ ನಾವೆಲ್ಲಾ ಒಟ್ಟಾಗಿ ಹೋರಾಡಬೇಕು' ಎಂದು ಭಗವಾನ್ ಹೇಳಿದರು.

'ಸಾವಿತ್ರಿಬಾಯಿ ಶಾಲೆಗೆ ಹೋಗುವಾಗ ಬ್ರಾಹ್ಮಣರು ಅವರ ಮೇಲೆ ಕಲ್ಲೆಸೆಯುತ್ತಿದ್ದರು. ಸಗಣಿಯಿಂದ ಹೊಡೆಯುತ್ತಿದ್ದರು. ಬ್ರಿಟಿಷರು ಫುಲೆ ಅವರಿಗೆ ರಕ್ಷಣೆ ನೀಡಿದರು. ಒಂದೊಮ್ಮೆ ಬ್ರಿಟಿಷರು ಇರದಿದ್ದರೆ ಈ ದಂಪತಿ ಸಮಾಜದಲ್ಲಿ ಬದುಕುವುದೇ ಕಷ್ಟವಿತ್ತು. ಡಾ.ಬಿ.ಆರ್.ಅಂಬೇಡ್ಕರ್, ಫುಲೆ ಅವರಿಂದ ಪ್ರಭಾವಿತರಾಗಿದ್ದರು. ಫುಲೆ ಅವರನ್ನು ಗುರುವೆಂದೇ ಸ್ವೀಕರಿಸಿದ್ದರು' ಎಂದು ತಿಳಿಸಿದರು.

'ಯಕ್ಷಗಾನ ಸೊಗಡಿನ ಕವನ ರಚಿಸಿದ್ದ ಅಡಿಗರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋಪಾಲಕೃಷ್ಣ ಅಡಿಗರು ಯಕ್ಷಗಾನ ಸೊಗಡಿನ ಹಲವು ಕವನಗಳನ್ನು ರಚಿಸಿದ್ದರು. ಆ ಮೂಲಕ ಸಮಾಜದ ಅಂಕುಡೊಂಕುಗಳನ್ನು ಎತ್ತಿ ತೋರಿಸಿದರು. ಯಕ್ಷಗಾನದ ಮೂಲಕ ಜಾಗೃತಿ ಸಾಧ್ಯ ಎಂಬುದನ್ನೂ ಸಾಬೀತುಪಡಿಸಿದ್ದರು' ಎಂದು ಗೋಪಾಲಕೃಷ್ಣ ಅಡಿಗ ಶತಮಾನ ಪ್ರತಿಷ್ಠಾನದ ಮುಖ್ಯಸ್ಥ ಜಯರಾಮ ಅಡಿಗ ಹೇಳಿದರು.

ಬೆಂಗಳೂರಿನ ಕಲಾ ಕದಂಬ ಆರ್ಟ್ ಸೆಂಟರ್, ಉಲ್ಲಾಳ ಉಪನಗರದ ವಿಶ್ವೇಶ್ವರ ಬಡಾವಣೆಯ 4ನೇ ವಿಭಾಗದಲ್ಲಿರುವ ಕಲಾಗುಡಿಯಲ್ಲಿ ಹಮ್ಮಿಕೊಂಡಿದ್ದ 'ಗುಡಿ ನಡೆ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕರ್ಣ ಭೇದನ' (ತಾಳಮದ್ದಲೆ) ಕಥಾನಕ ಪ್ರದರ್ಶಿಸಿದ ಕಲಾವಿದರು

ಹಿರಿಯ ಕಲಾವಿದ ಸೂರ್ಯ ನಾರಾಯಣ 'ರಂಗಭೂಮಿಗೂ ಯಕ್ಷಗಾನಕ್ಕೂ ವಿಶಿಷ್ಟ ನಂಟಿದೆ. ಇವೆರಡು ಜನರ ಮನಮುಟ್ಟುವ ಕಲಾ ಮಾಧ್ಯಮಗಳು' ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ದೇವಿದಾಸರ 'ಕರ್ಣ ಭೇದನ' (ತಾಳಮದ್ದಲೆ) ಕಥಾನಕ ಪ್ರದರ್ಶನಗೊಂಡಿತು. ಕೃಷ್ಣ ಹಾಗೂ ಮದ್ದಲೆ ವಾದಕರಾಗಿ ಕಲಾವಿದ ಪ್ರದೀಪ ಸಾಮಗ ಗಮನಸೆಳೆದರು. ಪತ್ರಕರ್ತ ಅಂಬರೀಷ್ ಭಟ್ ಅವರು ಕರ್ಣನ ಅಸಹಾಯಕತೆ, ಆತನ ಮಿತ್ರತ್ವದ ಮಹತ್ವ ಸಾರಿದರು. ಸೂರ್ಯ ಪಾತ್ರಧಾರಿ ವಿದ್ವಾನ್ ಎ.ಪಿ.ಪಾಠಕ್, ಚಂಡೆಯನ್ನು ನುಡಿಸುತ್ತಲೇ ಆ ಪಾತ್ರಕ್ಕೆ ಜೀವತುಂಬಿದರು. ಭಾಗವತಿಕೆ ಹಾಗೂ ಕುಂತಿ ಪಾತ್ರಧಾರಿಯಾಗಿ ಸುಬ್ರಾಯ ಹೆಬ್ಬಾರ ಅವರು ತಮ್ಮ ಗಾಯನ ಮತ್ತು ಮಮತೆಯ ಮಾತುಗಳಿಂದ ನೆರೆದಿದ್ದವರನ್ನು ಭಾವುಕರನ್ನಾಗಿಸಿದರು.

ಪ್ರಜಾವಾಣಿಯ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕಾರ್ಯಕ್ರಮದ ಸಂಯೋಜಕ ದೇವರಾಜ ಕರಬರ, ನಿರ್ದೇಶಕ ರಾಧಾಕೃಷ್ಣ ಉರಾಳ ಹಾಗೂ ಮುರಳೀಧರ ನಾವಡ ಇದ್ದರು.

ಚಾಲಕರಿಗೆ ಸಮವಸ್ತ್ರ ವಿತರಣೆ

ಯಲಹಂಕ: 'ಶ್ರೀಮಂತರ ಮೇಲೆ ತೆರಿಗೆವಿಧಿಸಿ, ಆ ಹಣದಲ್ಲಿ ಬಡವರಿಗೆ ಸಹಾಯ ಮಾಡಬೇಕಾದ ಸರ್ಕಾರ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಮೇಲೆ ತೆರಿಗೆ ವಿಧಿಸಿ ಬಡವರನ್ನು ಸಂಕಷ್ಟಕ್ಕೆ ಸಿಲುಕಿಸಿದೆ' ಎಂದು ಶಾಸಕ ಕೃಷ್ಣ ಬೈರೇಗೌಡ ದೂರಿದರು.

ಬ್ಯಾಟರಾಯನಪುರ ಕ್ಷೇತ್ರ ಕಾಂಗ್ರೆಸ್ ಪಕ್ಷದ ವತಿಯಿಂದ ಜಕ್ಕೂರಿನ ಅರ್ಕಾವತಿ ಬಡಾವಣೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಯುಗಾದಿ ಹಬ್ಬದ ಪ್ರಯುಕ್ತ ಆಟೊ ಮತ್ತು ಟ್ಯಾಕ್ಸಿ ಚಾಲಕರಿಗೆ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು.

ಆಹಾರ ಕಿಟ್ ವಿತರಣೆ: ಇದಕ್ಕೂ ಮುನ್ನ ದೊಡ್ಡಬೊಮ್ಮಸಂದ್ರದಲ್ಲಿ ದಲಿತ ಸಂಘಟನ ಸಮಿತಿ ಆಶ್ರಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕೃಷ್ಣ ಬೈರೇಗೌಡ, 200 ಮಂದಿ ಬಡವರಿಗೆ ಆಹಾರದ ಕಿಟ್ ವಿತರಿಸಿದರು.

ಕಾಂಗ್ರೆಸ್ ಮುಖಂಡರಾದ ಆರ್. ಎಂ.ಶ್ರೀನಿವಾಸ್, ಗೋಪಾಲಕೃಷ್ಣ, ರವಿ ಕುಮಾರ್, ಪಟೇಲ್ ಪಿಳ್ಳೇಗೌಡ, ಮುನಿ ರಾಜು, ರಮೇಶ್ ಉಪಸ್ಥಿತರಿದ್ದರು.

ಚಿತ್ರಾವಳಿ

ಯುಗಾದಿ ಹಾಗೂ ರಂಜಾನ್ ಪ್ರಯುಕ್ತ ಶಾಸಕ ಬೈರತಿ ಸುರೇಶ್ ಅವರು ಹೆಬ್ಬಾಳ ಕ್ಷೇತ್ರದ ಬಡ ಜನರಿಗೆ ಉಚಿತವಾಗಿ 40 ಸಾವಿರ ದಿನಸಿ ಕಿಟ್‌ಗಳನ್ನು ಭಾನುವಾರ ವಿತರಿಸಿದರು. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

ಆಶ್ವಿನಿ ಹೋಮಿಯೋ ಕ್ಲಿನಿಕ್ ನಗರದಲ್ಲಿ ಆಯೋಜಿಸಿದ ವಿಶ್ವ ಹೋಮಿಯೋಪಥಿ ದಿನಾಚರಣೆ ಹಾಗೂ ಕ್ಲಿನಿಕ್‌ನ 65ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಹೋಮಿಯೋಪಥಿ ಜನಕ ಡಾ. ಸ್ಯಾಮ್ಯುಯೆಲ್ ಹಾನೆಮನ್ ಅವರ ಪ್ರತಿಮೆಗೆ ಕ್ಲಿನಿಕ್ ಮುಖ್ಯಸ್ಥ ಹಾಗೂ ಕರ್ನಾಟಕ ಹೋಮಿಯೋಪಥಿ ಮಂಡಳಿ ಅಧ್ಯಕ್ಷ ಡಾ.ಬಿ.ಟಿ. ರುದ್ರೇಶ್, ಹಿರಿಯ ವಿಜ್ಞಾನಿ ಡಾ. ಟೆಸ್ಸಿ ಥಾಮಸ್, ಹಿರಿಯ ಪತ್ರಕರ್ತ ಬಾಬು ಕೃಷ್ಣಮೂರ್ತಿ ಹಾಗೂ ಶಾಸಕ ಉದಯ್ ಗರುಡಾಚಾರ್ ಪುಷ್ಪ ನಮನ ಸಲ್ಲಿಸಿದರು.

ಖರೀದಿ ಸೋಗಿನಲ್ಲಿ ಪೊಲೀಸರ ಕಾರ್ಯಾಚರಣೆ • ರೈಲು ನಿಲ್ದಾಣದಲ್ಲೇ ಆರೋಪಿಗಳ ಸೆರೆ

ಮಕ್ಕಳನ್ನು ಕದ್ದು ಮಾರುತ್ತಿದ್ದ ಮಹಿಳೆಯರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಕ್ಕಳನ್ನು ಕದ್ದು ಹೊರ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ದೇವಿ ಹಾಗೂ ಮುಂಬೈನ ರಂಜಿತಾ ಬಂಧಿತರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ದೇವಿ, ಶಿವಾಜಿನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದಳು. ರಂಜಿತಾ ಜೊತೆ ನಿರಂತರವಾಗಿ ಒಡನಾಟವಿಟ್ಟುಕೊಂಡು ಕೃತ್ಯ ಎಸಗುತ್ತಿದ್ದಳು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಿಯುಸಿ ವ್ಯಾಸಂಗ ಮಾಡಿದ್ದ ರಂಜಿತಾ, ಮಕ್ಕಳಾಗದವರಿಗಾಗಿ ಬಾಡಿಗೆ ತಾಯಂದಿರನ್ನು ಹುಡುಕುವ ಕೆಲಸ ಮಾಡುತ್ತಿದ್ದಳು. ಅದರಿಂದಾಗಿ ಹಲವು ಜನರು ಆಕೆಗೆ ಪರಿಚಯವಾಗಿದ್ದರು. ದೇವಿ ಜೊತೆ ಸೇರಿ ತನ್ನದೇ ಜಾಲ ರೂಪಿಸಿಕೊಂಡು ಮಕ್ಕಳ ಮಾರಾಟ ಮಾಡಲಾರಂಭಿಸಿದ್ದಳು' ಎಂದೂ ಮೂಲಗಳು ತಿಳಿಸಿವೆ.

ಚಾಮರಾಜಪೇಟೆಯಲ್ಲಿ ಮಗು ಕದ್ದಿದ್ದರು: ಚಾಮರಾಜಪೇಟೆಯ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಕಳೆದ ಮೇನಲ್ಲಿ ಹುಸ್ನಾಬಾನು ಎಂಬುವರ ಗಂಡು ಮಗು ಕಳುವಾಗಿತ್ತು. ಈ ಪ್ರಕರಣ ಸಹ ದಾಖಲಾಗಿತ್ತು. ಆದರೆ, ಆರೋಪಿಗಳು ಸಿಕ್ಕಿರಲಿಲ್ಲ. ನೊಂದ ಪೋಷಕರು, ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದರು.

ಪ್ರಕರಣ ಗಂಭೀರವಾಗುತ್ತಿದ್ದಂತೆ ಎಚ್ಚೆತ್ತ ದಕ್ಷಿಣ ವಿಭಾಗದ ಪೊಲೀಸರು, ವಿಶೇಷ ತಂಡ ರಚಿಸಿ ಆರೋಪಿಗಳ ಪತ್ತೆಗೆ ಮುಂದಾಗಿದ್ದರು. ಮಕ್ಕಳನ್ನು ಖರೀದಿ ಮಾಡುವ ಸೋಗಿನಲ್ಲೇ ಕಾರ್ಯಾಚರಣೆ ನಡೆಸಿ ರೈಲು ನಿಲ್ದಾಣದಲ್ಲೇ ದೇವಿಯನ್ನು ಬಂಧಿಸಿದ್ದಾರೆ. ಆಕೆ ನೀಡಿದ್ದ ಹೇಳಿಕೆ ಆಧರಿಸಿ ರಂಜಿತಾಳನ್ನು ಸೆರೆ ಹಿಡಿದಿದ್ದಾರೆ.

ಆಸ್ಪತ್ರೆ, ಕೊಳಗೇರಿಯಲ್ಲಿ ಮಕ್ಕಳ ಕಳವು: 'ಆಸ್ಪತ್ರೆಯಲ್ಲಿ ಜನಿಸುತ್ತಿದ್ದ ಮಕ್ಕಳು ಹಾಗೂ ಕೊಳಗೇರಿಯಲ್ಲಿರುತ್ತಿದ್ದ ಮಕ್ಕಳನ್ನೇ ಆರೋಪಿಗಳು ಕಳವು ಮಾಡುತ್ತಿದ್ದರು. ಪೋಷಕರು ಬಡವರಾಗಿರುವುದರಿಂದ ಪೊಲೀಸ್ ಠಾಣೆ ಹಾಗೂ ನ್ಯಾಯಾಲಯಕ್ಕೆ ಹೆಚ್ಚು ಹೋಗುವುದಿಲ್ಲವೆಂದು ಆರೋಪಿಗಳು ತಿಳಿದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಕ್ಕಳಿಲ್ಲದ ಶ್ರೀಮಂತರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, 'ಬಾಡಿಗೆ ತಾಯಂದಿರಿಂದ ಮಗು ಪಡೆಯಲು ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ನಮ್ಮದೇ ಸಂಬಂಧಿಕರ ಮಕ್ಕಳಿದ್ದು, ಅವರಿಗೆ ಸಾಕಲು ಆಗುವುದಿಲ್ಲ. ಕಡಿಮೆ ಮೊತ್ತಕ್ಕೆ ಮಕ್ಕಳನ್ನು ಮಾರುತ್ತಿದ್ದಾರೆ' ಎನ್ನುತ್ತಿದ್ದರು. ಅದನ್ನು ನಂಬಿ ಹಲವರು ಮಕ್ಕಳನ್ನು ಖರೀದಿಸಿದ್ದಾರೆ. ಆ ಮಕ್ಕಳನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'ಆರ್ಥಿಕ ಸಂಕಷ್ಟದಲ್ಲಿದ್ದ ಕೆಲ ಪೋಷಕರಿಗೆ ₹ 1 ಲಕ್ಷದಿಂದ ₹ 2 ಲಕ್ಷ ಕೊಟ್ಟು ಮಕ್ಕಳನ್ನು ಆರೋಪಿಗಳೇ ಖರೀದಿ ಮಾಡಿರುವ ಮಾಹಿತಿ ಇದೆ. ಅದೇ ಮಕ್ಕಳನ್ನು ₹ 8 ಲಕ್ಷದಿಂದ ₹ 10 ಲಕ್ಷಕ್ಕೆ ಮಾರಾಟ ಮಾಡಿರುವ ಸಂಗತಿಯೂ ತನಿಖೆಯಿಂದ ಗೊತ್ತಾಗಿದೆ. ಮಕ್ಕಳ ಮಾರಾಟ ಜಾಲದಲ್ಲಿ ಮತ್ತಷ್ಟು ಜನ ಭಾಗಿಯಾಗಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಪೊಲೀಸರಿಗೇ ₹ 5 ಲಕ್ಷಕ್ಕೆ ಮಗು ಮಾರಲು ಬಂದಿದ್ದರು'

'ಮಕ್ಕಳ ಖರೀದಿ ಸೋಗಿನಲ್ಲೇ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿತ್ತು. ಆರೋಪಿಗಳನ್ನು ಸಂಪರ್ಕಿಸಿ ಮಗು ಬೇಕೆಂದು ಕೇಳಿತ್ತು. ₹ 5 ಲಕ್ಷಕ್ಕೆ ಮಾತುಕತೆ ನಡೆಸಿದ್ದ ಆರೋಪಿಗಳು, ಮಗುವಿನ ಸಮೇತ ರೈಲು ನಿಲ್ದಾಣಕ್ಕೆ ಬಂದಿದ್ದರು. ಅವಾಗಲೇ ಅವರು ನಮಗೆ ಸಿಕ್ಕಿಬಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನನ್ನ ಕೆಟ್ಟ ದಿನಗಳಲ್ಲಿ ನನ್ನನ್ನು ಪ್ರೀತಿಸದವರು, ನನ್ನ ಒಳ್ಳೆಯ ದಿನಗಳಲ್ಲಿ ನನ್ನೊಂದಿಗಿರಲು ಅರ್ಹರಲ್ಲ.

-ಮರ್ಲಿನ್ ಮನ್ರೊ

ನಗರಗಳಲ್ಲಿ ರಾತ್ರಿ ಕರ್ಫ್ಯೂ ಅರ್ಥಹೀನ, ಅಸಮಂಜಸ ನಿರ್ಧಾರ

ಕೊರೊನಾ ಸೋಂಕು ಪ್ರಸಾರ ತಡೆಗಟ್ಟುವ ದಿಸೆಯಲ್ಲಿ ರಾಜ್ಯ ಸರ್ಕಾರ ಪ್ರಕಟಿಸಿರುವ ರಾತ್ರಿ ಕರ್ಫ್ಯೂ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಏಪ್ರಿಲ್ 10ರಿಂದ 20ರವರೆಗೆ ಬೆಂಗಳೂರು ಸಹಿತ ರಾಜ್ಯದ ಎಂಟು ನಗರಗಳಲ್ಲಿ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ವಿಧಿಸಿರುವುದರಿಂದ ನಿಜಕ್ಕೂ ಸೋಂಕು ಪ್ರಸಾರ ತಡೆ ಸಾಧ್ಯವಿದೆಯೇ? ಕೊರೊನಾ ಸಾಂಕ್ರಾಮಿಕವು ರಾತ್ರಿ 10ರ ಬಳಿಕ ದಾಳಿ ಮಾಡಿ ಬೆಳಿಗ್ಗೆ ಐದು ಗಂಟೆಗೆಲ್ಲಾ ಮಾಯ ಆಗಿಬಿಡುತ್ತದೆಯೇ? ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ಮಣಿಪಾಲ, ತುಮಕೂರು, ಕಲಬುರ್ಗಿ, ಬೀದರ್ ನಗರಗಳಲ್ಲಿ ಮಾತ್ರ ರಾತ್ರಿಯ ವೇಳೆ ಕೊರೊನಾ ಹೆಚ್ಚು ವ್ಯಾಪಿಸುತ್ತಿದೆಯೇ? ಸರ್ಕಾರದ ಈ ನಿರ್ಧಾರವು ತರ್ಕಹೀನ ಮತ್ತು ಅವೈಜ್ಞಾನಿಕ ಎನ್ನದೇ ನಿರ್ವಾಹವಿಲ್ಲ. ಈ ಹಿಂದೆಯೂ ಹೀಗೆ ಕೆಲವು ಕಡೆ ರಾತ್ರಿ ಕರ್ಫ್ಯೂ ವಿಧಿಸಲಾಗಿತ್ತು. ಆದರೆ ಅದರಿಂದ ಕೊರೊನಾ ಸೋಂಕು ಹರಡುವುದನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ ಎನ್ನುವ ವಾಸ್ತವವನ್ನು ಸರ್ಕಾರ ಮರೆಯಬಾರದು. ಎಲ್ಲರಿಗೂ ಕೋವಿಡ್ ಲಸಿಕೆ ಹಾಕಿಸುವುದಕ್ಕೆ ಸರ್ಕಾರ ಆದ್ಯತೆ ನೀಡಬೇಕು. ಆದರೆ, ಈ ದಿಸೆಯಲ್ಲಿ ನಿರೀಕ್ಷಿತ ವೇಗದಲ್ಲಿ ಕೆಲಸ ಆಗುತ್ತಿಲ್ಲ. ರಾತ್ರಿ 10ರ ಬಳಿಕ ಊಟ- ತಿಂಡಿಗೆಂದು ಹೊರಗೆ ಓಡಾಡುವವರಿಂದ ಕೊರೊನಾ ಹೆಚ್ಚುತ್ತಿದೆ ಎಂದು ಸರ್ಕಾರ ತಿಳಿದುಕೊಂಡಿದ್ದರೆ ಅದರಷ್ಟು ಮೂರ್ಖತನ ಇನ್ನೊಂದಿಲ್ಲ. ರಾಜ್ಯದ ಹಲವೆಡೆ ಧಾರ್ಮಿಕ ಕಾರ್ಯಕ್ರಮಗಳು ಯಾವುದೇ ತಡೆಯಿಲ್ಲದೆ ನಡೆದಿವೆ. ರಾಜ್ಯದಲ್ಲಿ ಉಪ ಚುನಾವಣೆ ನಡೆಯುತ್ತಿರುವ ಒಂದು ಲೋಕಸಭಾ ಕ್ಷೇತ್ರ ಮತ್ತು ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಆಡಳಿತಾರೂಢ ಪಕ್ಷದ ನಾಯಕರು ಹಾಗೂ ಸಚಿವರು ಬೀಡು ಬಿಟ್ಟು, ಸಾವಿರಾರು ಜನರನ್ನು ಗುಂಪು ಸೇರಿಸುತ್ತಿದ್ದಾರೆ. ವಿರೋಧ ಪಕ್ಷಗಳೂ ಭರ್ಜರಿ ಮೆರವಣಿಗೆ, ರೋಡ್ ಷೋಗಳನ್ನು ಹಮ್ಮಿಕೊಂಡಿವೆ. ಈ ರಾಜಕೀಯ ರ‍್ಯಾಲಿಗಳು ಮತ್ತು ಧಾರ್ಮಿಕ ಸಮಾವೇಶಗಳಿಂದ ಕೊರೊನಾ ಹರಡುವುದಿಲ್ಲ ಎಂದು ಸರ್ಕಾರ ಭಾವಿಸಿದೆಯೇ? ತಮ್ಮ ರಾಜಕೀಯ ಕಾರ್ಯಸೂಚಿಯನ್ನು ಪ್ರಚಾರ ಮಾಡಲು ಪ್ರತ್ಯೇಕ ಐ.ಟಿ. ಘಟಕಗಳನ್ನೇ ಹೊಂದಿರುವ ರಾಜಕೀಯ ಪಕ್ಷಗಳು, ಈಗ ಚುನಾವಣಾ ಪ್ರಚಾರಕ್ಕೆ ಸಾವಿರಾರು ಜನರನ್ನು ಸೇರಿಸುವ ಬದಲು ಮತದಾರರನ್ನು ವಾಟ್ಸ್‌ಆ್ಯಪ್, ಮೊಬೈಲ್ ದೂರವಾಣಿ ಕರೆ, ಸಾಮಾಜಿಕ ಜಾಲತಾಣಗಳ ಮೂಲಕವೇ ತಲುಪಿದರೆ ಒಳ್ಳೆಯದಲ್ಲವೇ? ಅಂತಹ ನಿರ್ಧಾರ ಕೈಗೊಳ್ಳುವ ಮೂಲಕ ಕೊರೊನಾ ಸೋಂಕು ಪ್ರಸಾರ ತಡೆಯಲು ಎಲ್ಲ ರಾಜಕಾರಣಿಗಳೂ ತಮ್ಮ ಬದ್ಧತೆಯನ್ನು ಪ್ರದರ್ಶಿಸಬಹುದಲ್ಲವೇ? ಸಾರ್ವಜನಿಕರು ಕೂಡ ತಮ್ಮ ಹೊಣೆಯರಿತು, ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯ ನಿಯಂತ್ರಣದ ವಿಷಯದಲ್ಲಿ ಹೊಂದಿರುವ ಗೊಂದಲಗಳಿಂದ ಸರ್ಕಾರ ಮೊದಲು ಹೊರಬರಬೇಕು

ಈ ಮಧ್ಯೆ ಕೊರೊನಾ ತಡೆಗೆ ಹಲವು ಜಿಲ್ಲಾಧಿಕಾರಿಗಳು ಮನಸೋ ಇಚ್ಛೆ ಕ್ರಮಗಳನ್ನು ಕೈಗೊಂಡ ವರದಿಗಳು ಬಂದಿವೆ. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯು ಖುದ್ದಾಗಿ ರಸ್ತೆಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಅಡ್ಡಾಡಿ ಮಾಸ್ಕ್ ಇಲ್ಲದವರನ್ನು ದಂಡಿಸಿದ ಚಿತ್ರಗಳು ಪ್ರಕಟವಾಗಿವೆ. ಅದೇ ವೇಳೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಮಂಗಳೂರಿನ ತಮ್ಮ ಮನೆಯಲ್ಲಿ ಏರ್ಪಡಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಗಣ್ಯರ ಸಹಿತ ನೂರಾರು ಜನ ಸೇರಿದ್ದರು. ಹೀಗೆ ಜನ ಒಟ್ಟಿಗೆ ಸೇರುವುದು ಸೋಂಕು ಪ್ರಸಾರಕ್ಕೆ ಕಾರಣವಾಗಬಹುದು ಎಂದು ಜಿಲ್ಲಾ ಆಡಳಿತಕ್ಕೆ ಅನ್ನಿಸಿಲ್ಲ. ಕೊಡಗು ಜಿಲ್ಲಾಧಿಕಾರಿಯು ಜಿಲ್ಲೆಯ ಎಲ್ಲ ಪ್ರವಾಸಿ ತಾಣಗಳಿಗೆ ಜನರ ಪ್ರವೇಶವನ್ನು ನಿಷೇಧಿಸಿ ಆಜ್ಞೆ ಹೊರಡಿಸಿ, ಬಳಿಕ ವಾಪಸು ಪಡೆದ ಪ್ರಸಂಗವೂ ನಡೆದಿದೆ. ‘ಮೈಸೂರಿಗೆ ಬೆಂಗಳೂರು ಮತ್ತಿತರ ನಗರಗಳಿಂದ ಬರುವ ಜನರು 72 ಗಂಟೆಗಳ ಅವಧಿಯೊಳಗೆ ಪಡೆದಿರುವ ಆರ್‌ಟಿ ಪಿಸಿಆರ್ ನೆಗೆಟಿವ್ ವರದಿಗಳನ್ನು ತೋರಿಸಬೇಕು’ ಎಂದು ಮೈಸೂರು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವು ವಿವಾದಕ್ಕೆ ಕಾರಣವಾಗಿತ್ತು. ಮುಖ್ಯಮಂತ್ರಿ ಅಥವಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯ ಅನುಮತಿಯಿಲ್ಲದೆ ಜಿಲ್ಲಾಡಳಿತವು ಕೋವಿಡ್ ನಿಯಂತ್ರಣದ ಆದೇಶಗಳನ್ನು ಹೊರಡಿಸುವಂತಿಲ್ಲ ಎಂದು ಖುದ್ದು ಸರ್ಕಾರವೇ ಪ್ರಕಟಿಸಿದ ಬಳಿಕವೂ ಹಲವು ಜಿಲ್ಲೆಗಳಲ್ಲಿ ಇಂತಹ ಕ್ರಮಗಳನ್ನು ಕೈಗೊಂಡಿದ್ದುದು, ಸೋಂಕು ಪ್ರಸರಣ ತಡೆಯಲ್ಲಿ ಸರ್ಕಾರದ ಅಂಗಸಂಸ್ಥೆಗಳ ಮಧ್ಯೆಯೇ ಸಮನ್ವಯವಿಲ್ಲ ಎನ್ನುವುದನ್ನು ಸೂಚಿಸುತ್ತದೆ. ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯು ಪರಿಸ್ಥಿತಿಯನ್ನು ಗಂಭೀರವಾಗಿಸಿದೆ. ಆದರೆ ಅದರ ನಿಯಂತ್ರಣದ ವಿಷಯದಲ್ಲಿ ಹೊಂದಿರುವ ಗೊಂದಲಗಳಿಂದ ಸರ್ಕಾರ ಮೊದಲು ಹೊರಬರಬೇಕು. ರಾತ್ರಿ ಕರ್ಫ್ಯೂವಿನಂತಹ ಅರ್ಥಹೀನ ಕ್ರಮಗಳನ್ನು ಕೈಬಿಟ್ಟು ಎಲ್ಲರಿಗೂ ಶೀಘ್ರವೇ ಲಸಿಕೆ ನೀಡುವ ವ್ಯವಸ್ಥೆ ಮಾಡಬೇಕು. ಈ ಮಧ್ಯೆ ಬೆಂಗಳೂರಿನಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿ, ಸಕಾಲಕ್ಕೆ ಚಿಕಿತ್ಸೆ ಸಿಗದೆ ಕೋವಿಡ್ ರೋಗಿಯೊಬ್ಬರು ಮೃತಪಟ್ಟ ದಾರುಣ ಘಟನೆಯೂ ಆಡಳಿತದಲ್ಲಿ ಸಮನ್ವಯದ ಕೊರತೆ ಇದೆ ಎನ್ನುವುದನ್ನೇ ಬಿಂಬಿಸಿದೆ.

ದಿನದ ಟ್ವೀಟ್

ಎರಡನೇ ಅಲೆ ಬಂದಿದ್ದೇಕೆ?

ಕೋವಿಡ್ ಮೊದಲ ಅಲೆ ಚೀನಾದಿಂದ ಬಂದಿತು. ಎರಡನೇ ಅಲೆಯು ನಮ್ಮ ರಾಜಕೀಯ ದುರಾಸೆ, ನಿರ್ಲಕ್ಷ್ಯತನ ಮತ್ತು ಅಸಮರ್ಥತೆಯಿಂದಾಗಿ ಬಂದಿದೆ.

ರಾಹುಲ್ ರಾಜ್, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 12-4-1996

● ವಿ.ವಿ ಹೆಸರು ಬದಲು ಈಗ ಬೇಡ- ರಾಜ್ಯಕ್ಕೆ ಆಯೋಗ ಆದೇಶ

ನವದೆಹಲಿ, ಏ. 11– ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಪುನರ್‌ನಾಮಕರಣ ಮಾಡುವ ಕರ್ನಾಟಕ ಸರ್ಕಾರದ ಮನವಿಯನ್ನು, ಲೋಕಸಭಾ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಇಂದು ತಳ್ಳಿಹಾಕಿತು.

ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನು ಇಡಬೇಕೆಂದು ಬಸವದಳ ಮತ್ತು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರನ್ನು ಇಡಬೇಕೆಂದು ದಲಿತ ಸಂಘಟನೆಗಳು ಚಳವಳಿ ಮಾಡುತ್ತಿರುವುದರಿಂದ ಈ ವಿಷಯದಲ್ಲಿ ತಾನು ತೀರ್ಮಾನ ಕೈಗೊಳ್ಳಬಹುದೇ ಎಂದು ಕರ್ನಾಟಕ ಸರ್ಕಾರವು ಚುನಾವಣಾ ಆಯೋಗದ ಸಲಹೆ ಕೇಳಿತ್ತು.

● ಭಟ್ಕಳ ಶಾಸಕನ ಹತ್ಯೆ ಘಟನೆ ಸಿಬಿಐ ತನಿಖೆಗೆ

ಬೆಂಗಳೂರು, ಏ. 11– ಭಟ್ಕಳ ಕ್ಷೇತ್ರದ ಬಿಜೆಪಿ ಶಾಸಕ ಡಾ. ಯು.ಚಿತ್ತರಂಜನ್ ಅವರನ್ನು ಅಪರಿಚಿತ ವ್ಯಕ್ತಿಗಳು ನಿನ್ನೆ ರಾತ್ರಿ ಅವರ ಮನೆಯಲ್ಲೇ ಗುಂಡಿಟ್ಟು ಕಗ್ಗೊಲೆ ಮಾಡಿರುವ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಇಂದು ಇಲ್ಲಿ ಪ್ರಕಟಿಸಿದರು.

‘ಸಿಬಿಐ ತನಿಖೆಯ ಜೊತೆಗೇ ಈ ಘಟನೆಯ ಬಗ್ಗೆ ರಾಜ್ಯ ಹೈಕೋರ್ಟಿನ ಹಾಲಿ ನ್ಯಾಯಾಧೀಶರೊಬ್ಬರಿಂದ ನ್ಯಾಯಾಂಗ ತನಿಖೆ ನಡೆಸಲೂ ತೀರ್ಮಾನಿಸಲಾಗಿದೆ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 12-4-1971

● ಹಿಪ್ಪಿಗಳ ವಿರುದ್ಧ ಗೋವೆ ಸ್ತ್ರೀಯರ ಮುಗಿದ ಯುದ್ಧ

ಪಣಜಿ, ಏ. 11– ಕಳೆದ ವರ್ಷ ‘ಹಿಪ್ಪಿ’ಗಳ ನಗ್ನತೆಯ ವಿರುದ್ಧ ಬಂಡಾಯವೆದ್ದಿದ್ದ ಗೋವೆಯ ಮಹಿಳೆಯರು ಈಗ ತಮ್ಮ ಹೋರಾಟವನ್ನು ಕೈಬಿಟ್ಟಿದ್ದಾರೆ. ಹಿಪ್ಪಿಗಳನ್ನು ಸರಿದಾರಿಗೆ ತರಲು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಈ ಮಹಿಳೆಯರು ಬಂದಿದ್ದಾರೆ.

ಗೋವೆಯು ಹಿಪ್ಪಿಗಳಿಗೆ ಇನ್ನೂ ಆಕರ್ಷಣೀಯ ಕ್ಷೇತ್ರವೇ ಆಗಿದೆ. ಆದರೆ, ಇಲ್ಲಿಗೆ ಹಿಪ್ಪಿಗಳ ವಲಸೆ ಕಳೆದ ವರ್ಷಕ್ಕಿಂತ ಈ ವರ್ಷ ಇಳಿಮುಖವಾಗಿದೆ. ಎರಡು ವರ್ಷಗಳ ಹಿಂದೆ ಇಲ್ಲಿಗೆ ಹಿಪ್ಪಿಗಳು ವಲಸೆ ಬರಲಾರಂಭಿಸಿದಾಗ ಅವರ ಬಗ್ಗೆ ಸ್ಥಳೀಯ ಜನರಿಗೆ ಇದ್ದ ಕುತೂಹಲ ಈಗ ಕಡಿಮೆಯಾಗುತ್ತಿದೆ.

● ಕರಗ ಉತ್ಸವ ಹಠಾತ್ ವಾಪಸ್ ಮತ್ತೊಬ್ಬರು ಹೊತ್ತು ಮತ್ತೆ ಸಂಚಾರ

ಬೆಂಗಳೂರು, ಏ. 11– ರಾತ್ರಿ 1.45ರಲ್ಲಿ ಸಂಚಾರ ಪ್ರಾರಂಭಿಸಿದ ನಗರದ ಸುಪ್ರಸಿದ್ಧ ಕರಗವು ಸುಮಾರು 20 ನಿಮಿಷಗಳಲ್ಲೇ ಶ್ರೀ ಧರ್ಮರಾಯಸ್ವಾಮಿ ಗುಡಿಗೆ ಹಿಂದಿರುಗಿದ ಅಪೂರ್ವ ಘಟನೆ ನಡೆಯಿತು.

ಕಳೆದ ಎರಡು ವರ್ಷಗಳಿಂದ ಕರಗ ಹೊರುತ್ತಿರುವ ಶ್ರೀ ಬಾಲಪ್ಪನವರು ಈ ಸಾರಿಯೂ ಕರಗ ಹೊತ್ತಿದ್ದರು. ಉದ್ದೇಶಿಸಿದ್ದ ಪೂರ್ಣ ಸಂಚಾರದ ಮೊದಲೇ ಹಿಂದಿರುಗಲು ಅವರು ಸ್ವಲ್ಪ ಅಸ್ವಸ್ಥರಾದುದೇ ಕಾರಣ. ಬಳಿಕ ಘಂಟೆ ಪೂಜಾರಿ ಶ್ರೀ ವೆಂಕಟಸ್ವಾಮಿ ಅವರು ಆ ಕರಗವನ್ನು ಹೊತ್ತು ಸಂಚಾರ ಮುಂದುವರಿಸಿದರು.

ಮಾನವ ಸಂಬಂಧಗಳನ್ನು ಬೆಸೆಯುವ ಕೆಲಸಕ್ಕೆ ಬೇಕು ನಿರಂತರ ಪೋಷಣೆ

ಕಾಲಧರ್ಮ ಮತ್ತು ಮಾನವ ಸಂಬಂಧ

ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ಜಾತೀಯತೆ ಮತ್ತು ಅಸ್ಪೃಶ್ಯತೆಯು ಸಮಾಜದ ಎರಡು ಪಿಡುಗುಗಳು. ಅವು ಒಂದೇ ನಾಣ್ಯದ ಎರಡು ಮುಖಗಳು. ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ರಾಜಕೀಯ ಅಸಮಾನತೆ, ಧಾರ್ಮಿಕ ಅಸಮಾನತೆ ಮುಂತಾದ ಎಲ್ಲ ಅಸಮಾನತೆಗಳಿಗೆ ಪ್ರಮುಖ ಕಾರಣಗಳಿವು. ಸಂಘಜೀವನ ಆರಂಭಿಸಿದಂದಿನಿಂದ ಇಂದಿನವರೆಗೂ ಮಾನವ ಸಮಾಜವನ್ನು ಇವು ಕಾಡುತ್ತ ಬಂದಿವೆ. ಇವುಗಳ ನಿವಾರಣೆಗಾಗಿ ದೇಶ ವಿದೇಶಗಳ ದಾರ್ಶನಿಕರು ತಮ್ಮ ಜೀವದ ಹಂಗು ತೊರೆದು ಹೋರಾಡಿದ್ದಾರೆ; ಜಾಗೃತಿ ಮೂಡಿಸುತ್ತ ಬಂದಿದ್ದಾರೆ. ಆದರೂ ಅವು ಜೀವಂತವಾಗಿರುವುದು ಪರಮಾಶ್ಚರ್ಯ!

ಅಂದಿನವರು ಹೋರಾಡಿ ಜಾಗೃತಿ ಮೂಡಿಸಿದ್ದರ ಫಲವಾಗಿ ಇಷ್ಟಾದರೂ ಸಡಿಲತೆ ಸಾಧ್ಯವಾಗಿದೆ. ಇವು ಮಾನವಕುಲದ ಪಿಡುಗುಗಳಾಗಿದ್ದು, ಹೆಮ್ಮಾರಿಯಂತೆ ಕಾಡುತ್ತವೆ. ಆಗಿಹೋದ ದಾರ್ಶನಿಕರು ಅವನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದು ಕೈಕಟ್ಟಿ ಕುಳಿತಿದ್ದರೆ, ಇಂದಿನ ಸಾಮಾಜಿಕ ಸಾಮರಸ್ಯ ಕಾಣಬರುತ್ತಿರಲಿಲ್ಲ. ಸಮಾಜವು ಅಮಾನವೀಯ ಆಗಿರುತ್ತಿತ್ತು. ಕ್ರೂರ ಆಚರಣೆಗಳು ಜೀವಂತವಾಗಿ ಇರುತ್ತಿದ್ದವು. ಆಯಾ ಕಾಲಘಟ್ಟದಲ್ಲಿ ಸುಧಾರಕರು ಸಮಾಜಕ್ಕೆ ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ, ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದ್ದಾರೆ.

ಇಲ್ಲೊಂದು ಸಮಯೋಚಿತ ಕಾಲ್ಪನಿಕ ಕಥೆ- ಊರ ಹೊರಗೊಂದು ಆಳವಾದ ಕಂದಕ. ಅದನ್ನು ಹೇಗಾದರೂ ಮುಚ್ಚಬೇಕೆಂದು ತೀರ್ಮಾನಿಸಿದ ಅಜ್ಜನೊಬ್ಬ, ಮನೆಯಲ್ಲಿದ್ದಂತಹ ಸಲಾಕೆ, ಗುದ್ದಲಿ, ಬುಟ್ಟಿ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿ, ಪಕ್ಕದ ಮಣ್ಣನ್ನು ಅಗೆಯತೊಡಗಿದ. ಊರ ಹೊರಗಿನ ಕಂದಕದೆಡೆಗೆ ಬರುವ ಮೊಮ್ಮಗ ತನ್ನ ಅಜ್ಜನ ಈ ಸಾಹಸವನ್ನು ಕಾಣುತ್ತಾನೆ. ಈ ವ್ಯರ್ಥ ಪ್ರಯತ್ನಕ್ಕೆ ತನ್ನ ಅಜ್ಜ ಕೈಹಾಕಿರುವುದನ್ನು ಕಂಡು- ‘ಅಜ್ಜಾ, ಶತಶತಮಾನದಿಂದ ಈ ಗುಂಡಿಯು ಹಾಗೇ ಉಳಿದುಕೊಂಡು ಬಂದಿದೆ. ಯಾರೂ ಅದನ್ನು ಮುಚ್ಚುವ ಸಾಹಸಕ್ಕೆ ಮುಂದಾಗಿರಲಿಲ್ಲ. ನೀವು ಮುಂದಾಗಿರುವುದನ್ನು ಕಂಡು ನನಗೆ ಅಚ್ಚರಿ ಆಗುತ್ತಿದೆ. ನಿಮಗಿದು ಸಾಧ್ಯವೇ?’ ಎಂದು ಅಜ್ಜನನ್ನು ಕೆಣಕುತ್ತಾನೆ.

‘ಹೌದು ಪುಟ್ಟಾ, ನೀನು ಹೇಳುತ್ತಿರುವುದು ನಿಜಕ್ಕೂ ಸತ್ಯ. ನಮ್ಮೂರಲ್ಲಿ ಆಗಿಹೋದವರೆಲ್ಲ ಈ ಕಂದಕದ ಬಗೆಗೆ ಆಳವಾಗಿ ಆಲೋಚಿಸಲಿಲ್ಲ. ಅವರಂತೆ ನಾನೂ ಸುಮ್ಮನಿರಬಹುದಿತ್ತು. ಆದರೆ ಸುಮ್ಮನಿರಲು ನನಗೆ ಆಗುತ್ತಿಲ್ಲ’ ಎಂದ. ‘ಕಂದಕವನ್ನು ಮುಚ್ಚಲು ಸಾಧ್ಯವಿಲ್ಲವೆಂದ ಮೇಲೆ ನೀವ್ಯಾಕೆ ಆ ಕಾರ್ಯಕ್ಕೆ ಮುಂದಾದಿರಿ’ ಎಂದು ಪ್ರಶ್ನಿಸಿದ ಮೊಮ್ಮಗ. ‘ನೀನು ಹೇಳಿದಂತೆ ಕಂದಕ ಮುಚ್ಚಲು ನನ್ನ ಇಡೀ ಆಯುಷ್ಯ ಸವೆದರೂ ಸಾಧ್ಯವಾಗದು. ನನ್ನ ಕಾಲದಲ್ಲಿ ಸ್ವಲ್ಪ ಕಂದಕವನ್ನು ಮುಚ್ಚಿದಂತಹ ಸಂತೃಪ್ತಿ. ನಾನು ಇಷ್ಟು ಮುಚ್ಚುತ್ತೇನೆ. ನನ್ನ ಬಳಿಕ ನನ್ನ ಮಗ ಅದನ್ನು ಮುಚ್ಚುತ್ತ ಹೋಗಲಿ. ಆ ನಿನ್ನ ತಂದೆಯ ಬಳಿಕ ನೀನು ಕಂದಕ ಮುಚ್ಚುವ ಕಾರ್ಯವನ್ನು ಮುನ್ನಡೆಸು. ಹೀಗೆ ಕಂದಕ ಮುಚ್ಚುವ ಕಾರ್ಯವು ತಲೆಮಾರಿನಿಂದ ತಲೆಮಾರಿಗೆ ಮುಂದುವರಿದರೆ, ಒಂದು ದಿನ ಕಂದಕವು ಸಂಪೂರ್ಣವಾಗಿ ಮುಚ್ಚಿ ಹೋಗುತ್ತದೆ’ ಎನ್ನುತ್ತಾನೆ ಅಜ್ಜ.

ಪ್ರಾಜ್ಞರು, ಸಾಮಾಜಿಕ ಕಾಳಜಿಯುಳ್ಳವರು ಅಸಮಾನತೆ ಮತ್ತು ಜಾತೀಯತೆಯೆಂಬ ಆಳವಾದ ಕಂದಕವನ್ನು ಮುಚ್ಚುವ ಕಾರ್ಯವನ್ನು ಧೈರ್ಯವಾಗಿ ಮುನ್ನಡೆಸುತ್ತಾರೆ. ಕೆಲವರು ಕಂದಕವನ್ನು ನಿರ್ಮಿಸುತ್ತಾ ಹೋಗುತ್ತಾರೆ. ಕಂದಕ ಸೃಷ್ಟಿಸುವವರ ಪಟ್ಟಿಯಲ್ಲಿ ನನ್ನ ಹೆಸರು ಸೇರಬಾರದು ಕಂದಾ! ಕಂದಕ ಮುಚ್ಚುವವರ ಮಾಲಿಕೆಯಲ್ಲಿ ನನ್ನ ನಿನ್ನ ಹೆಸರು ವಿರಾಜಮಾನವಾಗಬೇಕು. ಆಗಲೇ ಸಮಸಮಾಜ ಸೃಷ್ಟಿ.

ಅಸಮಾನತೆಯಿಂದ ಕೂಡಿದ ಸಮಾಜವು ಹಲವಾರು ನ್ಯೂನತೆಗಳಿಂದ ತುಂಬಿರುತ್ತದೆ. ಈ ದಿಸೆಯಲ್ಲಿ ಒಂದು ನಕಾರಾತ್ಮಕವಾದ ಸೂತ್ರ- ಅಸ್ಪೃಶ್ಯತೆ + ಜಾತೀಯತೆ = ಅಸಮಾನತೆ.

ಇದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಆಲೋಚಿಸಬೇಕಾಗುತ್ತದೆ. ಸಮಾಜದಲ್ಲಿ ಇವು ಮೂರೂ ಎಲ್ಲಿಯವರೆಗೆ ಅಸ್ತಿತ್ವದಲ್ಲಿ ಇರುತ್ತವೋ ಅಲ್ಲಿಯವರೆಗೆ ಸಮಸಮಾಜ ನಿರ್ಮಾಣಕ್ಕೆ ಆತಂಕ ಹಾಗೂ ಅಡಚಣೆ.

ಅಸಮಾನತೆಯಿಲ್ಲದ ಸಮಾಜ ರಚನೆ ಯಾವಾಗಲೂ ದೊಡ್ಡ ಸವಾಲು. ಮಾನವ ಸಂಬಂಧ ಬೆಸೆಯುವ ಪ್ರಕ್ರಿಯೆಯು ನಿರಂತರವಾಗಬೇಕು. ಮಾನವ ಸಂಬಂಧದ ಬೆಲೆಯನ್ನು ಅರಿಯದವರು ಜಾತೀಯತೆಗೆ ಒತ್ತಾಸೆ ನೀಡುತ್ತಾರೆ. ಅರಿತವರು ಮಾನವ ಮಾನವರ ನಡುವೆ ಜಾತಿ ಜಾತಿಯ ಮಧ್ಯೆ ಬಾಂಧವ್ಯ ಬೆಸೆಯಲು ಮುಂದಾಗುತ್ತಾರೆ. ಸಂಪ್ರದಾಯಕ್ಕಿಂತ ಸಂಬಂಧ ಮುಖ್ಯ. ಸಾಮಾಜಿಕ ಸಾಮರಸ್ಯ ಅತಿಮುಖ್ಯ.

ಸಮಾನ ಹಂಚಿಕೆಗಾಗಿ ಗೌತಮ ಅರಮನೆ ತೊರೆದ. ಸಾಮ್ರಾಜ್ಯಶಾಹಿಗಳು ಮತ್ತು ಧಾರ್ಮಿಕರು ನಡೆಸುತ್ತಿದ್ದ ಶೋಷಣೆಯ ವಿರುದ್ಧ ಏಸುಕ್ರಿಸ್ತ ಧ್ವನಿಯೆತ್ತಿದ. ಮಹಿಳೆಯರ ಮಾರಾಟವನ್ನು ತಡೆಯುವಲ್ಲಿ ಪೈಗಂಬರ್ ಹಲವಾರು ತೊಂದರೆ ಅನುಭವಿಸಬೇಕಾಯಿತು. ರಾಮಾನುಜಾಚಾರ್ಯ ಮತ್ತು ಮಧ್ವಾಚಾರ್ಯರು ತಮ್ಮ ಚೌಕಟ್ಟಿನೊಳಗಿದ್ದು, ಸಮಾನತೆಯ ಸಂದೇಶ ಸಾರಿದರು. ಕುಲದ ಕಲಹ ಬೇಡವೆಂದರು ಕನಕದಾಸರು. ನಾರಾಯಣ ಗುರು, ಶಂಕರದೇವ, ಕಬೀರದಾಸರು, ಸಂತ ಶಿಶುನಾಳ ಶರೀಫರು, ವೇಮನ, ಹೇಮರೆಡ್ಡಿ ಮಲ್ಲಮ್ಮ, ಗುರುನಾನಕ್ ಮೊದಲಾದವರು ಮಾನವ ಸಂಬಂಧವನ್ನು ಬೆಸೆದರು.

ಬಸವಣ್ಣನವರ ನೇತೃತ್ವದಲ್ಲಿ ಅಲ್ಲಮನ ಅಧ್ಯಕ್ಷತೆಯಲ್ಲಿ ಏಳುನೂರೆಪ್ಪತ್ತು ಗಣಂಗಳು ಸಾಕ್ಷಿಯಾಗಿ ಸಮ ಸಮಾಜ ರಚನೆಗೆ ಯತ್ನಿಸಿದರು. ಮಾನವ ಸಂಬಂಧವನ್ನು ಗಟ್ಟಿಗೊಳಿಸಲು ಸವರ್ಣೀಯನಾದ ಮಧುವರಸ ಮತ್ತು ದಲಿತ ಸಮುದಾಯದ ಸಮಗಾರ ಹರಳಯ್ಯ ದಂಪತಿಗಳು ತಮ್ಮ ಮಕ್ಕಳ ಕಲ್ಯಾಣ ಮಹೋತ್ಸವ ನೆರವೇರಿಸಿದ್ದು ಸುಲಭದ ಮಾತಲ್ಲ. ಜಾತಿ ಭಾವನೆಗಳು ಭದ್ರವಾಗಿದ್ದಂತಹ ದಿನಮಾನಗಳಲ್ಲಿ, ದಮನಿತ ಸಮುದಾಯಗಳ ಮುಖವನ್ನು ನೋಡಲಾಗದಂತಹ ದಿನಗಳಲ್ಲಿ, ರಾಜಬೀದಿಯಲ್ಲಿ ನಡೆಯುವ ಹಕ್ಕು ಇಲ್ಲದ ಆ ಸಂದರ್ಭದಲ್ಲಿ ಸಂಬೋಳಿ... ಸಂಬೋಳಿ ಎಂದು ನುಡಿಯುತ್ತ ಬೀದಿಯಲ್ಲಿ ಕ್ರಮಿಸಬೇಕಾಗಿತ್ತು. ಕೊರಳಲ್ಲಿ ಮಡಕೆಯನ್ನು ಕಟ್ಟಿಕೊಂಡು ಅದರಲ್ಲಿ ಉಗುಳಬೇಕಾಗಿತ್ತು. ರಸ್ತೆಯಲ್ಲಿ ಹಿಂದುಳಿದವರ ಹೆಜ್ಜೆಗಳು ಮೂಡುವಂತಿರಲಿಲ್ಲ. ಅದಕ್ಕಾಗಿ ಸೊಂಟಕ್ಕೆ ಮುಳ್ಳುಕಂಟಿಯನ್ನು ಕಟ್ಟಿಕೊಂಡು ನಡೆಯಬೇಕಾಗಿತ್ತು. ಜಾತಿಯ ಜಟಿಲತೆಯಿಂದ ಜರ್ಜರಿತವಾಗಿದ್ದಂತಹ ಸಮಾಜದಲ್ಲಿ ಸವರ್ಣೀಯರು ಮತ್ತು ಅವರ್ಣೀಯರ ನಡುವೆ ವೈವಾಹಿಕ ಸಂಬಂಧ ಏರ್ಪಡಿಸಿದ್ದು, ವಚನ ಚಳವಳಿಯ ಮಹತ್ತರವಾದ ಅಷ್ಟೇ ದಿಟ್ಟ ಕ್ರಮ. ಹರಳಯ್ಯನ ಮಗ ಶೀಲವಂತ, ಮಧುವಯ್ಯನ ಮಗಳು ಲಾವಣ್ಯವತಿ ಇಬ್ಬರ ಮದುವೆಯು ಉಚ್ಚವರ್ಗ ಮತ್ತು ಕೆಳವರ್ಗದ ನಡುವೆ ಸಂಬಂಧ ಬೆಳೆಸಿತು.

12ನೇ ಶತಮಾನದ ಪರಿಸ್ಥಿತಿ ಹೀಗಿದ್ದರೆ, ಬಾಬಾಸಾಹೇಬ ಅಂಬೇಡ್ಕರರ ಕಾಲದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಕೆರೆ ಮತ್ತು ಬಾವಿಯ ನೀರನ್ನು ಬಳಸುವ ಅವಕಾಶವನ್ನು ನಿರಾಕರಿಸಲಾಗಿತ್ತು. ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳೊಟ್ಟಿಗೆ ಕುಳಿತು ಕಲಿಯುವ ಅವಕಾಶ ಇರಲಿಲ್ಲ. ಸಹಭೋಜನ ಇಲ್ಲವೇ ಇಲ್ಲ.

ಸಂತರು, ಶರಣರು ಮತ್ತು ದಾರ್ಶನಿಕರು ಸರ್ವವನ್ನೂ ಕಳೆದುಕೊಂಡು ಮಾನವ ಸಂಬಂಧವನ್ನು ಗಟ್ಟಿಗೊಳಿಸುತ್ತಾರೆ. ಮೂಲಭೂತವಾದವು ಮಾನವ ಸಂಬಂಧವನ್ನು ಹೊರತುಪಡಿಸಿ, ಉಳಿದುದನ್ನು ಪಡೆಯಲು ಹವಣಿಸುತ್ತದೆ. ಮಾನವ ಸಂಬಂಧವನ್ನು ನಿರಾಕರಿಸುವ ಹಂತದಲ್ಲಿ, ಅನಾಗರಿಕ ಹಾಗೂ ಅಮಾನವೀಯ ಯುಗದತ್ತ ಸಮಾಜವು ತಳ್ಳಲ್ಪಡುತ್ತದೇನೋ ಎಂಬ ಸಂದೇಹ.

ಸಮಕಾಲೀನ ಸಂದರ್ಭದಲ್ಲಿ ಸರ್ವಧರ್ಮ ಮತ್ತು ಸರ್ವಜಾತಿಗಳಲ್ಲೂ ಸ್ವಜಾತಿಯನ್ನು ಮೀರಿ ಅನ್ಯ ಜಾತಿ-ಧರ್ಮಗಳೊಂದಿಗೆ ಸಂಬಂಧ ಕುದುರಿಸುವ ಯತ್ನಗಳು ನಡೆಯುತ್ತಲೇ ಇವೆ. ಈ ಸಂಬಂಧಕ್ಕೆ ಸೇತುವೆ ಪ್ರೀತಿ-ಪ್ರೇಮ. ಸರ್ವಧರ್ಮದ ಆಚೆಗೆ ಒಂದು ಧರ್ಮವಿದೆ. ಅದು ಕಾಲಧರ್ಮ. ಮತಧರ್ಮಗಳು ಮಾನವ ಸಂಬಂಧವನ್ನು ನಿರಾಕರಿಸಿದರೆ, ಕಾಲಧರ್ಮವು ಮಾನವ ಸಂಬಂಧವನ್ನು ಮುಂದುವರಿಸುತ್ತದೆ. ಸಮಸಮಾಜ ಸ್ಥಾಪಿಸುವಲ್ಲಿ ಸಮತೆ + ಮಮತೆ = ಸಮಾನತೆ.

ಬಹುಮುಖ್ಯ ಇವುಗಳ ಪಾತ್ರ. ಇದುವೇ ಸಮಕಾಲೀನ ಧರ್ಮದ ಸೂತ್ರ. ಇಂಥ ಸೂತ್ರಗಳಿಗೆ ಒಳಗಾದಾಗ ಸಮಾಜವು ಸುಸೂತ್ರ.

ಸಂಗತ

ವಿರುದ್ಧ ದಿಕ್ಕಿಗೆ ಹೆಜ್ಜೆ ಸಾಧ್ಯವೇ?

ಪರಿವರ್ತನೆಯು ವಿನಾಶದೆಡೆಗೆ ಜಗತ್ತನ್ನು ಮುನ್ನಡೆಸುವಂತೆ ಆಗಬಾರದು

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಕೊರೊನಾ ಕಾರಣದಿಂದ ಮಕ್ಕಳ ಕಲಿಕೆ- ಪರೀಕ್ಷೆ, ಶಾಲೆ, ನಾಳೆಗಳ ಅನಿಶ್ಚಿತತೆಯ ಬಗ್ಗೆ ಆತಂಕಗೊಂಡ ವ್ಯಕ್ತಿಯೊಬ್ಬ ಪ್ರಶ್ನಿಸಿದ– ‘ಮಿಂಚಿನ ವೇಗದಲ್ಲಿರುವ ಧಾವಂತದ ಜಗತ್ತು ಸೂಕ್ಷ್ಮಾಣು ಭಯಕ್ಕೆ ನಿಂತಲ್ಲೇ ಬಿಮ್ಮಗೆ ನಿಲ್ಲುವುದಾದರೂ ಯಾಕೆ? ಹಾಗೆ ನಿಲ್ಲುವುದಾದರೆ ಅಷ್ಟೊಂದು ವೇಗವೇಕೆ ಬದುಕಿಗೆ?! ಬೆಳಿಗ್ಗೆಗೊಂದು ಬೈಗಿಗೊಂದು ದೇಶ ಸುತ್ತುವವರಿರುವ ಕಾಲಘಟ್ಟದಲ್ಲಿ, ಮನೆಯೊಳಗೆ ಕೂತು ಬಿಲದ ಇಲಿಗಳಂತೆ ಅವಿತುಕೊಳ್ಳುವ ಪಾಡೇಕೆ ಹೀಗೆ? ಹಾಗಾದರೆ ‘ಕೊರೊನಾ’ ಎಂದರೇನು? ಅದು ತಂತ್ರಜ್ಞಾನದ ಅಣಕವೇ? ಅಭಿವೃದ್ಧಿ-ಆಧುನಿಕತೆಯ ಸ್ವರೂಪವೇ ಅಥವಾ ಕಾಲಚಕ್ರ ತಿರುಗುತ್ತಿರುವುದರ ಸಂಕೇತವೇ?’

ಉತ್ತರ ಸರಳ– ಕೇವಲ ಅರ್ಧಶತಮಾನ ಕಳೆಯುವಷ್ಟರಲ್ಲಿ ಜಗತ್ತು ಎಷ್ಟೊಂದು ಬದಲಾಗಿಹೋಯಿತು. ಪರಿವರ್ತನೆ ಜಗದ ನಿಯಮ ಹೌದಾದರೂ ಅದು ವಿನಾಶದೆಡೆಗೆ ಜಗತ್ತನ್ನು ಮುನ್ನಡೆಸುವಂತೆ ಆಗಬಾರದು. ಆ ದಿನಗಳಲ್ಲಿ ಸರಳತೆಯೇ ಶ್ರೇಷ್ಠತೆಯಂತಿತ್ತು. ಕಾಲುದಾರಿ, ಗಾಡಿಹಾದಿಗಳು ಬರಿಗಾಲ ನಡಿಗೆಗೆ ಮತ್ತು ಎತ್ತಿನಗಾಡಿಗೆ ಸಾಕಾಗುತ್ತಿದ್ದವು. ಕಿತ್ತುಹೋಗಿದ್ದ ಡಾಂಬರು ರಸ್ತೆಯಲ್ಲಿ ಅಪ್ಪನ ಸೈಕಲ್ ಓಡುತ್ತಿತ್ತು. ಸವಾರಿಗಳಲ್ಲಿ ಕಾಣದ ಕಸುವಿತ್ತು. ಆದರೀಗ ಮನೆಗೊಂದು ಐಷಾರಾಮಿ ಕಾರು ಬಂದುನಿಂತ ಮೇಲೆ, ಕೋಟಿ ಖರ್ಚಿನಲ್ಲಿ ಮನೆಯೆದುರಿನ ಹೈವೇ-ರಸ್ತೆ ಲಕಲಕ ಹೊಳೆಯುವಂತಾದ ಮೇಲೆ ಕಾಡುಗುಡ್ಡಗಳೆಲ್ಲಾ ಕರಗಿ ಬಿಸಿಗಾಳಿ ಬೀಸುತ್ತಿರುವ ಅರಿವಾಗಿದೆ.

ಆಗೆಲ್ಲಾ, ತಂತ್ರಜ್ಞಾನದ ಮಾಯೆಯಿಂದ ಅಂಗೈಯಲ್ಲಿ ಬ್ರಹ್ಮಾಂಡ ತೋರುತ್ತಿರಲಿಲ್ಲ. ಹಾಗಾಗಿ ಶಾಲೆ-ಪುಸ್ತಕಗಳ ಓದಿಗೆ ಮನ್ನಣೆ ಇತ್ತು. ದಾರಿದೀಪಗಳಂತಿದ್ದ ಹಿರಿಯರ ಮಾತುಮೀರುವ ಧೈರ್ಯ ತೋರುತ್ತಿದ್ದವರು ವಿರಳ. ಈಗಿನಂತೆ ಎಲ್ಲವೂ ಬಿಕರಿಗಿರಲಿಲ್ಲ. ಮಾತು-ನಗು, ಸಂಬಂಧಗಳಲ್ಲಿ ಗಾಢಭಾವ ಉಕ್ಕುತ್ತಿದ್ದ ದಿನಗಳವು. ಕೊಳ್ಳುಬಾಕತನದ ಭ್ರಾಂತಿಯಲ್ಲಿ ಬೇಡದ ವಸ್ತುಗಳನ್ನು ಕೊಂಡೊಯ್ದು ಮನೆಯನ್ನೇ ಕಸದ ತೊಟ್ಟಿಯನ್ನಾಗಿ ಮಾಡುತ್ತಿರಲಿಲ್ಲ. ಅದರಿಂದಾಗಿ ಗಾಳಿ-ನೀರು ಶುದ್ಧವಿದ್ದವು, ಉತ್ಪಾದನೆ-ರವಾನೆ ಅಂತ ಪರಿಸರದ ಮೇಲೆ ವಿಪರೀತ ಒತ್ತಡವೆಲ್ಲಿತ್ತು?

ಮಿಶ್ರ ಬೇಸಾಯದಲ್ಲಿ ಸಾವಯವ ಪದ್ಧತಿ ಚಾಲ್ತಿಯಲ್ಲಿದ್ದ ಕಾಲವದು. ನೆಲದ ಸೂಕ್ಷ್ಮಾಣುಗಳ ಕೊಳೆಸುವಿಕೆ ಕ್ರಿಯೆಯು ಪೋಷಕಾಂಶಗಳ ಚಲನೆಗೆ ಕಾರಣವಾಗುತ್ತಿತ್ತು. ಕ್ರಿಮಿಕೀಟಗಳನ್ನು ತಿನ್ನುವ ಹಕ್ಕಿಪಕ್ಷಿಗಳು ಜೈವಿಕ ನಿಯಂತ್ರಣವನ್ನು ಸಾಧ್ಯಮಾಡುತ್ತಿದ್ದವು. ಮಣ್ಣನ್ನು ನಿರ್ಜೀವಗೊಳಿಸುವ ರಾಸಾಯನಿಕಗಳನ್ನು ಲೋಡುಗಟ್ಟಲೆ ತಂದು ಸುರಿದು ಆಹಾರವನ್ನು ವಿಷಮಯಗೊಳಿಸುವ, ನೆಲವನ್ನು ಮರುಭೂಮೀಕರಣಗೊಳಿಸುವ ಅಗತ್ಯವಿರಲಿಲ್ಲ. ಕೀಟನಾಶಕದಂಥ ವಿಷಪದಾರ್ಥಗಳಿಂದ ಸಹಜೀವಿಗಳನ್ನು ಕೊಂದುಕೊಳ್ಳುತ್ತಾ, ಗಾಳಿ-ನೀರನ್ನು ಮಲಿನಗೊಳಿಸುತ್ತಿರಲಿಲ್ಲ. ಪರಿಸರದ ಸಮತೋಲನವನ್ನು ಕದಡುತ್ತಿರಲಿಲ್ಲ.

ಬದುಕಿಡೀ ಕಾಯಿಲೆ ಕಂಡಿರದ ಮಂದಿ ಊರಲ್ಲಿದ್ದರು. ಮಲೆನಾಡಲ್ಲಂತೂ ಬಂಗಾರದ ಬೆಳೆಗಳ ಹಾವಳಿ ಇಷ್ಟಿರಲಿಲ್ಲ. ಅಡಿಕೆ-ಶುಂಠಿಗಾಗಿ ಕಾಡಿನೊಳಗೆ ನುಸಿದ ಒಡ್ಡುಬೇಲಿಯೆಂಬ ಕೋಟೆಯೊಳಗೆ ರಾತ್ರಿ ಬೆಳಗಾಗುವುದರಲ್ಲಿ ಕಾಡುಗುಡ್ಡಗಳು ಸುಟ್ಟು ಭಸ್ಮಗೊಳ್ಳುತ್ತಿರಲಿಲ್ಲ. ಕೆರೆ-ಗದ್ದೆಗಳಿನ್ನೂ ಲೇಔಟ್‌ಗಳಾಗಿರಲಿಲ್ಲ. ಉಳ್ಳವರು-ಇಲ್ಲದವರ ನಡುವಿನ ಗೋಡೆಯಾಚೆಗೆ ಸಂಯಮ-ಸೈರಣೆಗಳಿದ್ದವು. ಅದಾಗ ಸಾವಧಾನದ ನೆಲವಾಗಿತ್ತು. ತುಂಗೆ ತಣ್ಣಗೆ ಹರಿಯುತ್ತಿದ್ದಳು.

ಕಾಲ ಹಿಮ್ಮುಖವಾಗಿ ಚಲಿಸುವುದಿಲ್ಲವೆಂಬುದು ನಿಜವಾದರೂ ವ್ಯಕ್ತಿಯೊಬ್ಬನ ಗಂಭೀರ ಪ್ರಶ್ನೆಯನ್ನು ಜಗದಂತರಂಗ ಕೂತು ಕೇಳಿಸಿಕೊಳ್ಳಬೇಕಿದೆ. ‘ಬೈಕೊಂದಕ್ಕೆ ನೂರೈವತ್ತು ಕಿ.ಮೀ ಓಡುವ ಸಾಮರ್ಥ್ಯ ಇದ್ದಾಗಲೂ ಅಷ್ಟೇ ವೇಗಕ್ಕೆ ಹಾತೊರೆಯಬಾರದು, ಸುರಕ್ಷತೆಗಾಗಿ ವೇಗ ನಿಯಂತ್ರಣವಿರಬೇಕು ಅನ್ನುತ್ತೀರಲ್ಲ. ಹಾಗಿದ್ದರೆ ಇವತ್ತಿನ ಬದುಕಿನ ಆಧುನಿಕ ಶೈಲಿ, ಅಭಿವೃದ್ಧಿ, ತಂತ್ರಜ್ಞಾನಗಳ ಸ್ವರೂಪಕ್ಕೊಂದು ಕಡಿವಾಣ ಬೇಕಲ್ಲವೇ?’

ಉತ್ತರ ಹುಡುಕಬೇಕಾದ ಜಗತ್ತು ಹಿಮಾಲಯದ ತಪ್ಪಲಿನ ಭೂತಾನ್ ಎಂಬ ಪುಟ್ಟದೇಶದ ಅಚ್ಚರಿಯ ಹೆಜ್ಜೆಗಳನ್ನು ಗುರುತಿಸಬೇಕಿದೆ. ಅಭಿವೃದ್ಧಿಯ ನಾಗಾಲೋಟದಲ್ಲಿ ಓಡುತ್ತಿರುವ ಮಿಕ್ಕೆಲ್ಲಾ ರಾಷ್ಟ್ರಗಳ ವಿರುದ್ಧ ದಿಕ್ಕಿನಲ್ಲಿ ಅದು ಹೆಜ್ಜೆ ಹಾಕುತ್ತಿದೆ. ಲಾಭ, ಆರ್ಥಿಕತೆ, ವಿಲಾಸಿ ಜೀವನವೆಲ್ಲಾ ಅಲ್ಲಿಯ ಆದ್ಯತೆಗಳೇ ಅಲ್ಲ. ನೆಲ ಬಗೆದು, ಕಾಡು ಕಡಿದು ಎಬ್ಬಿಸುವ ಬೃಹತ್ ರಸ್ತೆ-ಸೇತುವೆ, ಕಟ್ಟಡ-ಮಹಲುಗಳನ್ನು ಅವರೆಲ್ಲ ಅಭಿವೃದ್ಧಿ ಅಂದುಕೊಂಡಿಲ್ಲ. ಅಲ್ಲಿಯ ನೆಲದ ಪ್ರತಿಯೊಂದೂ ಕಾನೂನು-ಕಟ್ಟಲೆಗಳನ್ನು ಜನರ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯ ಹೊಣೆಗಾರಿಕೆಯಿಂದ ಸೂಕ್ಷ್ಮವಾಗಿ ರೂಪಿಸಲಾಗುತ್ತದೆ.

ಪ್ರವಾಸೋದ್ಯಮದ ಉಪದ್ರವಗಳನ್ನು ಮನಗಂಡ ಸರ್ಕಾರ, ಅಂತಹ ಚಂದದ ದೇಶದ ಪ್ರವಾಸಿಗರಿಗೆ ದುಬಾರಿ ಶುಲ್ಕ ವಿಧಿಸಿ, ಅದನ್ನು ಸುಸ್ಥಿರ ಅಭಿವೃದ್ಧಿಗಾಗಿಯೇ ಮೀಸಲಿರಿಸಿದೆ. ಅಲ್ಲಿ 1999ರಲ್ಲಿಯೇ ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ಅದು, ತಂಬಾಕನ್ನು ಕಾನೂನುಬಾಹಿರಗೊಳಿಸಿರುವ ಜಗತ್ತಿನ ಏಕೈಕ ದೇಶ!

ವನ್ಯಮೃಗಗಳ ಹತ್ಯೆಗಾಗಿ ಅಲ್ಲಿ ಜೀವಾವಧಿ ಶಿಕ್ಷೆಯಿದೆ. ಅಲ್ಲಿಯ ಸಂವಿಧಾನವೇ ಪರಿಸರ ಸಂರಕ್ಷಣೆಯನ್ನು ಮೂಲಭೂತ ಕರ್ತವ್ಯವನ್ನಾಗಿ ಪ್ರಜೆಗಳಿಗೆ ಬೋಧಿಸಿದೆ. ದೇಶದ ಅತಿದೊಡ್ಡ ರಫ್ತು ಎಂದರೆ ‘ನವೀಕರಿಸಬಲ್ಲ ಇಂಧನ ಮೂಲಗಳು’!

ಆಧುನೀಕರಣದ ಆಪತ್ತುಗಳನ್ನು ಸ್ಪಷ್ಟವಾಗಿ ಗ್ರಹಿಸಿರುವ ಭೂತಾನ್, ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಕಾಳಜಿಯಲ್ಲಿ ಜಗತ್ತಿನ ವಿನೂತನ ಮಾರ್ಗಸೂಚಿಯಂತಿದೆ.

ಚುರುಮುರಿ

ನಾವೇನು ಕಡಿಮೆ?

● ಸುಮಂಗಲಾ

ರಾತ್ರಿ ಬೆಕ್ಕಣ್ಣ ಏನೇನೋ ಸರ್ಟಿಫಿಕೇಟು, ಪ್ರಶಸ್ತಿ-ಪತ್ರಗಳ ಪ್ರತಿ ಎಲ್ಲವನ್ನೂ ಗುಡ್ಡೆ ಹಾಕಿಕೊಂಡು, ಜೋಡಿಸುತ್ತ ಕೂತಿತ್ತು.

‘ಏನ್ ಹೊಸ ಕಾರುಬಾರು ನಡಿಸೀಯಲೇ’ ಎಂದು ಕೇಳಿದೆ.

‘ಎಲ್ಲದಕ್ಕೆ ಅಡ್ಡಬಾಯಿ ಹಾಕಬ್ಯಾಡ. ಮಾರ್ಜಾಲ ಡಾಕ್ಟರೇಟ್ ನನಗೇ ಕೊಡಬಕು ಅಂತ ಯೆಡ್ಯೂರಜ್ಜಾರ ಕಡಿಂದ ವಿ.ವಿಯವರಿಗೆ ಹೇಳಿಸೀನಿ. ಮಾಡಕ್ಕೆ ದಗದ ಇಲ್ಲದೆ ಖಾಲಿಪೀಲಿ ಕುತ್ತ ಮಂದಿ ಆಮ್ಯಾಗ ಇಂವಂಗ ಎದಕ್ಕ ಕೊಟ್ಟರು ಅಂತ ಬಡಕೋತಾರಲ್ಲ... ಅದಕ್ಕೇ ನಾನೂ ಎಷ್ಟ್ ಸಾಧನೆ ಮಾಡೀನಿ ಅಂತ ತೋರಿಸಾಕ ಇವನ್ನೆಲ್ಲ ರೆಡಿ ಮಾಡಿಟ್ಟು ಕೊಳ್ಳಾಕ ಹತ್ತೇನಿ’ ಎಂದು ಘನಗಂಭೀರವಾಗಿ ನುಡಿದು ಅವನ್ನೆಲ್ಲ ಕವರಿನೊಳಗೆ ಹಾಕಿಟ್ಟು, ಹೊರಹೋಗಲು ಅಣಿಯಾಯಿತು.

‘ಇನ್ ಮ್ಯಾಗ ರಾತ್ರಿ ಹತ್ತರ ಮ್ಯಾಗ ಹೊರಗ ಸರ್ಕೀಟು ಬ್ಯಾಡ, ನಿಮ್ಮ ಅಜ್ಜಾರು ಕರ್ಫ್ಯೂ ಹೇರಿದಾರ. ನೀ ಸುಮ್ ಸುಮ್ನೆ ಓಡಾಡ್ತಿದ್ದರೆ ವದ್ದು ವಳಗ ಹಾಕ್ತಾರ’ ಅಂದೆ.

‘ಅಜ್ಜಾರು ಭೇಷ್ ಮಾಡ್ಯಾರ ಮತ್ತೆ. ನಿನಗ್ಗೊತ್ತೈತಿಲ್ಲೋ... ಕೊರೊನಣ್ಣ ರಾತ್ರಿಯಿಂದ ಶುರು ಮಾಡಿ, ನಸುಕಿನ ತನಕ ತನ್ನ ದಂಡು ಕಟ್ಟಕೆಂಡು ಮಂದಿ ಮ್ಯಾಗ ದಾಳಿ ಮಾಡತಾನಂತ. ಅದಕ್ಕ ರಾತ್ರಿ ಕರ್ಫ್ಯೂ ಹಾಕಿ ಭೇಷ್ ಮಾಡ್ಯಾರ’ ಎಂದು ಗುಣಗಾನ ಮಾಡಿತು.

‘ನಾರ್ವೆವಳಗ ಕಾರ್ಯಕ್ರಮಕ್ಕೆ ಮನೆಯವರು 10 ಜನ ಮಾತ್ರ ಸೇರಬೌದಂತೆ. ಅಲ್ಲಿಯ ಪ್ರಧಾನಿ 13 ಜನರ ಮುಂದೆ ತಮ್ಮ ಹುಟ್ಟಿದಹಬ್ಬ ಆಚರಿಸಿದ್ದಕ್ಕೆ 1.75 ಲಕ್ಷ ರೂಪಾಯಿ ದಂಡ ಹಾಕ್ಯಾರಂತ. ನಮ್ಮಲ್ಲೂ ಹಂಗ ಸ್ಟ್ರಿಕ್ಟ್ ಮಾಡಬಕು’.

‘ಬೆಂಗಳೂರಿನಾಗ ಆರು ತಿಂಗಳು ಕಲ್ಯಾಣ ಮಂಟಪ ಬಂದ್ ಆಜ್ಞೆ ಮಾಡ್ಯಾರೆ. ಮುಂಬೈ ಮಹಾನಗರ ಪಾಲಿಕೆಯವರು ಹೋದ ವರ್ಷದಿಂದ 40 ಕೋಟಿ ರೂಪಾಯಿ ಮಾಸ್ಕ್ ದಂಡ ವಸೂಲು ಮಾಡ್ಯಾರೆ, ಬೆಂಗಳೂರಾಗೂ ಹತ್ತು ಕೋಟಿ ಮ್ಯಾಲೆ ದಂಡ ವಸೂಲು ಮಾಡ್ಯಾರ. ನಾವು ಕೊರೊನಾ ಕೇಸುಗಳು, ಸಾವು, ದಂಡ, ಲಾಕ್‌ಡೌನ್ ನಿಯಮಗಳು ಹಿಂಗ ಎದರಾಗೂ ಕಡಿಮಿ ಇಲ್ಲ ತಿಳಕೋ’ ಬೆಕ್ಕಣ್ಣ ಗುರುಗುಡುತ್ತ ವಾದಿಸಿತು!

ವಾಚಕರ ವಾಣಿ

ರಾಹುಲ್ ರೌದ್ರಾವತಾರಕ್ಕೆ ನಾಗರಿಕರು ಋಣಿ!

ಜಾಹೀರಾತು ಎಂದರೆ ಏನು ಬೇಕಾದರೂ ತೋರಿಸಬಹುದೇ? ಜಾಹೀರಾತಿನಲ್ಲಿ ಪಾಲ್ಗೊಳ್ಳುವ ಸೆಲೆಬ್ರಿಟಿಗಳಿಗಾದರೂ ಸಾಮಾನ್ಯ ಜ್ಞಾನ, ಸಾಮಾಜಿಕ ಹೊಣೆಗಾರಿಕೆ ಎಂಬುದು ಇರುವುದಿಲ್ಲವೇ? ‘ನಾನು ಗೂಂಡಾ’ ಎಂದು ರಾಹುಲ್ ದ್ರಾವಿಡ್ ಅವರು ಅಬ್ಬರಿಸುವ ಒಂದು ಜಾಹೀರಾತಿನ ಸುದ್ದಿ ವೈರಲ್ ಆಗಿದೆಯಂತೆ (ಪ್ರ.ವಾ., ಏ. 11).

ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡ ಈ ಸೆಲೆಬ್ರಿಟಿ ರೌದ್ರಾವತಾರ ತಾಳಿ, ಅಬ್ಬರಿಸಿ, ತಮ್ಮ ಕೈಯಲ್ಲಿನ ಬ್ಯಾಟ್ ಬೀಸಿ ಕಾರೊಂದರ ಗಾಜನ್ನು ಕುಟ್ಟಿ ಪುಡಿ ಮಾಡುವ ದೃಶ್ಯ ಇದು. ಅಭಿನಯ ಚೆನ್ನಾಗಿದೆಯಂತೆ. ಇದರ ಪರಿಕಲ್ಪನೆ ಮಾಡಿದವರಿಗೂ ನಿರ್ದೇಶಕರಿಗೂ ವಿಶೇಷವಾಗಿ ‘ಪ್ರಚಂಡ’ವಾಗಿ ನಟಿಸಿರುವ ದ್ರಾವಿಡ್ ಅವರಿಗೂ ಜಗತ್ತಿನ ನಾಗರಿಕರು ಋಣಿಯಾಗಿರಬೇಕಲ್ಲವೇ?!

ಅವರು ಜಾಹೀರು ಮಾಡಿರುವ ಸಂದೇಶದ ಪ್ರಕಾರ- ಇನ್ನು ಎಲ್ಲಿಯೇ ಆದರೂ ಟ್ರಾಫಿಕ್ ಜಾಮ್ ಆದರೆ ತಕ್ಷಣವೇ ನಿಮ್ಮ ಬ್ಯಾಟ್ ಅಥವಾ ದೊಣ್ಣೆ ಬೀಸಿ ಪಕ್ಕದ ಯಾರದೋ ಕಾರನ್ನು ಚಚ್ಚಿ ‘ನಾನು ಗೂಂಡಾ’ ಎಂದು ಕೈ ಎತ್ತಿ ಅಬ್ಬರಿಸಿರಿ; ಯಾರಾದರೂ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಲೈಕ್ ಗಿಟ್ಟಿಸಲಿ!

ಡಾ. ಟಿ.ಗೋವಿಂದರಾಜು, ಬೆಂಗಳೂರು

ಚಾಲಕರ ಪಾಲಿನ ದೇವರಿಗೆ ಈ ಸ್ಥಿತಿಯೇ?

ಸಾರಿಗೆ ನೌಕರರು ಮುಷ್ಕರನಿರತರಾಗಿರುವ ಸಂದರ್ಭದಲ್ಲಿ, ಅವರಿಗೆ ಅನ್ನ ನೀಡುವ, ಅವರ ಕುಟುಂಬವನ್ನು ಸಲಹುವ ಬಸ್‌ಗೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿರುವುದನ್ನು ತಿಳಿದು (ಪ್ರ.ವಾ., ಏ. 9) ಮನ ಕಲಕಿತು. ಬಹುತೇಕ ಚಾಲಕರ ಪಾಲಿಗೆ ಬಸ್ ದೇವರು ಇದ್ದ ಹಾಗೆ. ಬೆಳಿಗ್ಗೆ ಮುಕ್ತ ಮನಸ್ಸಿನಿಂದ ಕಸ ಸ್ವಚ್ಛಗೊಳಿಸಿ ನೀರು ಚಿಮುಕಿಸಿ ಹೂವಿನ ಮಾಲೆ ತೊಡಿಸಿ ಊದುಬತ್ತಿ ಬೆಳಗಿ ಕೈಮುಗಿದ ನಂತರವೇ ಪ್ರಯಾಣಿಕರನ್ನು ಬಸ್ಸಿನ ಒಳಗೆ ಹತ್ತಿಸಿಕೊಳ್ಳುವುದನ್ನು ಗಮನಿಸಿದ್ದೇನೆ. ಈ ಸಂಪ್ರದಾಯವನ್ನು ಬಹುತೇಕ ಚಾಲಕರು ಉಳಿಸಿಕೊಂಡು ಬಂದಿದ್ದಾರೆ. ಅಂಥ ಬಸ್‌ಗೆ ಕಲ್ಲು ಹೊಡೆಯುವವರೂ ಇದ್ದಾರೆ ಎಂಬುದನ್ನು ಕಲ್ಪಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಪ್ರತಿಭಟನೆ ಯಾವುದೇ ಇರಲಿ, ಪ್ರತಿಭಟಿಸುವವರ ಆಕ್ರೋಶಕ್ಕೆ ಮೊದಲು ಗುರಿಯಾಗುವುದು ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಬಸ್‌ಗಳು. ಕಲ್ಲು ಹೊಡೆಯುವುದು, ಬೆಂಕಿ ಹಚ್ಚುವುದು ಸಾಮಾನ್ಯ. ಹೀಗೆ ಮಾಡಿದರೆ ಮಾತ್ರ ಪ್ರತಿಭಟನೆಗೆ ಅರ್ಥ ಬರುತ್ತದೆ ಎಂದೇ ಕೆಲವರು ತಿಳಿದಿರುತ್ತಾರೆ. ಬಸ್‌ಗಳಿಗೆ ಹಾನಿ ಮಾಡಿದರೆ ಯಾರಿಗೆ ನಷ್ಟ ಅಥವಾ ಲಾಭ ಎಂಬುದರ ಬಗ್ಗೆ ಕಿಡಿಗೇಡಿಗಳು ಆಲೋಚಿಸಲಿ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಈ ಬಾರಿಯೂ ಗೊಂದಲಮಯ ನಿರ್ಧಾರ

ಒಂದು ವರ್ಷದ ಕೊರೊನಾ ಪರಿಣಾಮದ ಅನುಭವದ ನಡುವೆಯೂ ಚುನಾವಣಾ ಪ್ರಚಾರಕ್ಕೆ ಮುಕ್ತವಾಗಿ ಅವಕಾಶ ಕೊಟ್ಟು, ಇನ್ನಿತರ ಚಟುವಟಿಕೆಗಳಿಗೆ ನಿರ್ಬಂಧ ಹೇರಿ, ಜನರ ಓಡಾಟ ವಿರಳವಾಗಿರುವ ಸಮಯದಲ್ಲಿ ಅನಗತ್ಯವಾಗಿ ರಾತ್ರಿ ಕರ್ಫ್ಯೂ ಹೇರಿದರೆ ಏನು ಪ್ರಯೋಜನ? ಕಳೆದ ಬಾರಿಯೂ ಇದೇ ರೀತಿಯ ಗೊಂದಲಮಯ, ಗೋಜಲು ನಿರ್ಧಾರಗಳು.

ಒಂದೆಡೆ ಆರ್ಥಿಕತೆ ಈಗಷ್ಟೇ ಪುನಶ್ಚೇತನಗೊಳ್ಳುತ್ತಿದ್ದರೆ ಮತ್ತೊಂದೆಡೆ ಎಷ್ಟೋ ಮಂದಿಗೆ ಕೊರೊನಾ ಸಂದರ್ಭವು ಒಂದು ದಂಧೆಯಂತೆಯೇ ಭಾಸವಾಗುತ್ತಿದೆ. ರಾತ್ರಿ ಕರ್ಫ್ಯೂ ತೆಗೆದುಹಾಕುವುದು ಒಳಿತು. ಕೋವಿಡ್ ಮಾರ್ಗಸೂಚಿ ಪಾಲನೆ, ಜಾಗೃತಿ ಮೂಡಿಸುವಿಕೆ ಮತ್ತು ಲಸಿಕೆ ನೀಡಿಕೆ... ಇವು ಮಾತ್ರ ಪರಿಹಾರೋಪಾಯಗಳು.

ರವಿಕುಮಾರ್ ಎನ್., ಮೈಸೂರು

ಬೇಜವಾಬ್ದಾರಿತನದ ನಡೆ ಸಲ್ಲ

ವಿಮಾನ ಪ್ರಯಾಣಿಕರಿಗೆ ವೈದ್ಯಕೀಯ ಪ್ರಮಾಣಪತ್ರ ಪರಿಶೀಲನೆ ಕಡ್ಡಾಯಗೊಳಿಸಬೇಕು ಎಂಬುದನ್ನು ಜಯಮ್ಮ ಗೋಪಾಲಕೃಷ್ಣ ಅವರು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾರೆ (ವಾ.ವಾ., ಏ. 10). ನಿಜ, ಕೊರೊನಾದ ಮೊದಲ ಅಲೆಯ ಸಂದರ್ಭದಲ್ಲಿ ವಿದೇಶಗಳಿಂದ ಯಾವುದೇ ಎಗ್ಗಿಲ್ಲದೆ ವಿಮಾನಗಳ ಮೂಲಕ ಲಕ್ಷಾಂತರ ಮಂದಿ ದೇಶವನ್ನು ಪ್ರವೇಶಿಸಿದರು. ಆ ದಿನಗಳಲ್ಲಿ ಹೀಗೆ ಬಂದವರನ್ನು ವಿಮಾನ ನಿಲ್ದಾಣಗಳಲ್ಲಿ ಯಾವುದೇ ಪರೀಕ್ಷೆಗೂ ಒಳಪಡಿಸದೆ, ಕ್ವಾರಂಟೈನ್‌ಗೂ ಒಳಪಡಿಸದೆ ಸೀದಾಸಾದಾ ದೇಶದೊಳಕ್ಕೆ ಬಿಟ್ಟುಕೊಂಡ ಬೇಜವಾಬ್ದಾರಿತನದ ನಡೆಯಿಂದಾಗಿ ದೇಶದಾದ್ಯಂತ ಕೊರೊನಾ ಹರಡಿ ಜನರನ್ನು ಇನ್ನಿಲ್ಲದಂತೆ ಕಾಡುವಂತಾಯಿತು. ಕೊರೊನಾದ ಎರಡನೇ ಅಲೆ ಶುರುವಾಗಿರುವ ಈ ಸಂದರ್ಭದಲ್ಲಾದರೂ ಸರ್ಕಾರಗಳು ಎಚ್ಚರಿಕೆಯಿಂದ ವರ್ತಿಸಬೇಕು.

ರಾಜೇಂದ್ರ ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ

ಕನ್ನಡ ಪ್ರೀತಿಗೆ ಬೇಕು ನೆರವಿನ ಹಸ್ತ

ಮೈಸೂರಿನ ಸೈಯದ್ ಇಸಾಕ್ ಅವರು ಸ್ವಂತ ವೆಚ್ಚದಲ್ಲಿ ಹಾಗೂ ಹಲವಾರು ದಾನಿಗಳಿಂದ ಸಂಗ್ರಹಿಸಿ, ನಿರ್ವಹಿಸುತ್ತಿದ್ದ ಕನ್ನಡ ಪುಸ್ತಕಗಳ ಚಾವಡಿಗೆ ದುಷ್ಕರ್ಮಿಗಳು ಬೆಂಕಿ ಇಟ್ಟಿರುವುದು ಕನ್ನಡ ಭಾಷೆಗೆ ದ್ರೋಹ ಬಗೆದಂತೆ. ಚಾವಡಿ ತೆರವುಗೊಳಿಸಬೇಕೆಂಬ ಬೆದರಿಕೆಗೆ ಮಣಿಯದ ಇಸಾಕ್, ಶಕ್ತಿಶಾರದೆಯ ಆರಾಧನೆಗೆ ಕಿಂಚಿತ್ತೂ ಕುಂದು ಬರದಂತೆ ಚಾವಡಿ ನಡೆಸುತ್ತಿದ್ದ ಬಗೆ ಅನನ್ಯವಾದುದು.

ಪುಸ್ತಕ ಮತ್ತು ಪತ್ರಿಕೆ ಓದುವವರಿಗಿಂತ, ದೃಶ್ಯ ಮಾಧ್ಯಮಗಳನ್ನು ನೋಡುವವರ ಸಂಖ್ಯೆ ಹೆಚ್ಚಾಗುತ್ತಿರುವ ಇಂಥ ಸಂದರ್ಭದಲ್ಲಿ ಇಸಾಕ್ ಅವರು ತಮ್ಮ ಭಾಷಿಕರೇ ಹೇರಳವಾಗಿರುವ ಉದಯಗಿರಿಯಲ್ಲಿ ಕನ್ನಡ ಓದುಗರಿಗಾಗಿ ಧರ್ಮನಿರಪೇಕ್ಷವಾಗಿ ಪುಸ್ತಕ ಚಾವಡಿ ಸ್ಥಾಪಿಸಿ, ಪ್ರತಿಫಲಾಪೇಕ್ಷೆಯಿಲ್ಲದೇ ಕಾರ್ಯನಿರ್ವಹಿಸುತ್ತಿದ್ದುದನ್ನು ಸರ್ಕಾರಕ್ಕಿಂತ ಕನ್ನಡ ಪುಸ್ತಕಪ್ರೇಮಿಗಳು ಗುರುತಿಸಿ ಸಲಾಂ ಹೇಳಿದ್ದಾರೆ. ದ್ವೇಷದ ದಳ್ಳುರಿಗೆ ಪುಸ್ತಕಗಳು ಬೆಂದುಹೋಗಿವೆ. ಈಗ ಇಸಾಕ್ ಅವರಿಗೆ ಸಾಂತ್ವನಕ್ಕಿಂತ ದಾನಿಗಳ ನೆರವಿನ ಮಹಾಪೂರ ಹರಿದು ಬಂದಿದೆ. ಪುಸ್ತಕ ಚಾವಡಿಗೆ ‘ಸೂರು’ ಒದಗಿಸುವ ಮೂಲಕ ಸಾಹಿತ್ಯ-ಸಂಸ್ಕೃತಿಯ ಅಸ್ಮಿತೆಯನ್ನು ಪೋಷಿಸುವುದು ಸರ್ಕಾರದ ಇಂದಿನ ತುರ್ತು ಕರ್ತವ್ಯ.

ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಖ್ಯಮಂತ್ರಿಯ ಪರಮಾಧಿಕಾರ
ಇಲ್ಲದೇ ಇರುವ ಅಧಿಕಾರ

● ಕೆ.ಆರ್. ರಮೇಶ್ ಕುಮಾರ್



ಮುಖ್ಯಮಂತ್ರಿಯವರ ಪರಮಾಧಿಕಾರದ ಪ್ರಶ್ನೆಗೆ ಬರುವ ಮುನ್ನ ನೆಹರೂ ಅವರು ಪ್ರಧಾನಿಯಾಗಿದ್ದ ಕಾಲದ ಸಂದರ್ಭವನ್ನೊಮ್ಮೆ ಮೆಲುಕು ಹಾಕುವೆ. ಚೀನಾ ಜತೆಗಿನ ಸಂಬಂಧದ ವಿಷಯವಾಗಿ ಆಗ ನೆಹರೂ ಅವರಿಗೂ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೂ ಅಭಿಪ್ರಾಯ ಭೇದಗಳು ಇದ್ದವು. ಆದರೆ, ಈ ಕುರಿತ ಅವರ ಚರ್ಚೆಗಳು ಆಂತರಿಕವಾಗಿ ಪತ್ರ ವಿನಿಮಯದ ಮೂಲಕ ನಡೆಯುತ್ತಿದ್ದವು. ಭಿನ್ನಾಭಿಪ್ರಾಯಗಳನ್ನು ಮುಂದಿಟ್ಟುಕೊಂಡು ಅವರು ಯಾವತ್ತೂ ಮಾಧ್ಯಮದ ಎದುರು ಹೋದವರಲ್ಲ.

ರಾಜ್ಯದಲ್ಲಿ ಹಿಂದೆಯೂ ಮುಖ್ಯಮಂತ್ರಿಯ ಅಧಿಕಾರಕ್ಕೆ ಸಂಬಂಧಿಸಿದಂತೆ ನಡೆದ ಕೆಲವು ಘಟನಾವಳಿಗಳು ಚರ್ಚೆಯನ್ನು ಹುಟ್ಟುಹಾಕಿವೆ. ಎಸ್.ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ಡಿ. ದೇವರಾಜ ಅರಸು, ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ ಎಲ್ಲರ ಕಾಲದಲ್ಲೂ ಗುಂಪುಗಾರಿಕೆ ಇದ್ದುದನ್ನು ಅಲ್ಲಗಳೆಯುವಂತಿಲ್ಲ. ಎಲ್ಲರೂ ಸಂಪುಟ ಸಭೆಯಲ್ಲೇ ವಿಷಯ ಪ್ರಸ್ತಾಪಿಸಿ, ಪರಿಹಾರ ಪಡೆಯಲು ಯತ್ನಿಸುತ್ತಿದ್ದರು. ಕೆಲವರ ಭಿನ್ನಾಭಿಪ್ರಾಯ ಅತಿರೇಕಕ್ಕೆ ಹೋಗಿದ್ದೂ ಉಂಟು. ಕೆಲವೊಮ್ಮೆ ಪಕ್ಷದ ವರಿಷ್ಠರ ಮಧ್ಯಪ್ರವೇಶ, ಹೊಂದಾಣಿಕೆಯಿಂದ ಒಟ್ಟಾಗಿ ಸಾಗಿದ ಘಟನೆಗಳೂ ನಡೆದಿವೆ. ಸಚಿವರೇ ರಾಜೀನಾಮೆ ನೀಡಿ ಹೊರ ನಡೆದದ್ದು, ಮುಖ್ಯಮಂತ್ರಿಯವರೇ ಸಚಿವರನ್ನು ವಜಾಗೊಳಿಸಿದ್ದೂ ಎಲ್ಲವನ್ನೂ ಕಂಡದ್ದಾಗಿದೆ (ಸಿದ್ದರಾಮಯ್ಯ ಅವರನ್ನೇ ಸಂಪುಟದಿಂದ ವಜಾಗೊಳಿಸಲಾಗಿತ್ತು). ಆದರೆ, ಈಗಿನ ದಾರಿಯಲ್ಲಿ (ಸಂಪುಟದಲ್ಲಿ ಇದ್ದುಕೊಂಡು ರಾಜ್ಯಪಾಲರ ಬಳಿ ಮುಖ್ಯಮಂತ್ರಿ ವಿರುದ್ಧ ದೂರು ನೀಡಿಕೆ) ಸಾಗಿದ ಬೇರೊಂದು ಉದಾಹರಣೆಯಿಲ್ಲ.

ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಯಾರಿಗೆ ಬಹುಮತ ಇರುತ್ತದೆಯೋ ಅವರು ಆಡಳಿತ ವ್ಯವಸ್ಥೆಯ ಚುಕ್ಕಾಣಿ ಹಿಡಿಯುತ್ತಾರೆ. ಅವರಿಗೆ ಜವಾಬ್ದಾರಿ ಇರುತ್ತದೆಯೇ ಹೊರತು ಯಾವ ಅಧಿಕಾರ ಇರುವುದಿಲ್ಲ. ಸಚಿವರೆಲ್ಲರೂ ಸಮಾನರೇ, ಮುಖ್ಯಮಂತ್ರಿ ಆದವರು ಸಚಿವರಲ್ಲಿ ಮೊದಲಿಗರು. ಹಾಗೆಂದು ಎಲ್ಲರೂ ಮುಖ್ಯಮಂತ್ರಿಗಳಾಗಲು ಸಾಧ್ಯವಿಲ್ಲ. ಅವರು ಸಚಿವ ಸಂಪುಟದ ಅಧ್ಯಕ್ಷತೆ ವಹಿಸಬೇಕಾಗುತ್ತದೆ. ಸಂಪುಟವನ್ನು ಮುನ್ನಡೆಸಿಕೊಂಡು ಹೋಗಬೇಕಾಗುತ್ತದೆ.

ಸಂಪುಟ ವ್ಯವಸ್ಥೆಯಲ್ಲಿ ಬಹುಮತ-ಅಲ್ಪಮತದ ವಿಚಾರಕ್ಕೆ ಅವಕಾಶವಿಲ್ಲ. ಅಭಿಪ್ರಾಯ ಭೇದವನ್ನು ಸಭೆಯಲ್ಲಿ ಹೇಳುವುದಕ್ಕಷ್ಟೇ ಅವಕಾಶವಿದೆ. ತಮ್ಮ ಅಭಿಪ್ರಾಯಕ್ಕೆ ಬಲ ದೊರಕದೇ ಇದ್ದಾಗ ಕೆಲವರು ಹೊರಗೆ ಬರುತ್ತಾರೆ ಅಷ್ಟೆ. ಈಗ ಸಚಿವ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ಬರೆದಿರುವ ಪತ್ರದ ವಿಷಯ ಆಡಳಿತದಲ್ಲಿನ ವಿಚಾರಕ್ಕೆ ಸಂಬಂಧಿಸಿದ ಅಭಿಪ್ರಾಯ ಭೇದವೇ ಹೊರತು ಅಧಿಕಾರಕ್ಕೆ ಸಂಬಂಧಿಸಿದ್ದಲ್ಲ. ಸಾಮಾನ್ಯವಾಗಿ ಮುಖ್ಯಮಂತ್ರಿಗಳಾದವರು ದೊಡ್ಡಣ್ಣನಂತೆ ಇರಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಬೇಕು. ಸಮಸ್ಯೆಗಳಿದ್ದರೆ ಸಚಿವರನ್ನು ಕರೆದು ಮಾತನಾಡಬೇಕು. ಸಚಿವರಿಗೂ ಆಕ್ಷೇಪಣೆಗಳು ಇದ್ದಲ್ಲಿ, 'ಏಕೆ ಹೀಗೆ ಮಾಡಿದಿರಿ' ಎಂದು ಕೇಳುವ ಅವಕಾಶವೂ ಇದೆ. ವಿರೋಧ ಪಕ್ಷಕ್ಕೆ ಸೇರಿದವನಾಗಿ ಇಂತಹ ಒಂದು ಬೆಳವಣಿಗೆಯನ್ನು ರಾಜಕೀಯವಾಗಿಯೇ ವಿಮರ್ಶಿಸಿ, ಅಭಿಪ್ರಾಯವೊಂದನ್ನು ನೀಡಲು ಬಯಸುವುದಿಲ್ಲ.

ಕೆಲವು ಪದಗಳನ್ನು ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ಬಳಸುತ್ತಾ ಬಂದಿದ್ದೇವೆ. ಅದು, ಸರಿಯೋ ತಪ್ಪೋ ಎಂಬುದರ ಕುರಿತು ನಾವು ಯೋಚಿಸಿಯೇ ಇಲ್ಲ. ಪರಮಾಧಿಕಾರ ಎನ್ನುವುದು ಸಹ ಹಾಗೆ ಬಳಕೆಯಲ್ಲಿರುವ ತಪ್ಪು ಪದ. ಜನಪ್ರಾತಿನಿಧ್ಯದಿಂದ ಕೂಡಿದ ಸರ್ಕಾರ ಎನ್ನುವುದು ನೀತಿ ನಿರೂಪಣೆ ಮಾಡುವಂತಹದ್ದು. ಜನಪ್ರಾತಿನಿಧ್ಯದ ವಿಚಾರಕ್ಕೆ ಇದೇ ಸುಪ್ರೀಂ ಆಗಿರುತ್ತದೆ. ಗ್ರಾಮ ಪಂಚಾಯಿತಿ ಸದಸ್ಯನಿಂದ ಶಾಸಕ, ಸಂಸದನವರೆಗೆ ಎಲ್ಲರೂ ಸಾರ್ವಜನಿಕ ಸೇವಕರು. ಹಾಗೆಯೇ ಸಚಿವರು, ಮುಖ್ಯಮಂತ್ರಿಯಾದಿಯಾಗಿ ಪ್ರಧಾನಮಂತ್ರಿಯವರೆಗೆ ಯಾರಿಗೂ ಅಧಿಕಾರವಿಲ್ಲ. ಇರುವುದು ಜವಾಬ್ದಾರಿ.

ಉದಾಹರಣೆಗೆ, ನಾನೀಗ ಶಾಸಕ ಮಾತ್ರ. ನನಗೆ ಅಧಿಕಾರ ಎಂದು ಏನೂ ಇರುವುದಿಲ್ಲ. ಜನಪ್ರತಿನಿಧಿ, ಶಾಸನಸಭೆಗೆ ಹಾಜರಾಗಬೇಕು. ಕಲಾಪಗಳು ಇದ್ದಾಗ ಭಾಗವಹಿಸಬೇಕು. ಜನರ ಸಮಸ್ಯೆಗಳನ್ನು ನಿಯಮಾವಳಿಗಳ ಪ್ರಕಾರ ಪ್ರಸ್ತಾಪಿಸಬೇಕು. ಕಷ್ಟ, ಸುಖದ ಅಹವಾಲು ಹೊತ್ತು ಬರುವ ಜನರ ಮಾತುಗಳನ್ನು ಆಲಿಸಬೇಕು. ಶಾಸಕರ ಜವಾಬ್ದಾರಿ ಅನಂತ. ಚುನಾಯಿತ ಪ್ರತಿನಿಧಿಗಳ ಅಧಿಕಾರ ವ್ಯಾಪ್ತಿಯನ್ನು ನಿಗದಿಪಡಿಸುವ ಸಂಬಂಧ ಸಂವಿಧಾನ ರಚನಾ ಸಭೆಯಲ್ಲಿ ಹತ್ತು ದಿನಗಳ ಕಾಲ ಚರ್ಚೆ ನಡೆದಿತ್ತು. ಆ ರೀತಿ ವ್ಯಾಖ್ಯಾನ ಮಾಡುವುದೇ ದೊಡ್ಡ ಅಪರಾಧವಾಗುತ್ತದೆ ಎಂಬ ತೀರ್ಮಾನಕ್ಕೆ ಬರಲಾಗಿತ್ತು. ಚುನಾಯಿತ ಪ್ರತಿನಿಧಿಗಳ ವಿಚಾರದಲ್ಲಿ 'ಪ್ರತಿಷ್ಠೆ' ಮತ್ತು 'ಹಕ್ಕು' ಎಂಬ ಪದಗಳು ಯಾವಾಗಲೂ ಪ್ರಸ್ತಾಪವಾಗುತ್ತಲೇ ಇರುತ್ತವೆ. ಆದರೆ, ವಾಸ್ತವಿಕವಾಗಿ ಜನಪ್ರತಿನಿಧಿಗಳಿಗೆ ಆ ಎರಡೂ ಸೌಲಭ್ಯಗಳಿಲ್ಲ. ಕರ್ತವ್ಯನಿರ್ವಹಣೆಗೆ ಸಂಬಂಧಿಸಿದಂತೆ ಸೀಮಿತವಾಗಿ 'ಹಕ್ಕುಚ್ಯುತಿ'ಯ ಬಳಕೆಗೆ ಅವಕಾಶವಿದೆ.



ಯಡಿಯೂರಪ್ಪ

ಇನ್ನು ಈಶ್ವರಪ್ಪ ಅವರ ಪ್ರಕರಣದ ಚರ್ಚೆಗೆ ಬರುವುದಾದರೆ ಇಲ್ಲಿ ವಿಷಯ ನಾಮಕಾವಾಸ್ತೆಗೆ ಇದೆ. ಇರುವುದೆಲ್ಲ ತೆರೆಮರೆಯ ಯುದ್ಧ ಅಷ್ಟೆ. ಸಾರ್ವಜನಿಕ ತೆರಿಗೆಯ ಹಣ ಬಹಳ ಕಡಿಮೆ ಇದೆ. ಅದನ್ನು ರಾಜಕೀಯ ಅನುಕೂಲಗಳಿಗೆ ಬಳಸಿದಾಗ ತಪ್ಪಾಗುತ್ತದೆ. ಕೋವಿಡ್‌ನಂತಹ ಸಂಕಷ್ಟ ಜನರನ್ನು ಬಾಧಿಸುತ್ತಿರುವಾಗ ಈ ರೀತಿ ಹಣ ವ್ಯಯಿಸುವುದು ಸರಿಯೇ ಎಂಬುದೇ ಮುಖ್ಯ ಪ್ರಶ್ನೆಯಾಗಿ ಚರ್ಚೆಗೆ ಬರಬೇಕಿತ್ತು. ಮುಖ್ಯಮಂತ್ರಿಯವರ ಬಳಿ ಹಣಕಾಸಿನ ಇಲಾಖೆಯೂ ಇದೆ. ಸಣ್ಣಪುಟ್ಟ ಮೊತ್ತವಾದರೆ ಪರವಾಗಿಲ್ಲ. ದೊಡ್ಡ ಪ್ರಮಾಣದ ಅನುದಾನವನ್ನು ಸಂಬಂಧಿಸಿದ ಸಚಿವರ ಗಮನಕ್ಕೆ ತಾರದೆ ನೀಡುವುದು ಸರಿಯಲ್ಲ. ಮುಖ್ಯಮಂತ್ರಿ ಪ್ರಾಥಮಿಕ ಹಂತದಲ್ಲಿ ಮಂತ್ರಿಯನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕಾಗಿತ್ತು ಎಂಬುದು ಸಾಂಪ್ರದಾಯಿಕವಾದ ಬದ್ಧತೆ. ಅದನ್ನು ಮೀರುವುದು ಕಷ್ಟ. ಅದೇ ಉಸಿರಿನಲ್ಲಿ ಮತ್ತೊಂದು ಮಾತನ್ನು ಹೇಳಲು ಬಯಸುತ್ತೇನೆ. ಸಚಿವರಿಗೂ ತಮ್ಮ ಆಕ್ಷೇಪವನ್ನು ನೇರವಾಗಿ ದಾಖಲಿಸಲು ಅವಕಾಶ ಇತ್ತು. ಇಬ್ಬರೂ ಪ್ರಭಾವಶಾಲಿಗಳೇ. ಒಬ್ಬರು ಹಾಲಿ ಮುಖ್ಯಮಂತ್ರಿಯಾದರೆ, ಮತ್ತೊಬ್ಬರು ಹಿಂದೆ ಉಪ ಮುಖ್ಯಮಂತ್ರಿಯಾಗಿದ್ದು, ಈಗ ಪ್ರಮುಖ ಖಾತೆಯನ್ನು ಹೊಂದಿರುವವರು. ಇವರಿಬ್ಬರ ನಡುವಿನ ಘಟನೆಯಲ್ಲಿ ನಾವು ಬೆರಳು ತೂರಿಸಲು ಆಗದು. ಆದರೆ, ವ್ಯವಸ್ಥೆ ಏನು ಆಗುತ್ತದೆ, ಜನರಿಗೆ ಏನು ಆಗುತ್ತದೆ ಎಂಬುದನ್ನು ನಾವು ಯೋಚಿಸಬೇಕು.

ಈಶ್ವರಪ್ಪ

ಈ ಪ್ರಕರಣವನ್ನು ಮುಂದಿಟ್ಟುಕೊಂಡು ವಿಶ್ಲೇಷಿಸಿದರೆ, ಶಾಸಕರು ಅನುದಾನ ಕೇಳಿಕೊಂಡು ಈಶ್ವರಪ್ಪನವರ ಬಳಿಯೂ ಹೋಗಬಹುದು. ಆಗ, ತಮ್ಮ ಇಲಾಖೆಗೆ ಎಷ್ಟು ಅನುದಾನ ಹಂಚಿಕೆಯಾಗಿದೆ? ಎಷ್ಟು ಉಳಿದಿದೆ ಎಂಬುದರ ಮಾಹಿತಿಯೇ ಅವರಿಗೆ ಇಲ್ಲದಿದ್ದರೆ ಏನು ಉತ್ತರ ನೀಡಲು ಸಾಧ್ಯ? ತಮ್ಮ ಸಂಪುಟದ ಸಹೋದ್ಯೋಗಿಯೊಬ್ಬರನ್ನು ಮುಜುಗರಕ್ಕೆ ಸಿಲುಕಿಸುವುದು ಯಾವುದೇ ನಾಯಕತ್ವಕ್ಕೆ ಸಾಧುವಲ್ಲ. ಇದು ನನ್ನ ಸ್ಪಷ್ಟ ಅಭಿಪ್ರಾಯ. ಈಶ್ವರಪ್ಪ ಕೂಡ ಸ್ವಲ್ಪ ತಾಳ್ಮೆ ಇರಿಸಿಕೊಳ್ಳಬೇಕಾಗಿತ್ತು ಅನಿಸುತ್ತದೆ. ಅವರು, 'ಸರ್ಕಾರದ ವ್ಯವಹಾರ ನಿಯಮ'ಗಳನ್ನು ಉಲ್ಲೇಖಿಸಿ ದೂರು ನೀಡಿದ್ದಾರೆ. ಅದು ಸರಿಯೋ ತಪ್ಪೋ ಎಂಬುದರ ಕುರಿತು ಅನುಮಾನಗಳಿವೆ.

ಮುಖ್ಯಮಂತ್ರಿಯವರ ಶಿಫಾರಸಿನ ಮೇಲೆ ಮಂತ್ರಿಗಳ ನೇಮಕ ಆಗುತ್ತದೆ. ಆದರೆ, ಅವರು ಮುಖ್ಯಮಂತ್ರಿಯ ನೌಕರರಲ್ಲ, ಸಹೋದ್ಯೋಗಿಗಳು. ಖಾತೆ ಹಂಚಿಕೆಯನ್ನು ನೇರವಾಗಿ ಮುಖ್ಯಮಂತ್ರಿ ಮಾಡಲು ಬರುವುದಿಲ್ಲ. ಮುಖ್ಯಮಂತ್ರಿಯ ಸೂಚನೆಯನ್ನು ಅಧಿಸೂಚನೆಯಾಗಿ ರಾಜ್ಯಪತ್ರದಲ್ಲಿ ಪ್ರಕಟಿಸುವ ಅಧಿಕಾರ ಇರುವುದು ರಾಜ್ಯಪಾಲರಿಗೆ. ಇಲ್ಲಿಯೇ ಒಂದು ಸಣ್ಣ ಅವಕಾಶವಿದೆ. ಈ ದೃಷ್ಟಿಯಿಂದ ನೋಡಿದರೆ ಈಶ್ವರಪ್ಪ ಅವರು ರಾಜ್ಯಪಾಲರ ಬಳಿ ಅಹವಾಲು ಕೊಂಡೊಯ್ದಿರುವುದು ಅಸಾಂವಿಧಾನಿಕ ನಡೆ ಅಲ್ಲ ಎನ್ನಬಹುದು. ಆದರೆ, ಆ ಪತ್ರ ಹೊರಗೆ ಬರಬಾರದಿತ್ತು. ಎಲ್ಲಿಂದ ಬಂತೋ? ಯಾರು ಹೊರಗೆ ತಂದರೋ? ಅನೇಕ ಸಂದರ್ಭಗಳಲ್ಲಿ ಸಂಪುಟ ಸಭೆಯಲ್ಲಿ ಮಾತನಾಡಿದ್ದೆಲ್ಲ ಹೊರಗಡೆ ಬಂದಿರುತ್ತದೆ. ಇದು ಮೊದಲಿನಿಂದಲೂ ರಾಜಕೀಯ ಮೇಲಾಟ ಸ್ಥಾಪಿಸುವುದಕ್ಕಾಗಿ ನಡೆಯುತ್ತಿರುವ ಪ್ರಯತ್ನಗಳ ಭಾಗ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಅದು ಒಳ್ಳೆಯದಲ್ಲ.

ರಾಜ್ಯದಲ್ಲಿ ಸಂಪನ್ಮೂಲ ಸಂಗ್ರಹಣೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎಂಬುದನ್ನು ಮುಖ್ಯಮಂತ್ರಿಯವರು ವಿಧಾನಮಂಡಲದಲ್ಲೇ ಹೇಳಿದ್ದಾರೆ. ಹೆಚ್ಚು ಸಾಲ ಪಡೆಯುವುದಕ್ಕಾಗಿ ವಿತ್ತೀಯ ಹೊಣೆಗಾರಿಕೆ ಕಾಯ್ದೆಗೆ ತಿದ್ದುಪಡಿಯನ್ನೂ ತರಲಾಗಿದೆ. ಕೇಂದ್ರದಿಂದ ನಮಗೆ ಬರಬೇಕಿದ್ದ ಪಾಲು ಕೂಡ ಕಡಿತವಾಗಿದೆ. ಇಷ್ಟೆಲ್ಲ ನಿರ್ಬಂಧಗಳಿರುವಾಗ ಈ ರೀತಿ ಮಾಡಿದ್ದು ಸರಿಯೇ ಎಂಬ ಪ್ರಶ್ನೆಯೂ ಇದೆ. ಇದನ್ನು ಎರಡು ರೀತಿ ನೋಡಬಹುದು. ರಾಜಕೀಯವಾಗಿ, ರಾಜಕೀಯ ಪಕ್ಷವಾಗಿ ಸಂಕುಚಿತ ಮನೋಭಾವದಿಂದ ಇದನ್ನು ನಾವು ಹೇಗೆ ಬಳಸಿಕೊಳ್ಳಬಹುದು ಎಂಬುದು ಮೊದಲನೆಯದ್ದು. ಎರಡನೆಯದ್ದು, ಒಂದಿಂಚು ಮುಂದಕ್ಕೆ ಹೋಗಿ ನಾವೇನು ಶಾಶ್ವತ ಅಲ್ಲ. ಎಷ್ಟೋ ಜನರ ತ್ಯಾಗ, ಪರಿಶ್ರಮದಿಂದ ಈ ವ್ಯವಸ್ಥೆ ಬಂದಿದೆ. ಲೋಪಗಳಿರುವುದನ್ನು ಅಲ್ಲಗಳೆಯಲಾಗದು. ಆದರೆ, ಶಾಂತಿಯತವಾಗಿ ಪರಿಹಾರ ಮಾಡಿಕೊಳ್ಳುವುದಕ್ಕೂ ಅವಕಾಶವಿದೆ. ಹಿಂಸಾತ್ಮಕ ಘಟನೆಗಳಿಲ್ಲದೇ ರಾಜ್ಯ ಮತ್ತು ಕೇಂದ್ರದಲ್ಲಿ ಸರ್ಕಾರಗಳು ಬದಲಾಗುವಂತಹ ವ್ಯವಸ್ಥೆ ನಮ್ಮದು.

ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ಇರುವುದು ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದ್ದಾಗ ಮಾತ್ರ. ಹಿಂದಿನ ದಿನಗಳಲ್ಲಿ ಶಾಸಕಾಂಗ ಪಕ್ಷದ ಸಭೆಗಳು, ಪಕ್ಷದ ಪ್ರಾದೇಶಿಕ ಸಮಿತಿಗಳ ಸಭೆಗಳು ಇದ್ದಾಗ ಅಧಿಕಾರದಲ್ಲಿದ್ದವರು ದಿನವಿಡೀ ಕುಳಿತು ಎಚ್ಚರಿಕೆಯಿಂದ ಮಾತುಗಳನ್ನು ಕೇಳುತ್ತಿದ್ದರು. ಆಂತರಿಕ ಪ್ರಜಾಪ್ರಭುತ್ವದ ಕಾರಣಕ್ಕಾಗಿಯೇ ಅವರಲ್ಲಿ ಇಂತಹ ಭಯವಿತ್ತು. ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಸತ್ತುಹೋದ ದಿನಗಳಲ್ಲಿ ಹೊರಗೆ ನಿಂತು ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ವೈದಿಕ ಸಂಪ್ರದಾಯದಲ್ಲಿ ಶ್ರಾದ್ಧ ಮಾಡಿದಂತಾಗುತ್ತದೆಯೇ ಹೊರತು ನಿಜವಾದ ಶ್ರದ್ಧಾಂಜಲಿ ಆಗುವುದಿಲ್ಲ.

ಲೇಖಕ: ಶಾಸಕ, ವಿಧಾನಸಭೆಯ ಮಾಜಿ ಸ್ಪೀಕರ್

ನಿರೂಪಣೆ: ವಿ.ಎಸ್. ಸುಬ್ರಹ್ಮಣ್ಯ

ಗಾಂಧಿಯ ಮಾತು ಸದಾ ನೆನಪಿನಲ್ಲಿರಲಿ...

ಬ್ರಿಟಿಷರು ಜಗತ್ತಿನ ಬಹುಪಾಲು ದೇಶಗಳನ್ನು ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡಿದ್ದರು. ಈ ಕಾರಣದಿಂದಾಗಿಯೇ 'ಸೂರ್ಯ ಮುಳುಗದ ಸಾಮ್ರಾಜ್ಯ' ಎಂಬ ಹೆಸರು ಬಂದಿತ್ತು. ವಸಾಹತುಶಾಹಿಗಳಾಗಿದ್ದು ಬಿಡುಗಡೆ ಹೊಂದಿದ ಕಾಮನ್‌ವೆಲ್ತ್ ರಾಷ್ಟ್ರಗಳ ಪೈಕಿ ಅತ್ಯಂತ ಯಶಸ್ವಿಯಾದ ಪ್ರಜಾಪ್ರಭುತ್ವ ವ್ಯವಸ್ಥೆ ಇರುವುದು ಭಾರತದಲ್ಲಿ.

ಭಾರತಕ್ಕೆ ಸ್ವಾತಂತ್ರ್ಯ ಘೋಷಣೆ ಆದಾಗ ವೈಸ್‌ರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರ ನಿವಾಸಕ್ಕೆ ಮಹಾತ್ಮ ಗಾಂಧಿಯವರು ಹೋಗುತ್ತಾರೆ. ಗಾಂಧಿಯವರ ಬಳಿ ಒಂದು ಅದ್ಭುತವಾದ ಗುಣವಿತ್ತು. ರಾಜಕೀಯ ವಿರೋಧಿಗಳ ಜತೆಗೂ ವೈಯಕ್ತಿಕ ಸಂಬಂಧ ಚೆನ್ನಾಗಿತ್ತು. ಈ ಕಾರಣಕ್ಕಾಗಿಯೇ ಅಂದು ವೈಸ್‌ರಾಯ್ ನಿವಾಸಕ್ಕೆ ಹೋಗಿ ಔಪಚಾರಿಕವಾಗಿ ಮಾತನಾಡಿಕೊಂಡು ಹಿಂದಿರುಗುವಾಗ ವೈಸ್‌ರಾಯ್ ಅವರ ಪತ್ರಿಕಾ ಕಾರ್ಯದರ್ಶಿ ಚಾರ್ಲ್ಸ್ ಕ್ಯಾಂಪ್‌ಬೆಲ್ ನಗು ನಗುತ್ತಾ ಗಾಂಧಿಯವರಿಗೆ, 'ನಿಮ್ಮ ಜನರಿಗೆ ಅಕ್ಷರ ಜ್ಞಾನವೇ ಇಲ್ಲ. ವಯಸ್ಕ ಮತದಾನದ ವ್ಯವಸ್ಥೆಯನ್ನು ತರುವುದಾಗಿ ಹೇಳುತ್ತಿದ್ದೀರಿ. ಇಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗುವುದೇ? ಅರಾಜಕತೆ ಸೃಷ್ಟಿಯಾಗುವುದಿಲ್ಲವೇ' ಎಂದು ಪ್ರಶ್ನಿಸುತ್ತಾರೆ.

ಗಾಂಧಿಯವರ ಉತ್ತರ ಬಹಳ ಸರಳವಾಗಿತ್ತು. 'ನಮ್ಮ ದೇಶದ ಜನ ಹಸುಗೂಸುಗಳಂತೆ. ಎಳೆ ಮಕ್ಕಳಂತೆ ಅವರ ಮನಸ್ಸು ಮತ್ತು ಹೃದಯ ಶುದ್ಧವಾಗಿದೆ. ನಿಜ, ನೀವು ಹೇಳಿದಂತೆ ಒಮ್ಮೆ ಅವರನ್ನು ಮೋಸಗೊಳಿಸಬಹುದು. ಮತ್ತೊಮ್ಮೆ, ಮತ್ತೊಮ್ಮೆ ಆ ರೀತಿ ಮಾಡಲು ಸಾಧ್ಯವಿಲ್ಲ. ಒಂದು ಕಹಿ ಗುಳಿಗೆಯನ್ನು ಸಿಹಿಯ ಲೇಪನ ಮಾಡಿಕೊಟ್ಟರೆ ಮಗು ಸಿಹಿಯ ಆಸೆಗೆ ತೆಗೆದುಕೊಳ್ಳುತ್ತದೆ. ಆದರೆ, ಕಹಿ ಎಂದು ಗೊತ್ತಾಗುತ್ತಿದ್ದಂತೆ ಉಗುಳುತ್ತದೆ. ನಂತರ ನೀವು ಸಿಹಿಯಾದ ಗುಳಿಗೆ ಕೊಡಲು ಹೋದರೂ ಮಗು ಪರೀಕ್ಷಿಸಿಯೇ ತೆಗೆದುಕೊಳ್ಳುತ್ತದೆ' ಎನ್ನುತ್ತಾರೆ.

ಭಾರತದ ಜಮಸಮೂಹದ ಮಾನಸಿಕತೆ ಕುರಿತ ಗಾಂಧಿಯವರ ಅಧ್ಯಯನ ಎಷ್ಟು ನಿಖರವಾಗಿತ್ತು ಎಂಬುದನ್ನು 1972ರ ಚುನಾವಣೆ ಸಾಬೀತುಪಡಿಸುತ್ತದೆ. ಇಂದಿರಾ ಗಾಂಧಿಯವರು ಸಂವಿಧಾನದಲ್ಲಿನ ಕಲಮುಗಳನ್ನೇ ಬಳಸಿಕೊಂಡು ತುರ್ತು ಪರಿಸ್ಥಿತಿ ಘೋಷಣೆ ಮಾಡುತ್ತಾರೆ. ದೇಶದಲ್ಲಿ ಸಂವಿಧಾನದ ವ್ಯಾಪ್ತಿಯನ್ನು ಮೀರಿ ಕೆಲವು ಅಹಿತಕರ ಘಟನೆಗಳು ನಡೆಯುತ್ತವೆ. ತುರ್ತು ಪರಿಸ್ಥಿತಿ ವಿರೋಧಿ ಚಳವಳಿಯ ನಾಯಕತ್ವ ವಹಿಸಿದ್ದ ಜಯಪ್ರಕಾಶ್ ನಾರಾಯಣ್ ಅವರಂತಹವರು ಎಲ್ಲಿಯೂ ಇಂದಿರಾ ಗಾಂಧಿಯವರ ಕುರಿತು ವೈಯಕ್ತಿಕವಾಗಿ ಹೇಳುವುದಿಲ್ಲ. 'ಯಾವುದೇ ಸಂವಿಧಾನೇತರ ಆಜ್ಞೆಗಳನ್ನು ಗೌರವಿಸಬೇಡಿ' ಎಂದು ಸೇನೆ ಮತ್ತು ನಾಗರಿಕ ಸೇವೆಗಳಲ್ಲಿರುವ ಅಧಿಕಾರಿಗಳಿಗೆ ಆಗ್ರಹಿಸುತ್ತಾರೆ. 'ಯಾರು ಜವಾಬ್ದಾರಿ ಸ್ಥಾನದಲ್ಲಿ ಇಲ್ಲವೋ ಅವರ ಆದೇಶಗಳನ್ನು ಹೊಣೆಗಾರಿಕೆ ಇರುವಂತಹವರು ಸ್ವೀಕರಿಸಬಾರದು' ಎಂದು ಸಂಜಯ್ ಗಾಂಧಿ ಅವರನ್ನುದ್ದೇಶಿಸಿ ಗೌರವಯುತವಾಗಿ ಹೇಳುತ್ತಾರೆ.

1972ರಲ್ಲಿ ದೇಶದಲ್ಲಿ ಸಾಕ್ಷರತೆ ಇಷ್ಟು ಪ್ರಮಾಣದಲ್ಲಿ ಇರಲಿಲ್ಲ. ಟೆಲಿವಿಷನ್, ಮೊಬೈಲ್, ಫೇಸ್‌ಬುಕ್ ಸೇರಿದಂತೆ ಯಾವ ಸಾಮಾಜಿಕ ಮಾಧ್ಯಮವೂ ಇರಲಿಲ್ಲ. ಇಂದಿರಾ ಗಾಂಧಿಯವರನ್ನೇ ಲೋಕಸಭೆಗೆ ಕೂಡ ಆಯ್ಕೆಯಾಗದಂತೆ ಮಾಡುತ್ತಾರೆ ಜನ. 85 ಲೋಕಸಭಾ ಕ್ಷೇತ್ರಗಳಿರುವ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಒಂದು ಸ್ಥಾನವೂ ದೊರಕುವುದಿಲ್ಲ. ಗಾಂಧಿ ಸರಿ ಅನಿಸುವುದಿಲ್ಲವೇ ನಮಗೆ?

ನಮ್ಮ ತಂತ್ರ, ಕುತಂತ್ರಗಳು ಅಥವಾ ರಾಜಕೀಯ ಮೇಲಾಟಗಳನ್ನು ಜನರು ಯಾವಾಗಲೂ ಸೂಕ್ಷ್ಮವಾಗಿ ಗಮನಿಸುತ್ತಾ ಇರುತ್ತಾರೆ. ಯಾವಾಗಲೂ ಹಣ ಅಥವಾ ಇತರ ಆಮಿಷಕ್ಕೆ ಒಳಗಾಗಿ ಜನರು ಮತ ಚಲಾಯಿಸುತ್ತಾರೆ ಎಂಬ ಮಾತನ್ನು ಸಾರ್ವತ್ರಿಕವಾಗಿ ಒಪ್ಪಲಾಗದು. ಅದು ಭಾಗಶಃ ನಿಜವಷ್ಟೆ. ಸಾರ್ವತ್ರಿಕ ಚುನಾವಣೆಗಳಲ್ಲಿ ಅನೇಕ ಸಂದರ್ಭಗಳಲ್ಲಿ ಇಡೀ ವಿಶ್ವವೇ ಮೆಚ್ಚುವಂತೆ ಜನರು ತಮ್ಮ ಪ್ರಬುದ್ಧತೆಯನ್ನು ಮೆರೆದಿದ್ದಾರೆ ಎಂಬುದನ್ನು ರಾಜಕೀಯದಲ್ಲಿ ಇರುವವರು ನೆನಪಿನಲ್ಲಿ ಇರಿಸಿಕೊಳ್ಳಬೇಕು.

ಪ್ರಜಾವಾಣಿ ಚಿತ್ರ: ಅನೂಪ್ ರಾಘು .ಟಿ.

'ಉಚಿತ ಕೊಡುಗೆ: ಬಡವರ ಸೋಮಾರಿ ಮಾಡಲ್ಲ'

ಮುಂಬೈ (ಪಿಟಿಐ): ಬಡವರನ್ನು ಬಡತನದಿಂದ ಮೇಲೆತ್ತುವ ಯೋಜನೆಗಳಲ್ಲಿ ಸರ್ಕಾರದ ಪಾತ್ರ ಸೀಮಿತವಾಗಿರಬೇಕು. ಬಡಜನರಿಗೆ ಉಚಿತ ಕೊಡುಗೆಗಳನ್ನು ನೀಡಿದರೆ ಅವರು ಸೋಮಾರಿಗಳಾಗುತ್ತಾರೆ ಎಂಬ ವಾದವು ಸರಿಯಲ್ಲ. ಇಂತಹ ವಾದಕ್ಕೆ ಯಾವುದೇ ಆಧಾರ ಇಲ್ಲ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಹೇಳಿದ್ದಾರೆ.

ಕಳೆದ ದಶಕದಲ್ಲಿ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ವೈವಿಧ್ಯಮಯ ಅರ್ಥ ವ್ಯವಸ್ಥೆಗಳಲ್ಲಿ ತಾವು ಕೈಗೊಂಡ ಅಧ್ಯಯನಗಳಲ್ಲಿ ಕೊಡುಗೆಯಿಂದ ಜನರು ಸೋಮಾರಿಗಳಾಗುತ್ತಾರೆ ಎಂಬ ವಾದಕ್ಕೆ ಪೂರಕವಾದ ಅಂಶಗಳು ಕಂಡು ಬಂದಿಲ್ಲ. ಬದಲಿಗೆ, ಇಂತಹ ಕೊಡುಗೆಗಳನ್ನು ಪಡೆದುಕೊಂಡವರ ಉತ್ಪಾದಕತೆ ಹೆಚ್ಚಿದೆ ಮತ್ತು ಅವರು ಹೆಚ್ಚು ಕ್ರಿಯಾಶೀಲರಾಗಿದ್ದಾರೆ ಎಂದು ಬ್ಯಾನರ್ಜಿ ವಿವರಿಸಿದ್ದಾರೆ.

ಅಭಿಜಿತ್

ಉಚಿತವಾಗಿ ಏನನ್ನಾದರೂ ಕೊಡುವುದರಿಂದ ಜನರು ಸೋಮಾರಿಗಳಾಗುತ್ತಾರೆ ಎಂಬುದು ಆಯಾ ಕಾಲದ ಸರ್ಕಾರಗಳ ಪ್ರತಿಪಾದನೆ. ಬಡವರಿಗೆ ಆದಷ್ಟು ಕಡಿಮೆ ಕೊಡುವುದಕ್ಕಾಗಿ ಈ ವಾದವನ್ನು ಮುಂದಿರಿಸಲಾಗಿದೆ. ಭಾರತ ಮಾತ್ರವಲ್ಲ ಜಗತ್ತಿನ ಎಲ್ಲಿಯೂ ಇದಕ್ಕೆ ಪುರಾವೆ ಇಲ್ಲ. ಬದಲಿಗೆ ಉಚಿತ ಕೊಡುಗೆ ಯೋಜನೆಗಳ ಫಲಾನುಭವಿಗಳ ಬದುಕು ಉತ್ತಮಗೊಂಡಿದೆ ಎಂಬುದಕ್ಕೆ ಪುರಾವೆ ಇದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಜಾಗತೀಕರಣದ ಅನುಕೂಲ, ಅಪಾಯ

ಜಾಗತೀಕರಣದಿಂದ ಭಾರತಕ್ಕೆ ಅನುಕೂಲಗಳಾಗಿವೆ. ಆದರೆ, ಇದರ ಜತೆಗೇ ಇರುವ ಅಪಾಯಗಳನ್ನು ನಿಭಾಯಿಸುವ ವ್ಯವಸ್ಥೆಯನ್ನು ದೇಶವು ರೂಪಿಸಿಕೊಳ್ಳಬೇಕು ಎಂದು ಬ್ಯಾನರ್ಜಿ ಅಭಿಪ್ರಾಯಪಟ್ಟಿದ್ದಾರೆ. 1990ರ ದಶಕದ ಆರಂಭದಿಂದಲೇ ಭಾರತದ ರಫ್ತಿನಲ್ಲಿ ಏರಿಕೆಯಾಗಿದೆ. ಇದು ದೇಶಕ್ಕೆ ದೊರೆತ ಅನುಕೂಲ. ಜಾಗತೀಕರಣದಿಂದಾಗಿ ಹೆಚ್ಚು ಸಂಪತ್ತು ಸಂಗ್ರಹವಾಗುತ್ತದೆ. ಈ ಸಂಪತ್ತು ಬಳಸಿಕೊಂಡು ಜಾಗತೀಕರಣದ ಅಪಾಯಗಳನ್ನು ನಿಭಾಯಿಸಬಹುದು ಎಂದು ಅವರು ವಿವರಿಸಿದ್ದಾರೆ.

ಬಂಧನ್ ಬ್ಯಾಂಕ್‌ನ 20ನೇ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಡವರಿಗಾಗಿ ರೂಪಿಸುವ ಯೋಜನೆಯಿಂದ ಅವರ ಆದಾಯ ಶೇ 25ರಷ್ಟು ಹೆಚ್ಚಳವಾಗಿದೆ. ಅವರು ವಸ್ತುಗಳನ್ನು ಬಳಸುವ ಪ್ರಮಾಣವು ಶೇ 18ರಷ್ಟು ಏರಿಕೆಯಾಗಿದೆ ಎಂಬುದು ಬಂಧನ್ ಬ್ಯಾಂಕ್ ಒಂದು ದಶಕದಲ್ಲಿ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಯಿಂದ ತಿಳಿದು ಬಂದಿದೆ ಎಂಬುದನ್ನು ಅವರು ಉಲ್ಲೇಖಿಸಿದರು. ಬದುಕು ಉತ್ತಮಗೊಳ್ಳುತ್ತಿದ್ದಂತೆಯೇ ಜನರು ಹೆಚ್ಚು ಕ್ರಿಯಾಶೀಲರಾಗುತ್ತಾರೆ. ಪರಿಣಾಮವಾಗಿ ಅವರು ಹೆಚ್ಚು ಸಂಪತ್ತು ಸೃಷ್ಟಿಸುತ್ತಾರೆ. ಜೀವನ ಮಟ್ಟ ಉತ್ತಮಗೊಳ್ಳುತ್ತದೆ. ಮಕ್ಕಳನ್ನು ಒಳ್ಳೆಯ ಶಾಲೆಗೆ ಕಳುಹಿಸುತ್ತಾರೆ ಎಂದು ಅವರು ವಿಶ್ಲೇಷಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ರೈತ ಮುಖಂಡ ರಾಕೇಶ್ ಟಿಕಾಯತ್ ಅವರ ಮುಖಕ್ಕೆ ಮಸಿ ಬಳಿಯಲಾಗಿದೆ. ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಜಸ್ಥಾನದಲ್ಲಿ ಭಾರತ್ ಬಂದ್ ಮಾಡುವಂತೆ ಟಿಕಾಯತ್ ಕರೆ ನೀಡಿದ್ದಾರೆ ಎಂಬ ಕಾರಣಕ್ಕೆ ಅವರ ಮುಖಕ್ಕೆ ಮಸಿ ಹಚ್ಚಲಾಗಿದೆ. ಟಿಕಾಯತ್ ಬೆಂಬಲಿಗರನ್ನೂ ರಾಜಸ್ಥಾನದ ಜನ ತರಾಟೆಗೆ ತೆಗೆದುಕೊಂಡಿದ್ದಾರೆ. ಮಸಿ ಬಳಿದ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಈ ಚಿತ್ರವನ್ನು ರಿವರ್ಸ್ ಇಮೇಜ್ ತಂತ್ರಜ್ಞಾನದ ಮೂಲಕ ಪರಿಶೀಲನೆ ನಡೆಸಿದಾಗ ಮಸಿ ಬಳಿದಿರುವುದು ಸುಳ್ಳು ಎಂಬುದು ದೃಢಪಟ್ಟಿದೆ. 2021ರ ಜನವರಿ 28ರಂದು ಟಿಕಾಯತ್ ಅವರು ಎಎನ್‌ಐ ಸುದ್ದಿಸಂಸ್ಥೆಯ ಪ್ರತಿನಿಧಿ ಜೊತೆ ಮಾತನಾಡುತ್ತಿರುವ ಚಿತ್ರ ಇದಾಗಿದ್ದು, ಮೂಲ ಚಿತ್ರದಲ್ಲಿ ಮಸಿ ಬಳಿದಿಲ್ಲ. ಚಿತ್ರವನ್ನು ತಿರುಚಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೆಬ್‌ಸೈಟ್ ತಿಳಿಸಿದೆ. 2021ರ ಏಪ್ರಿಲ್ 2ರಂದು ರಾಜಸ್ಥಾನದ ಅಲ್ವರ್‌ನಲ್ಲಿ ಟಿಕಾಯತ್ ತಂಡದ ಮೇಲೆ ದಾಳಿ ಆಗಿದ್ದರೂ, ಮಸಿ ಬಳಿದ ಪ್ರಸಂಗ ನಡೆದಿರಲಿಲ್ಲ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಮಾತ್ಯರ ರಹಸ್ಯಗಳು

ಸಂತೋಷಗೊಂಡ ನಾಲ್ವರು ಅಮಾತ್ಯರು ಅರಮನೆಯ ತೋಟಕ್ಕೆ ಹೊರಟರು. ಅವರ ಮುಖಭಾವವನ್ನು ಗಮನಿಸಿದ ಮಹೋಷಧಕುಮಾರ ಅವರು ಯಾವುದೋ ಅಪಾಯಕಾರಿ ಯೋಜನೆ ಮಾಡಲಿದ್ದಾರೆಂದು ತಿಳಿದು ಅವರಿಗೆ ತಿಳಿಯದಂತೆ ಅವರ ಹಿಂದೆಯೇ ಹೋಗಿ ಅವರು ಕುಳಿತ ಜಾಗದ ಹತ್ತಿರವೇ ಅಡಗಿ ಕುಳಿತು ಅವರ ಮಾತುಗಳನ್ನು ಕೇಳಿಸಿಕೊಂಡ. ಸೆನೆಕ ಹೇಳಿದ, 'ನಿಮಗೆ ಇಂಥ ಒಬ್ಬ ವೇಶ್ಯೆ ನಗರದಲ್ಲಿದ್ದದ್ದು ತಿಳಿದಿರಬೇಕು. ನಾನು ಆಕೆಯ ಸಂಗ ಮಾಡಿದೆ. ನಂತರ ಆಕೆ ಎಲ್ಲಿ ಬೇರೆಯವರಿಗೆ ಅದನ್ನು ಹೇಳಿಬಿಡುತ್ತಾಳೋ ಎಂದು ಆಕೆಯನ್ನು, ನನ್ನ ಸ್ನೇಹಿತನೊಂದಿಗೆ ಸೇರಿ ಕೊಂದುಬಿಟ್ಟೆ. ಅವಳ ಆಭರಣ, ಬಟ್ಟೆಗಳನ್ನು ಅವನ ಮನೆಯ ಅಟ್ಟದ ಮೇಲೆಯೇ ಇಟ್ಟಿದ್ದೇನೆ. ನನ್ನ ಮಿತ್ರ ಇಂದಿಗೂ ಅದರ ಬಗ್ಗೆ ಬಾಯಿಬಿಟ್ಟಿಲ್ಲ. ಅದಕ್ಕೇ ಮಿತ್ರನಲ್ಲಿ ರಹಸ್ಯ ಹೇಳಬಹುದು ಎಂದಿದ್ದೆ'.

ಪುಕ್ಕುಸ ಹೇಳಿದ, 'ನನ್ನ ತೊಡೆಯಲ್ಲಿ ಕುಷ್ಠರೋಗವಿದೆ. ಅದು ರಾಜನಿಗೆ ತಿಳಿದರೆ ನನ್ನನ್ನು ಹೊರಗೆ ಹಾಕಿಬಿಡುತ್ತಾನೆ. ನನ್ನ ತಮ್ಮನೇ ದಿನಾಲು ಅದಕ್ಕೆ ಔಷಧಿ ಹಾಕುತ್ತಾನೆ. ಇದು ಯಾರಿಗೂ ಗೊತ್ತಿಲ್ಲ. ಅದಕ್ಕಾಗಿಯೇ ತಮ್ಮನಿಗೆ ರಹಸ್ಯವನ್ನು ಹೇಳಬಹುದು ಎಂದು ಹೇಳಿದೆ'. ಕಾವಿಂದನೂ ತನ್ನ ರಹಸ್ಯ ಹೇಳಿದ, 'ಕೃಷ್ಣ ಪಕ್ಷದ ಉಪೋಸಥದ ದಿನ ನರದೇವ ಎಂಬ ಯಕ್ಷ ನನ್ನ ತಲೆಯ ಮೇಲೆ ಬರುತ್ತಾನೆ. ಆಗ ನಾನು ಹುಚ್ಚು ನಾಯಿಯ ತರಹ ಕಿರುಚುತ್ತೇನೆ. ನನ್ನ ಮಗ ಆ ಸಮಯದಲ್ಲಿ ನನ್ನ ಕೈಕಾಲು ಕಟ್ಟಿ ಕೋಣೆಯಲ್ಲಿಡುತ್ತಾನೆ. ನನ್ನ ಕಿರುಚಾಟ ಹೊರಗೆ ಕೇಳದಂತೆ ಜೋರಾಗಿ ಸಂಗೀತ, ನೃತ್ಯ, ಏರ್ಪಡಿಸಿ ನನ್ನ ಮಾನವನ್ನು ಕಾಪಾಡುತ್ತಾನೆ. ಅದಕ್ಕೇ ಮಗನಿಗೆ ರಹಸ್ಯ ಹೇಳಬಹುದು ಎಂದು ತಿಳಿಸಿದೆ'. ದಾವಿಂದ ತನ್ನ ರಹಸ್ಯವನ್ನು ಹೇಳಿದ, 'ಒಂದು ದಿನ ಅರಮನೆಯ ವಜ್ರಾಗಾರಕ್ಕೆ ಹೋದಾಗ ಇಂದ್ರ ಈ ರಾಜನ ಮುತ್ತಾತನಿಗೆ ಕೊಟ್ಟ ಶ್ರೀಯುಳ್ಳ ಮಂಗಲಮಣಿಯನ್ನು ಕದ್ದು ತಂದೆ. ಅದನ್ನು ನನ್ನ ತಾಯಿಗೆ ಕೊಟ್ಟೆ. ಆಕೆ ವಿಶೇಷ ಸಂದರ್ಭಗಳಲ್ಲಿ ನನಗೆ ಕೊಡುತ್ತಾಳೆ. ಅದರಿಂದಾಗಿಯೇ ನನ್ನಲ್ಲಿ ಯಾವ ಜ್ಞಾನವಿಲ್ಲದಿದ್ದರೂ ರಾಜ ನನಗೆ ಮನ್ನಣೆ ಕೊಡುತ್ತಾನೆ. ನನ್ನ ತಾಯಿ ರಹಸ್ಯವನ್ನು ಕಾಪಾಡಿದ್ದರಿಂದ ತಾಯಿಗೆ ಅತ್ಯಂತ ರಹಸ್ಯವನ್ನು ಹೇಳಬಹುದು ಎಂದೆ'. ಈಗ ಎಲ್ಲರ ರಹಸ್ಯವೂ ಕುಮಾರನಿಗೆ ತಿಳಿದುಬಿಟ್ಟಿತು.

ಅಂದು ರಾತ್ರಿ ರಾಜ ಹಾಸಿಗೆಯ ಮೇಲೆ ಕುಳಿತು ಚಿಂತಿಸಿದ. ಕಳೆದ ಏಳು ವರ್ಷಗಳಿಂದ ಕುಮಾರ ನನಗೆ ಯಾವ ಅನ್ಯಾಯವನ್ನು ಮಾಡಿಲ್ಲ. ಮಗನಂತೆಯೇ ಇದ್ದಾನೆ. ನಾನು ಆವೇಗದಲ್ಲಿ ಅವನನ್ನು ಕೊಂದುಬಿಡಿ ಎಂದು ಹೇಳಿ ಸೆನೆಕನಿಗೆ ಖಡ್ಗ ಕೊಟ್ಟು ತಪ್ಪು ಮಾಡಿದೆನೇ ಎಂದು ವಿಚಾರ ಮಾಡಿ ಗಾಬರಿಯಾದ. ಅದನ್ನು ಕಂಡು ರಾಣಿ ಔದುಂಬರಾದೇವಿ ಕಾರಣ ಕೇಳಿದಾಗ ಆತ ಈ ರಹಸ್ಯವನ್ನು ತಿಳಿಸಿದ. ಆಕೆಗೆ ಈ ಮಾತು ಕೇಳಿ ಬಹಳ ಸಂಕಟವಾಯಿತು. ತನ್ನ ಪ್ರೀತಿಯ ತಮ್ಮನಾದ ಮಹೋಷಧಕುಮಾರನಿಗೆ ಬಂದ ಆಪತ್ತನ್ನು ಪರಿಹರಿಸುವುದು ಹೇಗೆ ಎಂದುಕೊಂಡು ರಾಜನಿಗೆ ಹೇಳಿದಳು, 'ಸ್ವಾಮಿ, ನೀವೇ ಆ ಕುಮಾರನನ್ನು ಕರೆದು ಐಶ್ವರ್ಯಕೊಟ್ಟಿರಿ, ಸೇನಾಪತಿಯನ್ನಾಗಿ ಮಾಡಿದಿರಿ. ಅವನ ಬುದ್ಧಿಯಿಂದ, ಶಕ್ತಿಯಿಂದ ರಾಜ್ಯ ಸುಭಿಕ್ಷವಾಗಿದೆ, ಭದ್ರವಾಗಿದೆ. ಈಗ ಆತ ನಿಮಗೆ ಶತ್ರು ಏಕಾದ?. ಆಗಲಿ ನಾಳೆ ಇದಕ್ಕೆ ಏನಾದರೂ ಪರಿಹಾರ ಹುಡುಕೋಣ' ಎಂದು ಅವನನ್ನು ಸಮಾಧಾನಗೊಳಿಸಿದಳು. ಮರುದಿನ ಬೆಳಿಗ್ಗೆ ಏನು ಅನಾಹುತವಾದೀತೋ ಎಂಬ ಚಿಂತೆಯಲ್ಲೇ ರಾಜ ಮಲಗಿದ. ❖

ದಿನ ಭವಿಷ್ಯ

ಸೋಮವಾರ 12 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಅಮಾವಾಸೆ ಗಂ. 1-4 (ಬೆ. 6-41) ಸೋಮವಾರ ನಿತ್ಯ ನಕ್ಷತ್ರ ರೇವತಿ ಗಂ. 10-18 (ಹ 10-23) ವೈಧೃತಿ ನಾಮ ಯೋಗ ಗಂ 18-9 ನಾಗ ಗಂ. 1-4 ವಿಷಾಭಾವಃ ಅಮೃತ ಗಂ. 4-32 ಪುನರಮೃತ ಗಂ. 56-25: ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-12 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 14

ಮೇಷ: ಕೃಷಿ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಸಲಿದ್ದೀರಿ. ಯಂತ್ರೋಪಕರಣಗಳ ಸುಸ್ಥಿತಿಯಿಂದಾಗಿ ಕೆಲಸಗಳು ಸುಗಮ. ಮಹಿಳೆಯರಿಗೆ ಉತ್ತಮ ಪ್ರೋತ್ಸಾಹ ದೊರೆಯಲಿದೆ.

ವೃಷಭ: ಸಮಾಜಮುಖಿಯಾದ ಉತ್ತಮ ಕೆಲಸಗಳನ್ನು ಮಾಡಲಿದ್ದೀರಿ. ಸಂಗಾತಿಯಿಂದ ಸಹಕಾರ ದೊರೆಯುವುದರ ಜೊತೆಗೆ ಸಾಮಾಜಿಕ ಗೌರವಾದರಗಳು ಪ್ರಾಪ್ತವಾಗಲಿವೆ.

ಮಿಥುನ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗುವವು. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ. ಹಣಕಾಸು ವ್ಯವಹಾರದಲ್ಲಿ ಎಚ್ಚರಿಕೆಯಿಂದಿರಬೇಕಾದುದು ಅನಿವಾರ್ಯ.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಸಹೋದರರಿಂದ ಸಹಕಾರ. ಸಂಸಾರದಲ್ಲಿ ಕಿರಿಕಿರಿಯ ಸಾಧ್ಯತೆ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ. ವಸ್ತ್ರಾಭರಣ ಖರೀದಿ.

ಸಿಂಹ: ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಮಾನಸಿಕ ಹಿಡಿತ ತಪ್ಪದಂತೆ ತಾಳ್ಮೆ ವಹಿಸುವುದು ಅಗತ್ಯ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿದೆ.

ಕನ್ಯಾ: ವೃತ್ತಿಯಲ್ಲಿ ಅಮಿತವಾದ ಒತ್ತಡ ಉಂಟಾಗಲಿದ್ದು ತಾಳ್ಮೆಯಿಂದ ವ್ಯವಹರಿಸುವುದು ಅವಶ್ಯಕ. ಆಸ್ತಿ ಖರೀದಿ ವ್ಯವಹಾರವನ್ನು ಮುಂದೂಡುವುದು ಸೂಕ್ತ.

ತುಲಾ: ಸಹೋದ್ಯೋಗಿಗಳೊಂದಿಗೆ ವಿನಾಕಾರಣ ಮನಸ್ತಾಪ. ಮಹಿಳೆಯರಿಂದ ಸಂಪೂರ್ಣ ಸಹಕಾರ. ವಿಶೇಷ ವಸ್ತುಗಳ ಖರೀದಿಯ ಸಾಧ್ಯತೆ.

ವೃಶ್ಚಿಕ: ಸ್ವಂತ ಉದ್ಯಮದಲ್ಲಿರುವವರಿಗೆ ಸ್ಪರ್ಧೆಗಳು ಎದುರಾದರೂ ಅನುಕೂಲ. ಹಿರಿಯರ ಆರೋಗ್ಯದಲ್ಲಿ ಸುಧಾರಣೆ. ದುಡುಕಿನಿಂದಾಗಿ ವಿನಾ ಕಾರಣ ಸಹವರ್ತಿಗಳೊಂದಿಗೆ ಮನಸ್ತಾಪ.

ಧನು: ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಸರ್ಕಾರದ ಉನ್ನತ ಹುದ್ದೆಯಲ್ಲಿರುವವರಿಗೆ ಬಿಡುವಿಲ್ಲದ ಕಾರ್ಯಕ್ರಮಗಳು. ಬರವಣಿಗೆಯಿಂದ ಕೀರ್ತಿಲಾಭ.

ಮಕರ: ಸಾಮಾಜಿಕ ಸೇವೆಯಿಂದಾಗಿ ಜನಪ್ರಿಯತೆ. ವ್ಯವಹಾರದಲ್ಲಿ ಸೋದರರಿಂದ ಸಹಕಾರ. ದಾಂಪತ್ಯ ಜೀವನವು ಸುಖಮಯ. ಆಕಸ್ಮಿಕ ಪ್ರಯಾಣ. ಮನೆಯಲ್ಲಿ ಸಂತಸ.

ಕುಂಭ: ಶ್ರದ್ಧೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಬಂಧುಗಳೊಂದಿಗಿನ ಸಂಬಂಧ ಗಟ್ಟಿಗೊಳ್ಳಲಿದೆ. ಬಹುಕಾಲದ ಬಯಕೆಗಳು ಈಡೇರುವ ಸಾಧ್ಯತೆ. ದೂರದ ಪ್ರಯಾಣವೊಂದಕ್ಕೆ ಸಂಕಲ್ಪ.

ಮೀನ: ಮಹಿಳೆರ ಇಷ್ಟಾರ್ಥಗಳು ನೆರವೇರಲಿವೆ. ಹಮ್ಮಿಕೊಂಡಿರುವ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಅನಿರೀಕ್ಷಿತ ಧನಾಗಮನ ಸಾಧ್ಯತೆ. ಕುಟುಂಬದವರೊಂದಿಗೆ ಧಾರ್ಮಿಕ ಕ್ಷೇತ್ರ ದರ್ಶನ.

ನಿಮ್ಮ ಜನ್ಮದಿನ 12-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಹೊಸ ಆರ್ಥಿಕ ಸಂಪನ್ಮೂಲಗಳನ್ನು ಕಂಡುಕೊಳ್ಳುವಿರಿ. ಪಿತ್ರಾರ್ಜಿತ ಆಸ್ತಿಯಿಂದ ಧನಾಗಮವಾಗಲಿದೆ. ಕಲಾ ನೈಪುಣ್ಯತೆಯನ್ನು ಹೊಂದುವಿರಿ. ಕಬ್ಬಿಣ, ಸಿಮೆಂಟ್ ಮುಂತಾದ ಕಟ್ಟೋಣ ಸಾಮಗ್ರಿಗಳ ವ್ಯವಹಾರದಲ್ಲಿ ಅಧಿಕ ಲಾಭ ಕಂಡುಬರುವುದು.

ಪದಬಂಧ 4565

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಅನೇಕ ಜನರ ಭೀಕರ ಕೊಲೆ (5)
4.ತಾಪವಿದ್ದಾಗಲೇ ತೋರಿಸಿದ ಶೌರ್ಯ (3)
5.ರಸದೊಳಗಿನ ವೇಗ (3)
7.ಬೆಂಕಿಗೆ ಗಾಳಿಯೂರುವ ಸಲಕರಣೆ (2)
8.ತಿರುಗಿದ ಸಮಯ (2)
11.ಜ್ಯೋತಿಷ್ಯ ರಾಶಿಯಲ್ಲಿನ ಜೋಡಿ (3)
13.ಇದು ಹೊಸತು (3)
14.ವಿವೇಕವನ್ನು ಕಳೆದುಕೊಂಡವನು (5)

ಮೇಲಿಂದ ಕೆಳಕ್ಕೆ

1.ಬಣವೆ ಹತ್ತಿರ ಕಾಣಿಸಿದ ನಾಯಿಕೊಡೆ (3)
2.ಅಳೆಯುವ ಸಾಧನ (3)
3.ನೆನಪಿನಲ್ಲಿ ಉಳಿಯದಿರುವುದು (3)
4.ಪ್ರಗತಿಶೀಲ ಮನೋಭಾವದವನು (5)
6.ಒಂದೇ ಕಾಲದಲ್ಲಿದ್ದವನು (5)
9.ಲಿಖಿತಮೂಲಕ ಮಾಡಿಕೊಳ್ಳುವ ಅರ್ಜಿ (3)
10.ಅನ್ಯದಲ್ಲಿರುವ ಇದು ಅದ್ವಿತೀಯವಾದುದು! (3)
12.ಹಂದಿ ಇಲ್ಲಿದೆ (3)



4564ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬದುಕು 3.ಮಂದುರ 4.ತರಗು 6.ಕುಡಿ 7.ನಭ 9.ಯಮ 13.ಮನ 14.ತಿಲಕ 15.ಲಾವಣಿ 16.ಟಪಾಲು

ಮೇಲಿಂದ ಕೆಳಕ್ಕೆ: 1.ಬರದು 2.ಕುತರ್ಕ 3.ಮಂಡಿ 5.ಗುನ 6.ಕುಟಿಲೋಪಾಯ 8.ಭವಬಂಧನ 10.ಮತಿ 11.ವಿಕಟ 12.ಹಿಲಾಲು 13.ಮಣಿ

ಸುಡೊಕು 4951

	3		6		2		4	
6		2				8		
			3		9		1	
4		8			5		2	
						4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4950 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ವಿದ್ಯಾರ್ಥಿ ವೇತನ ಕೈಪಿಡಿ

ಐಐಎಫ್ಎಲ್ ವಿದ್ಯಾರ್ಥಿ ವೇತನ 2021–21
ವಿವರ: ಈ ವಿದ್ಯಾರ್ಥಿ ವೇತನವನ್ನು ಐಐಎಫ್ಎಲ್ ಸಂಸ್ಥೆಯ, ಕಂಪನಿಯ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮದಡಿ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ.
ಅರ್ಹತೆ: 9ನೇ ತರಗತಿಯಿಂದ ಪದವಿ ಶಿಕ್ಷಣದ ವರೆಗೂ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕಳೆದ ಪರೀಕ್ಷೆಯಲ್ಲಿ ಶೇ 50ಕ್ಕಿಂತ ಹೆಚ್ಚು ಅಂಕ ಪಡೆಯುವುದು ಕಡ್ಡಾಯ. ಕುಟುಂಬದ ವಾರ್ಷಿಕ ಆದಾಯವು ₹ 3 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ₹ 5 ಸಾವಿರ
ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 15 ಏಪ್ರಿಲ್, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/IIFL1

ಐಐಟಿ ಬಿಎಚ್‌ಯು ವಾರಾಣಸಿಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ಜೂನಿಯರ್ ರಿಸರ್ಚ್ ಫೆಲೋಶಿಪ್ 2021
ವಿವರ: ಪದವಿ ಅಥವಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಐಐಟಿ (ಬಿಎಚ್‌ಯು), ವಾರಾಣಸಿಯು ಅರ್ಜಿಗಳನ್ನು ಆಹ್ವಾನಿಸಿದೆ.
ಅರ್ಹತೆ: ಅರ್ಜಿದಾರರ ವಯಸ್ಸು 28 ವರ್ಷಗಳಿಗಿಂತ ಕಡಿಮೆ ಇರಬೇಕು. ಅವರು ಸಿಎಸ್‌ಇ/ಐಟಿ/ಇಸಿಇ ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಶೇ 60ರಷ್ಟು ಅಂಕ ಗಳಿಸಿರಬೇಕು. ಶೇ 75ರಷ್ಟು ಅಂಕಗಳಿಂದ ಅವರು ಪದವಿ ಶಿಕ್ಷಣ ಮುಗಿಸಿರಬೇಕು. ಗ್ಯಾಟ್ ಅಥವಾ ಎನ್‌ಇಟಿ ಯನ್ನು ಕೂಡ ಶೇ 75ರಷ್ಟುಗಳಿಂದ ಮುಗಿಸಿರಬೇಕು.
ಆರ್ಥಿಕ ಸಹಾಯ: ಪ್ರತೀ ತಿಂಗಳು ₹ 31 ಸಾವಿರ
ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 24 ಏಪ್ರಿಲ್, 2021
ಅರ್ಜಿ ಸಲ್ಲಿಕೆ ವಿಧಾನ: ಇ–ಮೇಲ್ ಮುಖಾಂತರ
ಹೆಚ್ಚಿನ ಮಾಹಿತಿಗೆ: www.b4s.in/praja/VTS5

ಉನ್ನತ ಶಿಕ್ಷಣ: ವಿದ್ಯಾರ್ಥಿಗಳ ನೆರವಿಗೆ ಕೃತಕ ಬುದ್ಧಿಮತ್ತೆ

ಶ್ರುತಿ ಸುಬ್ರಹ್ಮಣ್ಯ

ಗೃಹಬಳಕೆಯಿಂದ ಹಿಡಿದು ಆರೋಗ್ಯ ಸೇವಾ ಕ್ಷೇತ್ರದವರೆಗೂ ಕೃತಕ ಬುದ್ಧಿಮತ್ತೆಯ ಬಳಕೆ ವ್ಯಾಪಕವಾಗಿದೆ. ಹೀಗಿರುವಾಗ ಶೈಕ್ಷಣಿಕ ವಲಯವನ್ನು ಬಿಡಲಾದೀತೇ? ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿ ಇದನ್ನು ಬಳಸಬಹುದು ಎಂಬುದನ್ನು ನೋಡೋಣ.

ಕೋವಿಡ್‌ನಿಂದಾಗಿ ಮನೆಯಲ್ಲೇ ಕುಳಿತು ಆನ್‌ಲೈನ್ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕೆ ವಿವಿಧ ಅಪ್ಲಿಕೇಶನ್‌ಗಳಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಮಶೀನ್ ಲರ್ನಿಂಗ್ ಅನ್ನು ಬಳಸಲಾಗಿದೆ. ಈ ತಂತ್ರಜ್ಞಾನದಿಂದ ವಿದ್ಯಾರ್ಥಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಅಧ್ಯಯನದ ರೂಪುರೇಷೆ ಮಾಡಿಕೊಳ್ಳಬಹುದು. ಅದರಂತೆ ಗೂಗಲ್ ಕ್ಲೌಡ್, ಗೂಗಲ್ ಡಾಕ್ಸ್, ಶೀಟ್ಸ್, ಸ್ಲೈಡ್ಸ್ ಮೊದಲಾದ ಅಪ್ಲಿಕೇಶನ್‌ಗಳಲ್ಲಿ ಕೂಡ ಇದನ್ನು ಬಳಸುವುದು ಸಾಮಾನ್ಯ. ಆಗ್ಯುಮೆಂಟೆಡ್ ರಿಯಾಲಿಟಿ ತಂತ್ರಜ್ಞಾನದಿಂದ ವಿದ್ಯಾರ್ಥಿಗಳು ತರಗತಿಯಲ್ಲಿ ಕೂತು ಪಾಠ ಕೇಳಿದ ಅನುಭವವನ್ನು ಪಡೆಯಬಹುದು.

ನಿತ್ಯದ ಪಾಠದ ಜೊತೆ ಕಿರು ಪರೀಕ್ಷೆಗಳನ್ನು ಸಹ ಈ ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್‌ನಲ್ಲೇ ಮಾಡುತ್ತಿರುವುದು ಗೊತ್ತೇ ಇದೆ. ಇದಕ್ಕಾಗಿ ರಿಮೋಟ್ ಶಿಸ್ತುಪಾಲನಾ ಸೇವೆಯನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ವಿದ್ಯಾರ್ಥಿಗಳು ಮನೆಯಲ್ಲೇ ಕುಳಿತು ಈ ಕಿರು ಪರೀಕ್ಷೆಗಳನ್ನು ಬರೆಯುವುದರ ಜೊತೆಗೆ ಅವರ ಉತ್ತರ ಪತ್ರಿಕೆಗಳನ್ನು ಯಾವುದೇ ಪಕ್ಷಪಾತವಿಲ್ಲದೇ ಮೌಲ್ಯಮಾಪನ ನಡೆಸಲು ಅನುಕೂಲ. ಉನ್ನತ ಮಟ್ಟದ ಪರೀಕ್ಷೆಗಳಾದ ಎಲ್‌ಎಸ್‌ಎಟಿ, ಜಿಎಂಎಟಿ ಮೊದಲಾದವುಗಳನ್ನು ಕೃತಕ ಬುದ್ಧಿಮತ್ತೆಯ ಮೂಲಕವೇ ಶಿಸ್ತುಪಾಲನೆಗೆ ಒಳಪಡಿಸಲಾಗುತ್ತದೆ.

ಮಷೀನ್ ಲರ್ನಿಂಗ್‌ನಿಂದ ಪ್ರಬಂಧ ಬರವಣಿಗೆ

ವಿದ್ಯಾರ್ಥಿಗಳು ವಿನೂತನ ತಂತ್ರಜ್ಞಾನದಿಂದ ಪ್ರಬಂಧಗಳು, ರೆಸ್ಯೂಮೆ ಮೊದಲಾದವುಗಳನ್ನು ಬರೆಯಲು ಸಾಧ್ಯ. ಗ್ರಾಮರ್ಲಿಯಂತಹ ಸಾಫ್ಟ್‌ವೇರ್ ಇದಕ್ಕೆ ಬಳಕೆಯಾಗುತ್ತಿದ್ದು, ವ್ಯಾಕರಣ, ವಾಕ್ಯಗಳ ರಚನೆ ಮೊದಲಾದವುಗಳನ್ನು ಕೃತಕ ಬುದ್ಧಿಮತ್ತೆ ಬಳಸಿ ಸರಿಪಡಿಸಬಹುದು. ಕೆಲವು ಅಪ್ಲಿಕೇಶನ್‌ಗಳಲ್ಲಿ ಮಶೀನ್ ಲರ್ನಿಂಗ್ ಅನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಒಂದು ನೆನಪಿಡಿ, ವಿದ್ಯಾರ್ಥಿಗಳಿಗೆ ಈ ಅಪ್ಲಿಕೇಶನ್‌ಗಳು ಒಂದು ಮಟ್ಟದವರೆಗೆ ನೆರವು ನೀಡುತ್ತವೆಯೇ ಹೊರತು, ತಾವೇ ಬರೆದುಕೊಡುವ ಕೆಲಸ ಮಾಡಲು ಸಾಧ್ಯವಿಲ್ಲ!

> ಉನ್ನತ ಶಿಕ್ಷಣ ವಲಯ ಡಿಜಿಟಲ್ ಆಗಿ ರೂಪಾಂತರಗೊಂಡಿದ್ದು, ವಿದ್ಯಾರ್ಥಿಗಳ ನೆರವಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಹಲವು ಅಪ್ಲಿಕೇಶನ್‌ಗಳು ಲಭ್ಯ.

ಸಂದರ್ಶನಕ್ಕೂ ನೆರವು

ಉನ್ನತ ಶಿಕ್ಷಣಕ್ಕಾಗಿ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಂತರ, ಸಂದರ್ಶನ ಎದುರಿಸುವುದೂ ಅದರ ಒಂದು ಭಾಗ. ಇದಕ್ಕೆ ಕೃತಕ ಬುದ್ಧಿಮತ್ತೆ ಅಳವಡಿಸಿಕೊಂಡ ತಂತ್ರಜ್ಞಾನ ನೆರವಿಗೆ ಬರುತ್ತದೆ. ಈ ಟೂಲ್‌ಗಳು ಅಣಕು ಸಂದರ್ಶನ ಎದುರಿಸಲು ವಿದ್ಯಾರ್ಥಿಗಳಿಗೆ ನೆರವಾಗುತ್ತವೆ. ಹಾಗೆಯೇ ಫೀಡ್‌ಬ್ಯಾಕ್ ಕೂಡ ನೀಡುತ್ತವೆ. ಅಂದರೆ ಮುಖಭಾವ, ದೈಹಿಕ ಹಾವಭಾವ, ದನಿಯ ಏರಿಳಿತ ಮೊದಲಾದವುಗಳನ್ನು ಸರಿಪಡಿಸಿಕೊಳ್ಳಲು ಇದು ಸಹಾಯಕ. ವಿದ್ಯಾರ್ಥಿ ಇದರಿಂದ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬಹುದು. ಅಂತಿಮವಾಗಿ ನಡೆಯುವ ವಿಶ್ವವಿದ್ಯಾಲಯ ಅಥವಾ ಕಂಪನಿಯ ಸಂದರ್ಶನದಲ್ಲಿ ಅವಶ್ಯಕ ಕೌಶಲಗಳನ್ನು ರೂಢಿಸಿಕೊಂಡು ಯಶಸ್ಸು ಗಳಿಸಬಹುದು.

ಚಾಟ್‌ಬೋಟ್

ಇಂದಿನ ತಲೆಮಾರಿನ ವಿದ್ಯಾರ್ಥಿಗಳು ಅಂತರ್ಜಾಲ ಮತ್ತು ಸ್ಮಾರ್ಟ್‌ಫೋನ್‌ಗೆ ಅಂಟಿಕೊಂಡ ಪರಿ ಅಚ್ಚರಿ ಹುಟ್ಟಿಸುವಂತಹದ್ದು. ಆದರೆ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು ಈ ನಡವಳಿಕೆಯನ್ನು ಬಳಸಿಕೊಂಡಿವೆ. ಆನ್‌ಲೈನ್ ಶಿಕ್ಷಣದಲ್ಲಿ ವೆಬ್‌ಸೈಟ್, ಮೊಬೈಲ್ ಆ್ಯಪ್ ಹಾಗೂ ಇನ್ನಿತರ ಯೂಟ್ಯೂಬ್ ಚಾನೆಲ್‌ಗಳಲ್ಲಿ ಚಾಟ್‌ಬೋಟ್ (ವರ್ಚುವಲ್ ಸಹಾಯಕ) ಅಳವಡಿಸಿವೆ. ವಿದ್ಯಾರ್ಥಿಗಳು ಹಾಕುವ ಸಾವಿರಾರು ಪ್ರಶ್ನೆಗಳನ್ನು ಈ ಚಾಟ್‌ಬೋಟ್ ಅರ್ಥ ಮಾಡಿಕೊಂಡು ಉತ್ತರ ನೀಡುತ್ತದೆ. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಬಗ್ಗೆ ಒಳ್ಳೆಯ ಅನುಭವ ಇರಬಹುದು. ಉನ್ನತ ಶಿಕ್ಷಣ ವಲಯ ಡಿಜಿಟಲ್ ಆಗಿ ರೂಪಾಂತರಗೊಂಡಿದ್ದು ಅದಕ್ಕಾಗಿ ಕೃತಕ ಬುದ್ಧಿಮತ್ತೆಯನ್ನು ದೊಡ್ಡ ಪ್ರಮಾಣದಲ್ಲಿ ಬಳಸಿಕೊಂಡಿರುವುದನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯ, ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯ ಮೊದಲಾದ ವೆಬ್‌ಸೈಟ್‌ಗೆ ಹೋಗಿ ಪರೀಕ್ಷಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

SCIENCE AND HOPE OF SURVIVAL by Keilis Borok

ಇಂಗ್ಲಿಷ್ · ಎಸ್ಸೆಸ್ಸೆಲ್ಸಿ

Science and hope of Survival is an excellent story that highlights the importance of advancement in our daily life. This story is written by Keills Borok. He is also the narrator of the story. He says Science is a great help to a man. It has helped us to reach great heights. All modern inventions like phones, planes have become possible only due to science. It is difficult to enjoy our life without the wonders and applications of science. Science has helped us truly a lot. It is hard to survive without it.

A man should use science only for constructive purposes and not for destructive purposes. Science if used properly can create miracles He describes various inventions and their interesting uses. He explained from destructive to constructive inventions. According to the author, some people choose to be scientists because they cannot live without science. To them, science is an adventure and the discovery made is the reward. Instead of money, they enjoy freedom, friendship, and the joy of uncovering one of the mysteries of nature.

The people trained in theoretical physics are headhunted by financial institutions, those trained in frontiers of biological research became founders and directors in the pharmaceutical industry. All new technologies, all new brands of industries are the results of research by scientists. It is through their work that we have medicines, electronics, synthetic fibers, mode of transport, and the green revolution. This proves that scientists are the most detected in the paradox.

After the second world war the USA, USSR, and UK, became powerful countries in the world. Each of these nations had nuclear bombs. Within minutes the world could be destroyed. In the nuclear weapon tests. But there was a doubt about violating this treaty. Therefore, a few scientists all over the world met at Geneva to save the world from danger. They arrived at a decision which resulted in the formulation of the Nuclear Test Ban.

"A cold war was going on in the atmosphere. There were political tensions as well and at the moment it was expected from scientists and engineers to find out the solution for the problem of violation of agreement which was impossible. It was because everyone had a different cultural background. They were able to work out a common language by expertise but still the cold war and the political tensions did not allow them to break the 'Iron Curtain'. Iron Curtain is referred to as a barrier. It was outwardly different for the opposite sides of the Iron curtain to find out the solution for the problem of violation of the agreement.

The writer learned many things at the Geneva summit. The first was that there were people all around the world who think and interact the way he did. Secondly, he learned that with those people with the same interests around him, he could never feel lonely abroad. Thirdly he realized that science is our indispensable guardian and caretaker.

If there is science, there is the hope of survival and wellbeing for all of us.

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಆರ್ಟಿಕಲ್ಸ್ ಆನ್ ಮೇಡನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/2PRNt5C

ಅಮೈನೋ ಆಮ್ಲಗಳ ವರ್ಗೀಕರಣ

(ಮುಂದುವರಿದ ಭಾಗ)

ಭೌತಶಾಸ್ತ್ರ · ದ್ವಿತೀಯ ಪಿಯುಸಿ

ಪ್ರೊಟೀನ್‌ಗಳನ್ನು ಅವುಗಳ ಆಣ್ವಿಕ ಆಕಾರವನ್ನು ಆಧರಿಸಿ 2 ವಿಧಗಳಾಗಿ ವಿಂಗಡಿಸಬಹುದು.

1) ಫೈಬ್ರಸ್ ಅಥವಾ ನಾರು, ಎಳೆಗಳಂತಹ ಪ್ರೊಟೀನ್:

ಪಾಲಿ ಪೆಪ್ಟೈಡ್ ಸರಪಣಿಗಳು ಪರಸ್ಪರ ಸಮಾನಾಂತರವಾಗಿದ್ದು, ಒಂದಕ್ಕೊಂದು ಹೈಡ್ರೋಜನ್ ಅಥವಾ ಡೈಸಲ್ಫೈಡ್ ಬಂಧಗಳ ಮೂಲಕ ಜೋಡಿಸಲ್ಪಟ್ಟಾಗ ಎಳೆಗಳಂತಹ (ನಾರಿನ) ರಚನೆ ಉಂಟಾಗುತ್ತದೆ. ಅಂತಹ ಪ್ರೊಟೀನ್‌ಗಳು ಸಾಮಾನ್ಯವಾಗಿ ನೀರಿನಲ್ಲಿ ಕರಗುವುದಿಲ್ಲ.

ಉದಾಹರಣೆ: ಕೆರಾಟಿನ್ (ಕೂದಲು, ಉಣ್ಣೆ, ರೇಶ್ಮೆಗಳಲ್ಲಿರುತ್ತದೆ).

2)ಗೋಳಾಕಾರದ ಪ್ರೊಟೀನ್‌ಗಳು

ಪಾಲಿ ಪೆಪ್ಟೈಡ್ ಸರಪಣಿಗಳು ಸುರುಳಿಯಾಕಾರದಲ್ಲಿ ಸುತ್ತಿಕೊಂಡ ಪರಿಣಾಮವಾಗಿ ಗೋಳಾಕಾರವನ್ನು ಹೊಂದುವುದರಿಂದ ಈ ರಚನೆ ಉಂಟಾಗುತ್ತದೆ. ಇವು ಸಾಮಾನ್ಯವಾಗಿ ನೀರಿನಲ್ಲಿ ಕರಗುತ್ತವೆ.

ಉದಾಹರಣೆ: ಇನ್ಸುಲಿನ್ ಮತ್ತು ಆಲ್ಬುಮಿನ್

ಪ್ರೊಟೀನ್‌ಗಳ ರಚನೆ ಮತ್ತು ಆಕಾರವನ್ನು ನಾಲ್ಕು ವಿವಿಧ ಹಂತಗಳಲ್ಲಿ ಕಲಿಯಬಹುದು. ಅವೆಂದರೆ: ಪ್ರಾಥಮಿಕ, ದ್ವಿತೀಯಕ, ತೃತೀಯಕ ಮತ್ತು ಚತುರ್ಥಕ. ಇಲ್ಲಿ ಪ್ರತಿ ಹಂತವೂ ಮೊದಲನೆಯದಕ್ಕಿಂತ ಸಂಕೀರ್ಣವಾಗಿರುತ್ತದೆ.

1) ಪ್ರೊಟೀನ್‌ಗಳ ಪ್ರಾಥಮಿಕ ರಚನೆ: ಪ್ರೊಟೀನ್‌ಗಳು ಒಂದು ಅಥವಾ ಹೆಚ್ಚು ಪಾಲಿಪೆಪ್ಟೈಡ್ ಸರಪಣಿಗಳನ್ನು ಹೊಂದಿರಬಹುದು. ಪ್ರೊಟೀನ್‌ನ ಪ್ರತಿಯೊಂದು ಪಾಲಿಪೆಪ್ಟೈಡ್ ಸರಪಣಿಯಲ್ಲಿ ಅಮೈನೋ ಆಮ್ಲಗಳು ಒಂದು ನಿರ್ದಿಷ್ಟ ಅನುಕ್ರಮದಲ್ಲಿ ಜೋಡಣೆ ಆಗಿರುತ್ತದೆ ಮತ್ತು ಈ ಅಮೈಸೀ ಆಮ್ಲಗಳ ಅನುಕ್ರಮವನ್ನು ಪ್ರೊಟೀನಿನ ಪ್ರಾಥಮಿಕ ರಚನೆ ಎನ್ನುವರು. ಈ ಪ್ರಾಥಮಿಕ ರಚನೆಯಲ್ಲಿ ಅಂದರೆ ಅಮೈನೋ ಆಮ್ಲಗಳು ಅನುಕ್ರಮದಲ್ಲಿ ಏನೇ ಬದಲಾವಣೆ ಆದರೂ ಅದು ಒಂದು ಬೇರೆಯ ಪ್ರೊಟೀನ್ ಅನ್ನು ಸೃಷ್ಟಿಸುತ್ತದೆ.

2) ಪ್ರೊಟೀನ್‌ಗಳ ದ್ವಿತೀಯಕ ರಚನೆ: ಪ್ರೊಟೀನ್‌ಗಳ ದ್ವಿತೀಯಕ ರಚನೆ ಎಂಬುದು ಯಾವ ಆಕಾರದಲ್ಲಿ ದೀರ್ಘ ಪಾಲಿಪೆಪ್ಟೈಡ್ ಸರಪಣಿ ಇರುತ್ತದೆ ಎಂಬುದನ್ನು ಸೂಚಿಸುತ್ತದೆ. ಅವು ಎರಡು ಭಿನ್ನ ರೀತಿಯ ರಚನೆಗಳನ್ನು ಹೊಂದಿರುವುದು ಕಂಡು ಬರುತ್ತದೆ. ಅವೆಂದರೆ ಸುರುಳಿ ಮತ್ತು ನೆರಿಗೆಯ ಶೀಟ್ ರಚನೆ. ಪೆಪ್ಟೈಡ್ ಬಂಧನಗಳಲ್ಲಿರುವ ಮತ್ತು ಗುಂಪುಗಳ ನಡುವಿನ ಹೈಡ್ರೋಜನ್ ಬಂಧಗಳಿಂದಾಗಿ ಪಾಲಿಪೆಪ್ಟೈಡ್ ಸರಪಣಿಯ ಬೆನ್ನೆಲುಬು ನಿಯಮಿತವಾಗಿ ಮಡಚಿರುವುದರಿಂದ ಈ ರಚನೆಗಳು ಉಂಟಾಗುತ್ತವೆ.

ಒಂದು ಪಾಲಿಪೆಪ್ಟೈಡ್ ಸರಪಣಿಯು ಸಂಭಾವ್ಯ ಎಲ್ಲ ಹೈಡ್ರೋಜನ್ ಬಂಧಗಳನ್ನು ರೂಪಿಸಿಕೊಂಡು ಬಲಗೈ ಸುರುಳಿಯನ್ನು ಮಾಡುವಲ್ಲಿ ಸುರುಳಿ ಒಂದು ಸಾಮಾನ್ಯವಿಧವಾಗಿದೆ. ಇಲ್ಲಿ ಪ್ರತಿ ಅಮೈನೋ ಆಮ್ಲದ ಭಾಗವು ಪಕ್ಕದ ಸುರುಳಿಗೆ ಹೈಡ್ರೋಜನ್ ಬಂಧವನ್ನು ಹೊಂದಿರುತ್ತದೆ.

ನೆರಿಗೆಯ ಶೀಟ್ ರಚನೆಯಲ್ಲಿ ಎಲ್ಲಾ ಪೆಪ್ಟೈಡ್ ಸರಪಣಿಗಳು ಹೊರ ಬದಿಗೆ ಚಾಚಿಕೊಂಡು ಸುಮಾರು ಗರಿಷ್ಠ ವಿಸ್ತಾರವನ್ನು ಪಡೆಯುತ್ತವೆ ಮತ್ತು ನಂತರ ಒಂದರ ಪಕ್ಕ ಇನ್ನೊಂದು ಅಂತರ್ ಅಣ್ವಿಕ ಹೈಡ್ರೋಜನ್ ಬಂಧಗಳಿಂದ ಬಂಧಿತಗೊಂಡು ಒಂದರ ಪಕ್ಕ ಇನ್ನೊಂದು ಪರದೆಗಳ ನೆರಿಗೆಗಳಂತೆ ಇಡಲ್ಪಡುತ್ತವೆ. ಆದ್ದರಿಂದ ಅವುಗಳಿಗೆ ನೆರಿಗೆಗಳ ಶೀಟ್ ರಚನೆಗಳು ಎಂದು ಕರೆಯಲಾಗಿದೆ.

3) ಪ್ರೊಟೀನ್‌ಗಳ ತೃತೀಯಕ ರಚನೆ: ಪ್ರೊಟೀನ್‌ಗಳ ಈ ತೃತೀಯಕ ರಚನೆಯು ಪಾಲಿಪೆಪ್ಟೈಡ್ ಸರಪಣಿಗಳ ಸಂಪೂರ್ಣ ಮಡಿಕೆಗಳನ್ನು ಸೂಚಿಸುತ್ತದೆ. ಅಂದರೆ ದ್ವಿತೀಯಕ ರಚನೆಯ ನಂತರದ ಮಡಿಕೆಗಳು ಹೈಡ್ರೋಜನ್ ಬಂಧಗಳು, ಡೈಸಲ್ಫೈಡ್ ಜೋಡಣೆಗಳು ವಾನ್-ಡರ್-ವಾಲ್ ಮತ್ತು ಸ್ಥಾಯಿ ವಿದ್ಯುತ್ ಆಕರ್ಷಣೆಗಳು 20, 30 ರಚನೆಗಳನ್ನು ಸ್ಥಿರೀಕರಿಸುವ ಮುಖ್ಯಬಲಗಳಾಗಿವೆ.

4) ಪ್ರೊಟೀನ್‌ಗಳ ಚತುರ್ಥಕ ರಚನೆ: ಕೆಲವು ಪ್ರೊಟೀನ್‌ಗಳು ಉಪ ವಿಭಾಗಗಳೆಂದು ಕರೆಯಲ್ಪಡುವ 2 ಅಥವಾ 3 ಪಾಲಿಪೆಪ್ಟೈಡ್ ಸರಪಣಿಗಳಿಂದಾಗಿದೆ. ಈ ಉಪ ಯುನಿಟ್‌ಗಳು ಪರಸ್ಪರ ತ್ರೀಡಿ ಆಯಾಮಗಳ ರಚನೆಗಳನ್ನು ಚತುರ್ಥಕ ರಚನೆ ಎನ್ನುವರು.

5) ಪ್ರೊಟೀನ್‌ಗಳ ನಿಸ್ವಾಭಾವೀಕರಣ: ಜೈವಿಕ ವ್ಯವಸ್ಥೆಯಲ್ಲಿ ಸಿಗುವ ವಿಶಿಷ್ಟ ಮೂರು ಆಯಾಮದ ರಚನೆ ಮತ್ತು ಜೈವಿಕ ಚಟುವಟಿಕೆಯಿರುವ ಪ್ರೊಟೀನ್ ಅನ್ನು ಪ್ರಾಕೃತಿಕ ಪ್ರೊಟೀನ್ ಎನ್ನುತ್ತಾರೆ. ತನ್ನ ಪ್ರಾಕೃತಿಕ ರೂಪದಲ್ಲಿರುವ ಪ್ರೊಟೀನ್ ಅನ್ನು ಉಷ್ಣತೆ ಬದಲಾವಣೆಯಂತಹ ಭೌತಿಕ ಬದಲಾವಣೆ ಅಥವಾ ಬದಲಾವಣೆಯಂತಹ ರಾಸಾಯನಿಕ ಬದಲಾವಣೆಗೆ ಒಡ್ಡಿದಾಗ ಬಂಧಗಳು ತೊಂದರೆಗೀಡಾಗುತ್ತವೆ. ಇದರಿಂದ ಗೋಳಗಳ ಮಡಿಕೆಗಳು ಬಿಚ್ಚಿಕೊಂಡು, ಹೆಲಿಕ್ಸಾನ್ ಸುರುಳಿಗಳು ಬಿಚ್ಚಿಕೊಳ್ಳುತ್ತವೆ ಮತ್ತು ಪ್ರೊಟೀನ್ ತನ್ನ ಜೈವಿಕ ಚಟುವಟಿಕೆಗಳನ್ನು ಕಳೆದುಕೊಳ್ಳುತ್ತದೆ. ಇದನ್ನು ಪ್ರೊಟೀನ್‌ಗಳ ನಿಸ್ವಾಭಾವೀಕರಣ ಎನ್ನುತ್ತಾರೆ. ನಿಸ್ವಾಭಾವೀಕರಣದಲ್ಲಿ 20, 30 ರಚನೆಗಳು ನಾಶವಾಗುತ್ತವೆ. ಆದರೆ ರಚನೆ ಹಾಗೆಯೇ ಉಳಿಯುತ್ತದೆ.

ಸಾಂದರ್ಭಿಕ ಚಿತ್ರ

ಉದಾಹರಣೆ: ಮೊಟ್ಟೆಯ ಬಿಳಿಭಾಗವನ್ನು ಕಾಯಿಸಿದಾಗ ಅದು ಗರಣೆಗಟ್ಟುವುದು ನಿಸ್ವಾಭಾವೀಕರಣ.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ರೇ ಆಪ್ಟಿಕ್ಸ್ ಆ್ಯಂಡ್ ಆಪ್ಟಿಕಲ್ ಇನ್‌ಸ್ಟ್ರುಮೆಂಟ್ಸ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3a1ohAO

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before / After
ಲೈಂಗಿಕ ರೋಗಗಳು · ಉದ್ರೇಕದ ಸಮಸ್ಯೆ · ಲೈಂಗಿಕ ನಿರಾಸಕ್ತಿ · ನಿದ್ರಾ ಸ್ಖಲನ · ಶೀಘ್ರ ಸ್ಖಲನ · ಲಿಂಗ ಚಿಕ್ಕದಾಗುವುದು · ನರ ದೌರ್ಬಲ್ಯ · ಅವಧಿಗೆ ಮೊದಲೇ ಸ್ಖಲನ · ಆತಂಕ, ದೌರ್ಬಲ್ಯ · ಕಡಿಮೆ ವೀರ್ಯಾಣು · ಮುಷ್ಠಿ ಮೈಥುನದ ಅಡ್ಡಪರಿಣಾಮ
100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

RN Shetty Trust®
RNS INSTITUTE OF TECHNOLOGY
(AICTE Approved, VTU Affiliated and NAAC "A" Accredited)
(UG programs - CSE, ECE, ISE, EIE and EEE have been Accredited by NBA)
Channasandra, Dr. Vishnuvardhan Road, RR Nagar Post, Bengaluru -98, Karnataka, India. Tel :+91 80286 11880/ 1 / 3
E: principal@rnsit.ac.in | W: www.rnsit.ac.in
Estd:2001 An Institute with Difference
Dr. R N Shetty Founder
HEARTY CONGRATULATIONS TO OUR PROUD ACHIEVERS
VTU RANK HOLDERS (20TH ANNUAL CONVOCATION)
P Yuktha I Rank, ISE 4 Gold Medals · Kasturi R I Rank, M.Tech (VLSI) I Gold Medal · Apoorva G S II Rank, EIE · Shriharshini U A II Rank, MBA · Harshitha J II Rank, M.Tech (VLSI) · Archana V R II Rank, M. Tech (CSE) · Pramod R III Rank, ISE · Sinchana S III Rank, MBA · Sushma R IV Rank, MCA
Pallavi IV Rank, M.Tech (VLSI) · Navya Shree R V Rank, ECE · Sheetal B V V Rank, EIE · Rashmi Hegde V Rank, M.Tech (CSE) · Bhoomika G VI Rank, M.Tech (VLSI) · Tejaswini B VII Rank, MCA · Vibha R IX Rank, ECE · Rachana M IX Rank, MBA · Arshiya Begum S X Rank, EEE · Shashikal K S X Rank, MCA
UNDER GRADUATE PROGRAMS
- B.E. Computer Science & Engineering
- B.E. Electronics & Communication Engineering
- B.E. Information Science & Engineering
- B.E. Artificial Intelligence & Machine Learning
- B.E. Electronics & Instrumentation Engineering
- B.E. Electrical & Electronics Engineering
- B.E. Mechanical Engineering
- B.E. Civil Engineering
College Code CET : E118 COMEDK : E104
TWO DECADES OF ACADEMIC EXCELLENCE
POST GRADUATE PROGRAMS
- MBA
- MCA
- M. Tech. (VLSI Design & Embedded Systems)
- M. Tech. (Computer Science & Engineering)

Particulars	2017	2018	2019	2020	2021
VTU Ranks	19	20	19	19	Yet to be Announced
Placement offers	705	736	868	724	660 Ongoing

Rated by public as one of the top preferred Engineering Institutions in Bengaluru, under VTU
Lord Shiva
- NAAC "A" accredited for FIVE years from 2017-18
- NBA accreditation for FIVE UG Programs – CSE ISE, ECE, EIE & EEE for THREE years 2018-21
- NIRF Ranking 2020, Rank Band: 251- 300
- Quality Teaching
- Paid Internships up to Rs 1,00,000 /- per month
- 10-15% of students going abroad for higher studies
- 150+ Companies with highest pay package up to 30 LPA
- Gold Medals for Toppers in RNSIT
- Award for Performing Teachers and Students
RNS SCHOOL OF ARCHITECTURE
(CoA Approved, VTU Affiliated and GoK Recognized)
(A Sister Institution of RNS Institute of Technology)
B.Arch. 5-Year Course (Bachelor of Architecture)
NATA / JEE - Arch Qualified score admissible
College Code CET : E268 COMEDK : E190
For further details regarding admission contact:
Dr. M K Venkatesha, Principal: M: +91 98808 67337, E: principal@rnsit.ac.in
Mr. Ranganath Sitharam, Registrar: M: +91 99021 55339, E: registrar@rnsit.ac.in

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಮತದಾರರ ಸಂಖ್ಯೆ: ಪುರುಷರು 1,24,530 • ಮಹಿಳೆಯರು 1,14,325 • ಒಟ್ಟು 2,38,855

ಚತುಷ್ಕೋನ ಸ್ಪರ್ಧೆ–ಜಾತಿ ಸಮೀಕರಣದ ಸವಾಲು

• ಚಂದ್ರಕಾಂತ ಮಸಾನಿ

ಮಾಲಾ ನಾರಾಯಣರಾವ್

ಶರಣು ಸಲಗರ

ಮಲ್ಲಿಕಾರ್ಜುನ ಖೂಬಾ

ಸೈಯದ್ ಯಸ್ರಬ್ ಅಲಿ ಖಾದ್ರಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅನುಕಂಪ, ಜಾತಿ ಸಮೀಕರಣ ಮತ್ತು 'ಸ್ವಾಭಿಮಾನ'ದ ಚರ್ಚೆ ಜೋರಾಗಿದೆ.

ಕಳೆದ ಚುನಾವಣೆಯಲ್ಲಿ ಬಿ.ನಾರಾಯಣ ರಾವ್ ಗೆಲ್ಲುವ ಮೂಲಕ 35 ವರ್ಷಗಳ ನಂತರ ಈ ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಗೆ ತಂದುಕೊಟ್ಟಿದ್ದರು. ಕೋವಿಡ್‌ನಿಂದಾಗಿ ಅವರು ಮೃತಪಟ್ಟಿದ್ದರಿಂದ ಉಪ ಚುನಾವಣೆ ನಡೆಯುತ್ತಿದೆ.

ನಾರಾಯಣರಾವ್ ಅವರ ಪತ್ನಿ ಮಾಲಾ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದ್ದು, ಅನುಕಂಪದ ಲಾಭ ಪಡೆಯುವ ನಿರೀಕ್ಷೆಯಲ್ಲಿದೆ. ಪರಿಶಿಷ್ಟ ಸಮುದಾಯ, ಮುಸ್ಲಿಂ ಹಾಗೂ ಇತರೆ ಹಿಂದುಳಿದ ವರ್ಗಗಳ ಮತಗಳನ್ನು ಸೆಳೆಯುವ ತಂತ್ರಗಾರಿಕೆ ನಡೆಸುತ್ತಿದೆ. ಪಕ್ಷದ ವರಿಷ್ಠರು ವಿವಿಧ ಸಮುದಾಯಗಳ ಮುಖಂಡರನ್ನು ಕರೆಸಿ ಪ್ರಚಾರ ಸಭೆಗಳನ್ನು ನಡೆಸುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದ್ದಾರೆ. ಮುಖಂಡರು ಗ್ರಾಮಗಳಲ್ಲೇ ವಾಸ್ತವ್ಯ ಮಾಡಿ ಪ್ರಚಾರ ಕೈಗೊಳ್ಳುತ್ತಿರುವುದು ಮಾಲಾ ಅವರ ಆತ್ಮವಿಶ್ವಾಸ ಹೆಚ್ಚಿಸಿದೆ.

ಕಲಬುರ್ಗಿ ಜಿಲ್ಲೆಯ ಶರಣು ಸಲಗರ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ಬಿಜೆಪಿಗೆ ಈ ಬಂಡಾಯವೇ ದೊಡ್ಡ ತಲೆನೋವಾಗಿದೆ. ಶರಣು ಹಾಗೂ ಮಲ್ಲಿಕಾರ್ಜುನ ಖೂಬಾ ಇಬ್ಬರೂ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಬಿಜೆಪಿಗೆ ಲಿಂಗಾಯತರ ಮತ ವಿಭಜನೆಯ ಆತಂಕ ಎದುರಾಗಿದೆ.

ಅಖಾಡದಲ್ಲೊಂದು ಸುತ್ತು

ಶರಣು ಸಲಗರ ಅವರ ಪತ್ನಿ ಸಾವಿತ್ರಿ ಸಲಗರ ಎರಡು ವರ್ಷಗಳ ಹಿಂದೆ ಬಸವಕಲ್ಯಾಣದ ತಹಶೀಲ್ದಾರರಾಗಿ ನಿಯೋಜನೆಗೊಂಡಿದ್ದರು. ಇತ್ತೀಚಿನ ವರೆಗೂ ಅವರು ಅಲ್ಲಿ ಕಾರ್ಯನಿರ್ವಹಿಸಿದರು. ಎರಡು ವರ್ಷಗಳಿಂದ ಈ ಕ್ಷೇತ್ರದಲ್ಲಿ ಠಿಕಾಣಿ ಹೂಡಿರುವ ಶರಣು ಕ್ಷೇತ್ರ ಸುತ್ತಿ ಲಾಕ್‌ಡೌನ್ ಸಮಯದಲ್ಲಿ 'ಸಮಾಜ ಸೇವೆ'ಯ ಮೂಲಕ ಹೆಸರು ಮಾಡಿದ್ದಾರೆ. ಅದೇ ಕಾರಣಕ್ಕೆ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಅವರದ್ದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರುವುದು ಹಾಗೂ ಸಚಿವರ ದಂಡೇ ಕ್ಷೇತ್ರದಲ್ಲಿ ಬೀಡು ಬಿಟ್ಟಿರುವುದು ಅವರ ಬಲ ಹೆಚ್ಚಿಸಿದೆ.

ಮಲ್ಲಿಕಾರ್ಜುನ ಖೂಬಾ ಜೆಡಿಎಸ್‌ನಿಂದ ಎರಡು ಬಾರಿ ಶಾಸಕರಾಗಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ನಾರಾಯಣರಾವ್ ವಿರುದ್ಧ ಪರಾಭವಗೊಂಡಿದ್ದರು. ಹಿಂದಿನ ಚುನಾವಣೆಯಲ್ಲಿ ಖೂಬಾಗೆ ವಿರೋಧ ವ್ಯಕ್ತಪಡಿಸಿದ್ದ 'ಬಸವಕಲ್ಯಾಣ ಸ್ವಾಭಿಮಾನಿ ಬಳಗ' ಈಗ ಅವರ ಬೆಂಬಲಕ್ಕೆ ನಿಂತಿದೆ.

15 ವರ್ಷ ಕಾಂಗ್ರೆಸ್‌ನಲ್ಲಿದ್ದ ಲಾರಿ ಉದ್ಯಮಿ ಸೈಯದ್ ಯಸ್ರಬ್ ಅಲಿ ಖಾದ್ರಿ ಅವರನ್ನು ಜೆಡಿಎಸ್ ಕರೆತಂದು ಕಣಕ್ಕಿಳಿಸಿದೆ. ಮುಸ್ಲಿಂ ಮತದಾರರ ಸಂಖ್ಯೆಯೂ ಇಲ್ಲಿ ಹೆಚ್ಚಿದೆ. ಎಚ್‌.ಡಿ.ಕುಮಾರಸ್ವಾಮಿ ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿ ಮತಗಳ ಕ್ರೋಡೀಕರಣಕ್ಕೆ ಯತ್ನಿಸುತ್ತಿದ್ದಾರೆ.

ಬಿ.ನಾರಾಯಣರಾವ್ ಮುಸ್ಲಿಮರಿಗೆ ಆಪ್ತರಾಗಿದ್ದರು. ಈ ಬಾರಿ ಮುಸ್ಲಿಂ ಅಭ್ಯರ್ಥಿಯೇ ಚುನಾವಣಾ ಕಣದಲ್ಲಿದ್ದಾರೆ. ಹೀಗಾಗಿ ಮುಸ್ಲಿಮರು ಯಾರ ಪರವಾಗಿ ನಿಲ್ಲುತ್ತಾರೆ ಎಂಬುದರ ಮೇಲೆ ಕಾಂಗ್ರೆಸ್ ಅಭ್ಯರ್ಥಿಯ ಗೆಲುವು ನಿರ್ಧಾರವಾಗಲಿದೆ.

ಮಾಜಿ ಶಾಸಕ, ಮರಾಠ ಸಮುದಾಯದ ಮುಖಂಡ ಮಾರುತಿರಾವ್ ಮುಳೆ ಕಳೆದ ಬಾರಿ ಬಿಜೆಪಿ ತೊರೆದು ಜೆಡಿಎಸ್‌ಗೆ ಸೇರಿದ್ದರು. ಈಗ ಎನ್‌ಸಿಪಿ ಸೇರಿ ನಾಮಪತ್ರ ಸಲ್ಲಿಸಿದ್ದ ಅವರನ್ನು ಬಿಜೆಪಿ ಸೆಳೆದುಕೊಂಡಿದೆ. ಕಳೆದ ಬಾರಿ ಈ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಪಿ.ಜಿ.ಆರ್. ಸಿಂಧ್ಯಾ ಕಾಂಗ್ರೆಸ್ ಸೇರಿದ್ದಾರೆ. ಮರಾಠ ಸಮುದಾಯದ ಮತ ಸೆಳೆಯಲು ಬಿಜೆಪಿ–ಕಾಂಗ್ರೆಸ್ ಪೈಪೋಟಿ ನಡೆಸುತ್ತಿವೆ.

ಈ ಕ್ಷೇತ್ರದಲ್ಲಿ ಲಿಂಗಾಯತ, ಮರಾಠ, ಮುಸ್ಲಿಂ ಮತದಾರರು ಹೆಚ್ಚೂ–ಕಡಿಮೆ ಸಮ ಸಂಖ್ಯೆಯಲ್ಲಿದ್ದಾರೆ. ಅವರನ್ನು ಓಲೈಸಿಕೊಳ್ಳಲು ಮೂರೂ ಪಕ್ಷಗಳು ಕಸರತ್ತು ನಡೆಸಿವೆ.

ಮೊದಲ ಜಯ ಮಹಿಳೆಗೆ

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದಲ್ಲಿ ಮೊದಲ ಜಯ ಸಾಧಿಸಿದವರು ಕಾಂಗ್ರೆಸ್‌ನ ಅನ್ನಪೂರ್ಣಬಾಯಿ. 1957 ಹಾಗೂ 1962ರಲ್ಲಿ ಎರಡು ಬಾರಿ ಅವರು ವಿಜೇತರಾಗಿದ್ದರು.

ಈ ಬಾರಿ ಕಾಂಗ್ರೆಸ್‌ನ ಮಾಲಾ ಹಾಗೂ ಅಖಿಲ ಭಾರತೀಯ ಮುಸ್ಲಿಂ ಲೀಗ್ (ಸೆಕ್ಯುಲರ್)ನ ಫರ್ಜಾನಾ ಬೇಗಂ ಕಣದಲ್ಲಿದ್ದಾರೆ.

ಜನತಾ ಪರಿವಾರಕ್ಕೆ ಏಳು ಗೆಲುವು

ಜನತಾ ಪರಿವಾರದ ಅಭ್ಯರ್ಥಿಗಳು ಏಳು ಸಲ ಗೆಲುವು ಸಾಧಿಸಿದ್ದರು. ಜನತಾ ಪಕ್ಷದಿಂದ ಬಸವರಾಜ ಪಾಟೀಲ ಅಟ್ಟೂರ್ 1983ರಿಂದ 1994ರ ವರೆಗೆ ನಾಲ್ಕು ಅವಧಿಗೆ ಶಾಸಕರಾಗಿದ್ದರು. ನಂತರ ಜೆಡಿಎಸ್‌ನಿಂದ ಎಂ.ಜಿ.ಮುಳೆ ಒಂದು ಬಾರಿ, ಮಲ್ಲಿಕಾರ್ಜುನ ಖೂಬಾ ಎರಡು ಬಾರಿ ಆಯ್ಕೆಯಾಗಿದ್ದರು.

ಇದೇ ಕಾರಣಕ್ಕೆ ಎಚ್‌.ಡಿ.ಕುಮಾರಸ್ವಾಮಿ ಅವರು ಈ ಬಾರಿ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಬಸವಕಲ್ಯಾಣದಲ್ಲಿ ಬೀಡು-ಬಿಟ್ಟಿದ್ದಾರೆ. ಕ್ಷೇತ್ರವನ್ನು ಪಕ್ಷದ ತೆಕ್ಕೆಗೆ ತೆಗೆದುಕೊಳ್ಳಲು ಎಲ್ಲ ರೀತಿಯ ಪ್ರಯತ್ನ ನಡೆಸಿದ್ದಾರೆ.

ಬಿಜೆಪಿಯವರು ಅಧಿಕಾರ ನಡೆಸಲು ಯೋಗ್ಯರಲ್ಲ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರೈತರು, ಬಡವರು, ಹಿಂದುಳಿದವರು ಮತ್ತು ಶೋಷಿತರನ್ನು ಕಡೆಗಣಿಸಿರುವ ಬಿಜೆಪಿಯವರು ಅಧಿಕಾರ ನಡೆಸಲು ಯೋಗ್ಯರಲ್ಲ' ಎಂದು ಕಾಂಗ್ರೆಸ್ ಮುಖಂಡ ಮಧು ಬಂಗಾರಪ್ಪ ವಾಗ್ದಾಳಿ ನಡೆಸಿದರು.

ಇಲ್ಲಿನ ಕಾಂಗ್ರೆಸ್ ಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬಡವರು, ಶೋಷಿತರು, ಹಿಂದುಳಿದವರು, ಆರ್ಥಿಕವಾಗಿ ಅಶಕ್ತರಿಗೆ ನೆರವು ದೊರೆಯುವುದು ಮತ್ತು ಅಭಿವೃದ್ಧಿಯು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ' ಎಂದು ಅವರು ಪ್ರತಿಪಾದಿಸಿದರು.

'ಸತೀಶ ಜಾರಕಿಹೊಳಿ ಅವರು ನನ್ನ ತಂದೆ, ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರಿಗೆ ಆಪ್ತರಾಗಿದ್ದರು. ನನಗೂ ಅನೇಕ ಬಾರಿ ಸಹಾಯ–ಸಹಕಾರ ನೀಡಿದ್ದಾರೆ. ಅವರನ್ನು ಬೆಂಬಲಿಸುವಂತೆ ಮನವಿ ಮಾಡುತ್ತಿದ್ದೇನೆ' ಎಂದರು.

'ದೆಹಲಿಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಸೇರಿದಂತೆ ಹಲವು ಮುಖಂಡರನ್ನು ಭೇಟಿಯಾಗಿ ಕಾಂಗ್ರೆಸ್ ಸೇರಿದ್ದೇನೆ. ಅಧಿಕಾರಕ್ಕೆ ಸೇರ್ಪಡೆ ಆಗಿಲ್ಲ. ಕೆಪಿಸಿಸಿ ಕಚೇರಿಯಲ್ಲೂ ಸೇರಲಿದ್ದೇನೆ. ಈಗಾಗಲೇ ನಾನು ಅಪ್ಪಟ ಕಾಂಗ್ರೆಸ್ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಕಾರ್ಯಕರ್ತರಿಂದ ಕಲ್ಲು ತೂರಾಟ: ಖೂಬಾ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ನನ್ನ ಚುನಾವಣಾ ಪ್ರಚಾರಕ್ಕಾಗಿ ಬ್ಯಾನರ್ ಅಳವಡಿಸಿದ್ದ ವಾಹನದ ಮೇಲೆ ಹುಲಸೂರ ಬಳಿ ಬಿಜೆಪಿ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದ್ದಾರೆ' ಎಂದು ಉಪ ಚುನಾವಣೆಯ ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಗ್ಗೆ ಠಾಣೆಗೆ ದೂರು ನೀಡಿದ್ದೇನೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೋಮವಾರ (ಏಪ್ರಿಲ್ 12) ಪ್ರಚಾರ ಸಭೆಗೆ ಇಲ್ಲಿಗೆ ಬರುತ್ತಿದ್ದು, ಅವರ ಸಭೆಗೆ ನುಗ್ಗಿ ನ್ಯಾಯ ಕೇಳುವೆ. ಸ್ಥಳೀಯರನ್ನು ಕಡೆಗಣಿಸಿ ಹೊರಗಿನವರಿಗೆ ಟಿಕೆಟ್ ಕೊಡಲು ಕಾರಣವೇನು ಎಂದೂ ಪ್ರಶ್ನಿಸುವೆ' ಎಂದರು.

'ನಗರದ 6 ಸ್ಥಳಗಳಲ್ಲಿ ರಾಜಾರೋಷವಾಗಿ ಮತದಾರರಿಗೆ ಹಣ ಹಂಚಲಾಗುತ್ತಿದೆ. ಇದಲ್ಲದೆ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಹಾಗೂ ತಹಶೀಲ್ದಾರ್ ಆಗಿರುವ ಅವರ ಪತ್ನಿ ಸಾವಿತ್ರಿ ಸಲಗರ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಮೂರು ಸ್ಥಳಗಳಲ್ಲಿ ಇವೆ' ಎಂದು ಆರೋಪಿಸಿದರು.

ಉಪ ಚುನಾವಣಾ ಕಣದಲ್ಲಿ ಸದ್ದು ಮಾಡದ ಸಿ.ಡಿ ಪ್ರಕರಣ

ಗೋಕಾಕ, ಅರಭಾವಿಯಿಂದ ಡಿಕೆಶಿ, ಸಿದ್ದರಾಮಯ್ಯ ದೂರ ಏಕೆ?

• ಎಂ. ಮಹೇಶ

> ಗೋಕಾಕ ಮತ್ತು ಅರಭಾವಿಯಲ್ಲಿ ನಮಗೆ ಕಷ್ಟವಿಲ್ಲ. ನಮ್ಮ ಮನೆತನದ ಬೆಂಬಲಿಗರು ಬಹಳಷ್ಟಿದ್ದಾರೆ. ಬೇರೆ ಕ್ಷೇತ್ರಗಳಲ್ಲಿ ಪ್ರಚಾರ ಮಾಡುವಂತೆ ನಾಯಕರಿಗೆ ಕೋರಿದ್ದೆ
> **ಸತೀಶ ಜಾರಕಿಹೊಳಿ,** ಕಾಂಗ್ರೆಸ್ ಅಭ್ಯರ್ಥಿ

> ಸತೀಶ ಜಾರಕಿಹೊಳಿ ಬಹಳ ಸಮರ್ಥರಿದ್ದಾರೆ. ಗೋಕಾಕದಲ್ಲಿ ಅವರಿಗೆ ಹೆಚ್ಚು ಬೆಂಬಲವಿದೆ. ಹೀಗಾಗಿಯೇ ನಾವು ಅಲ್ಲಿಗೆ ಪ್ರಚಾರಕ್ಕೆ ಹೋಗಲಿಲ್ಲ
> **ಎಂ.ಬಿ. ಪಾಟೀಲ** ಕ್ಷೇತ್ರದ ಚುನಾವಣಾ ಉಸ್ತುವಾರಿ, ಕಾಂಗ್ರೆಸ್

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣ ರಾಜ್ಯ ರಾಜಕಾರಣದಲ್ಲಿ ಭಾರಿ ಸದ್ದು ಮಾಡಿತು. ಹಲ ಬಗೆಯ ವಿಶ್ಲೇಷಣೆ ಮತ್ತು ಚರ್ಚೆಗಳಿಗೂ ಕಾರಣವಾಯಿತು. ಈ ವಿಷಯವನ್ನು ಕಾಂಗ್ರೆಸ್ ನಾಯಕರು ವಿಧಾನಮಂಡಲ ಅಧಿವೇಶನದಲ್ಲೂ ಪ್ರಸ್ತಾಪಿಸಿದ್ದರು. ಆದರೆ, ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮಾತ್ರ ಸದ್ದಾಗುತ್ತಲೇ ಇಲ್ಲ.

ಕಾಂಗ್ರೆಸ್‌ನವರು ಸಿ.ಡಿ. ಪ್ರಕರಣ ಮುಂದಿಟ್ಟುಕೊಂಡು ಉಪ ಚುನಾವಣೆಯಲ್ಲಿ ಮತಯಾಚಿಸಿ, ಲಾಭ ಪಡೆಯಲು ಯತ್ನಿಸಬಹುದು ಎಂಬ ರಾಜಕೀಯ ವಿಶ್ಲೇಷಕರ ನಿರೀಕ್ಷೆಗಳು ಹುಸಿಯಾದವು. ಏಕೆಂದರೆ, ಕಾಂಗ್ರೆಸ್ ನಾಯಕರು ಪ್ರಚಾರ ಸಭೆಗಳಲ್ಲಿ ಆ ವಿಷಯವನ್ನು ಪ್ರಸ್ತಾಪಿಸುತ್ತಲೇ ಇಲ್ಲ. ರಮೇಶ ಜಾರಕಿಹೊಳಿ ವಿರುದ್ಧ ನೇರ ಅಥವಾ ಪರೋಕ್ಷವಾಗಿಯೂ ಮಾತನಾಡುತ್ತಿಲ್ಲ.

ಮುಜುಗರ ಆಗದಿರಲೆಂದು ನಿರ್ಧಾರ: ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಗೋಕಾಕ ಹಾಗೂ ಅರಭಾವಿ ಕ್ಷೇತ್ರಗಳೂ ಸೇರಿವೆ. ಗೋಕಾಕನ್ನು ರಮೇಶ ಜಾರಕಿಹೊಳಿ ಪ್ರತಿನಿಧಿಸಿದರೆ, ಅರಭಾವಿಯಲ್ಲಿ ಅವರ ಸಹೋದರ ಬಾಲಚಂದ್ರ ಜಾರಕಿಹೊಳಿ ಶಾಸಕರಾಗಿದ್ದಾರೆ. ಇಬ್ಬರೂ ಬಿಜೆಪಿಯಲ್ಲಿದ್ದಾರೆ. ಇವರಿಬ್ಬರ ಸಹೋದರ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಸತೀಶ ಜಾರಕಿಹೊಳಿ ಕಾಂಗ್ರೆಸ್‌ನ ಅಭ್ಯರ್ಥಿ ಆಗಿದ್ದಾರೆ.

'ಅವರಿಗೆ ಮುಜುಗರ ಉಂಟು ಮಾಡಬಾರದೆಂಬ ಕಾರಣಕ್ಕೆ ಸಿ.ಡಿ. ಪ್ರಕರಣವನ್ನು ಪ್ರಸ್ತಾಪಿಸದಿರಲು ಕಾಂಗ್ರೆಸ್ ಪಕ್ಷದ ವೇದಿಕೆಯಲ್ಲಿ ನಿರ್ಣಯಿಸಲಾಗಿತ್ತು. ತಾವು ಸ್ಪರ್ಧಿಸಬೇಕೆಂದರೆ, ಸಿ.ಡಿ. ಪ್ರಕರಣದ ವಿಷಯ ಚರ್ಚಿಸಬಾರದು ಎಂಬ ಷರತ್ತನ್ನು ಸತೀಶ ಜಾರಕಿಹೊಳಿ ವಿಧಿಸಿದ್ದರು. ಅಲ್ಲದೇ, ಗೋಕಾಕ ಮತ್ತು ಅರಭಾವಿಯ ಜವಾಬ್ದಾರಿ ತಮಗೇ ಬಿಡಬೇಕು ಎಂದು ವರಿಷ್ಠರ ಎದುರು ತಿಳಿಸಿದ್ದರು. ಹೀಗಾಗಿ, ರಾಜ್ಯ ನಾಯಕರು ಸಿ.ಡಿ. ವಿಚಾರವನ್ನು ಪ್ರಸ್ತಾಪಿಸುತ್ತಿಲ್ಲ' ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

ಹೋಗಲೇ ಇಲ್ಲ: ಕ್ಷೇತ್ರದ ವಿವಿಧೆಡೆ ಅಬ್ಬರದ ಪ್ರಚಾರ ನಡೆಸಿದ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮೊದಲಾದ ನಾಯಕರು ಗೋಕಾಕ ಮತ್ತು ಅರಭಾವಿ ಕ್ಷೇತ್ರದಲ್ಲಿ ಪ್ರಚಾರಕ್ಕೆ ಹೋಗುತ್ತಿಲ್ಲ. ಕೆಪಿಸಿಸಿ ವಕ್ತಾರೆಯೂ ಆಗಿರುವ ಗ್ರಾಮೀಣ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರನ್ನೂ ಆ ಕ್ಷೇತ್ರಗಳಿಂದ ದೂರವಿಡಲಾಗಿದೆ. ಅಲ್ಲಿ ಸತೀಶ ಏಕಾಂಗಿಯಾಗಿ ಪ್ರಚಾರ ಮಾಡಿದ್ದಾರೆ. ಸಹೋದರ ಲಖನ್ ಜಾರಕಿಹೊಳಿ ಕೂಡ ಸಾಥ್ ಕೊಟ್ಟಿಲ್ಲ.

ಮತದಾನಕ್ಕೆ ಕೆಲವೇ ದಿನಗಳು ಬಾಕಿ ಉಳಿದಿವೆ. ಹೀಗಿದ್ದರೂ, ಗೋಕಾಕದಲ್ಲಿ ರಮೇಶ ಹಾಗೂ ಅರಭಾವಿಯಲ್ಲಿ ಬಾಲಚಂದ್ರ ಪ್ರಚಾರ ನಡೆಸಿಲ್ಲ. ಅವರು ರಾಜಕಾರಣ ಆರಂಭಿಸಿದಾಗಿನಿಂದ ಪ್ರಚಾರದಿಂದ ದೂರ ಉಳಿದದ್ದು ಇದೇ ಮೊದಲು. ರಮೇಶ ಅವರಿಗೆ ಏ.1ರಂದು ಕೋವಿಡ್–19 ದೃಢಪಟ್ಟಿತ್ತು. ಚಿಕಿತ್ಸೆ ಪಡೆದು ಹೋಂ ಕ್ವಾರಂಟೈನ್‌ನಲ್ಲಿದ್ದಾರೆ. ಅದಕ್ಕಿಂತ ಮುಂಚೆಯೇ ಚುನಾವಣೆ ಘೋಷಣೆಯಾಗಿತ್ತಾದರೂ, ಸಿ.ಡಿ. ಪ್ರಕರಣದಿಂದಾಗಿ ಅವರು ಕ್ಷೇತ್ರಕ್ಕೆ ಬಂದಿರಲಿಲ್ಲ. ಬಾಲಚಂದ್ರ ಕೂಡ ಅವರ ಕ್ಷೇತ್ರದಲ್ಲಿ ಕಾಣಿಸಿಕೊಂಡಿಲ್ಲ. ಬಿಜೆಪಿ ನಾಯಕರ ದಂಡೇ ಅಲ್ಲಿ ಪ್ರಚಾರ ನಡೆಸಿದೆ. ಜಾರಕಿಹೊಳಿ ಸಹೋದರರ ಮೌನ ಯಾರಿಗೆ ಲಾಭವಾಗಲಿದೆ, ಯಾರಿಗೆ ಅನುಕೂಲ ತರಲಿದೆ ಎನ್ನುವುದು ಜನರ ಕುತೂಹಲಕ್ಕೆ ಕಾರಣವಾಗಿದೆ.

ಸಂಕ್ಷಿಪ್ತ ಸುದ್ದಿ

ಜೆಡಿಎಸ್ ತೊರೆದು ಮತ್ತೆ ಬಿಜೆಪಿಗೆ ಪ್ರಕಾಶ ಖಂಡ್ರೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕಳೆದ ವಿಧಾನಸಭಾ ಚುನಾವಣೆ ನಂತರ ರಾಜಕೀಯದಿಂದ ದೂರ ಉಳಿದಿದ್ದ ಭಾಲ್ಕಿ ಮಾಜಿ ಶಾಸಕ ಪ್ರಕಾಶ ಖಂಡ್ರೆ ಅವರು ಜೆಡಿಎಸ್ ತೊರೆದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣಸಿಂಗ್ ಸಮ್ಮುಖದಲ್ಲಿ ಭಾನುವಾರ ಮತ್ತೆ ಬಿಜೆಪಿ ಸೇರ್ಪಡೆಯಾದರು.

ಪ್ರಕಾಶ ಖಂಡ್ರೆ 1999 ರಿಂದ 2018ರವರೆಗೆ ಬಿಜೆಪಿಯಲ್ಲಿ ಇದ್ದರು. ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ, ರಾಜ್ಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮೂರು ವರ್ಷಗಳ ಬಳಿಕ ಉಪ ಚುನಾವಣೆ ಸಂದರ್ಭದಲ್ಲಿ ಮತ್ತೆ ತಮ್ಮ ಬೆಂಬಲಿಗರೊಂದಿಗೆ ಅವರು ಬಿಜೆಪಿ ಸೇರಿರುವುದು ರಾಜಕೀಯವಾಗಿ ಮಹತ್ವ ಪಡೆದಿದೆ. ಪಕ್ಷ ತೊರೆಯದಂತೆ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಮನವೊಲಿಸಲು ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ.

ಭ್ರಷ್ಟಾಚಾರ ಜನತಾ ಪಾರ್ಟಿ: ಸಿದ್ದರಾಮಯ್ಯ

ಮುದಗಲ್ (ರಾಯಚೂರು): 'ಬಿಜೆಪಿ ಭ್ರಷ್ಟಾಚಾರದ ಸರ್ಕಾರವಾಗಿದೆ. ಬಿ ಎಂದರೆ ಭ್ರಷ್ಟಾಚಾರ, ಜೆಪಿ ಎಂದರೆ ಜನತಾ ಪಾರ್ಟಿ, ಭ್ರಷ್ಟಾಚಾರದಲ್ಲಿ ತೊಡಗಿರುವ ಪಕ್ಷವಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಟೀಕಿಸಿದರು.

ಮಸ್ಕಿ ಪಟ್ಟಣದ ಹೆಲಿಪ್ಯಾಡ್‌ನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅವರದ್ದೇ ಪಕ್ಷದ ಬಸನಗೌಡ ಯತ್ನಾಳ ಅವರು ಸಿಎಂ ಕುರಿತಾದ ಮಾತುಗಳನ್ನಾಡುತ್ತಿದ್ದಾರೆ. ಯಡಿಯೂರಪ್ಪ ಮನೆಗೆ ಹೋಗುತ್ತಾರೆ. ಅವರು ಮತ್ತು ಇಡೀ ಅವರ ಕುಟುಂಬ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದಿದ್ದಾರೆ' ಎಂದು ತಿಳಿಸಿದರು.

'ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ಬಿಜೆಪಿಯವರು ದುಡ್ಡು ಹಂಚಿ ಮತ ಕೇಳುತ್ತಿದ್ದಾರೆ. ಇದನ್ನು ನೋಡಿಕೊಂಡು ಕಾಂಗ್ರೆಸ್ ಸುಮ್ಮನೆ ಕೂರದು. ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸುವರು' ಎಂದು ಹೇಳಿದರು.

ಬಿಜೆಪಿ ಪರ ಚುನಾವಣಾ ಪ್ರಚಾರಕ್ಕೆ ಖ್ಯಾತ ಗಾಯಕಿ 'ಮಂಗ್ಲಿ'

ಮಂಗ್ಲಿ

ಮಸ್ಕಿ (ರಾಯಚೂರು ಜಿಲ್ಲೆ): 'ಕಣ್ಣೇ ಅದರಿಂದಿ..' ಹಾಡಿನಿಂದ ಹೆಚ್ಚು ಜನಪ್ರಿಯತೆ ಪಡೆದಿರುವ ತೆಲುಗು ಸಿನಿಮಾದ ಹಿನ್ನೆಲೆ ಗಾಯಕಿ ಮಂಗ್ಲಿ ಅವರು ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಪರ ಚುನಾವಣಾ ಪ್ರಚಾರ ಮಾಡುವುದಕ್ಕೆ ಏಪ್ರಿಲ್ 13 ರಂದು ಮಸ್ಕಿಗೆ ಬರಲಿದ್ದಾರೆ.

ಕನ್ನಡದ 'ರಾಬರ್ಟ್' ಚಲನಚಿತ್ರದಲ್ಲಿ 'ಕಣ್ಣು ಹೊಡೆಯಾಕ್..' ಎಂಬ ಹಾಡನ್ನು ತೆಲುಗು ಭಾಷೆಯಲ್ಲಿ ಮಂಗ್ಲಿ ಹಾಡಿದ್ದಾರೆ. ಆ ಹಾಡು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದೆ.

ಉಪ ಚುನಾವಣೆ ಬಳಿಕ ಸರ್ಕಾರ ಪತನ: ಸುರ್ಜೇವಾಲ

ಬೆಳಗಾವಿ: 'ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಫಲಿತಾಂಶ ಕರ್ನಾಟಕದ ಬಿಜೆಪಿ ಸರ್ಕಾರದ ಪತನಕ್ಕೆ ಮುನ್ನುಡಿ ಆಗುತ್ತದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹೇಳಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ದೇಶ ಮತ್ತು ಕರ್ನಾಟಕದಲ್ಲಿ ಬದಲಾವಣೆ ಆಗುವುದು ಗೋಡೆ ಮೇಲಿನ ಬರಹದಷ್ಟೆ ಸ್ಪಷ್ಟವಾಗಿದೆ. ಭ್ರಷ್ಟಾಚಾರದಲ್ಲಿ ತೊಡಗಿರುವ ನಾಲಾಯಕ್ ಸರ್ಕಾರ ಬದಲಾಯಿಸಲು ಜನ ಕಾಯುತ್ತಿದ್ದಾರೆ' ಎಂದು ಹೇಳಿದರು.

ಸಿದ್ದರಾಮಯ್ಯ ಕಾಂಗ್ರೆಸ್‌ನಿಂದ ಹೊರಬರುತ್ತಾರೆ: ಕಟೀಲ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ನಡೆದಿರುವ ಮೂರು ಕ್ಷೇತ್ರಗಳ ಉಪ ಚುನಾವಣೆ ಬಳಿಕ ಕಾಂಗ್ರೆಸ್‌ನಿಂದ ಹೊರಬರುತ್ತಾರೆ. ಒಂದು ವರ್ಷವೂ ಅಲ್ಲಿರುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಒಳಜಗಳ ಬೀದಿಗೆ ಬಂದಿದೆ. ನಾನೇ ಮುಂದಿನ ಮುಖ್ಯಮಂತ್ರಿ ಆಗುತ್ತೇನೆ ಎಂಬ ದುರಹಂಕಾರದಿಂದ ಸಿದ್ದರಾಮಯ್ಯ ಓಡಾಡುತ್ತಿದ್ದಾರೆ. ಅವರನ್ನು ಕಾಂಗ್ರೆಸ್‌ನಿಂದ ಹೊರಹಾಕಲು ಡಿ.ಕೆ. ಶಿವಕುಮಾರ್ ಮೊದಲಾದ ಕಾಂಗ್ರೆಸ್ ನಾಯಕರು ಒಗ್ಗಟ್ಟಾಗಿದ್ದಾರೆ. ನಾನಿಲ್ಲದ ಕಾಂಗ್ರೆಸ್ ಉಳಿಯಬಾರದು ಎನ್ನುವುದು ಸಿದ್ದರಾಮಯ್ಯ ಯೋಚನೆಯಾಗಿದೆ. ಹೀಗಾಗಿ, ಡಿಕೆಶಿ ಅಧ್ಯಕ್ಷರಾಗಿದ್ದಾಗ ಯಾವುದೇ ಉಪ ಚುನಾವಣೆ ಗೆಲ್ಲಬಾರದು ಎಂದು ನೋಡಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದರು.

'ರಾಜರಾಜೇಶ್ವರಿ ಮತ್ತು ಶಿರಾ ಉಪ ಚುನಾವಣೆಯಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಮಗೆ ಉಪಕಾರ ಮಾಡಿದ್ದರು. ಈಗ ನಡೆದಿರುವ ಉಪ ಚುನಾವಣೆಗಳಲ್ಲೂ ಅವರ ಪ್ರಯತ್ನದಿಂದಾಗಿಯೇ ಗೆಲ್ಲುತ್ತೇವೆ. ಈ ಇಬ್ಬರು ಮಹಾನಾಯಕರು ಈ ಭಾಗದ ನಾಯಕ ಸತೀಶ ಜಾರಕಿಹೊಳಿ ಅವರನ್ನು ಮುಗಿಸಲೆಂದು ಒಗ್ಗಟ್ಟಾಗಿದ್ದಾರೆ' ಎಂದು ಟೀಕಿಸಿದರು.

'ಏ.17ರಿಂದ ನಾಯಕತ್ವ ಬದಲಾವಣೆ ಪ್ರಕ್ರಿಯೆ ಶುರು' ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಅವರಿಗೆ ನೋಟಿಸ್ ನೀಡಿದ್ದು, ಪಕ್ಷ ಕ್ರಮ ಕೈಗೊಳ್ಳುತ್ತದೆ. 3 ಬಾರಿ ನೋಟಿಸ್ ನೀಡಲಾಗಿದೆ. ಪಕ್ಷದ ಬಿ ಫಾರಂ ಮೇಲೆ ಗೆದ್ದು ಶಾಸಕರಾದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೆಲವು ನಿಯಮ ಅನುಸರಿಸಬೇಕಾಗುತ್ತದೆ. ಅವರ ಜವಾಬ್ದಾರಿ ತಿಳಿಸಿಕೊಡುವ ಕೆಲಸ ನಡೆದಿದೆ' ಎಂದು ಹೇಳಿದರು.

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ವಿರುದ್ಧವೂ ಯತ್ನಾಳ್ ವಾಗ್ದಾಳಿ ನಡೆಸಿದ್ದಾರಲ್ಲಾ ಎಂಬ ಪ್ರಶ್ನೆಗೆ, 'ಅವರು ಸಿದ್ಧವಿದ್ದರೆ ಪಕ್ಷ ಏನು ಮಾಡಬೇಕೋ ಅದನ್ನು ಮಾಡುತ್ತದೆ. ಅವರಿಗೆ ನೋಟಿಸ್ ಯಾವುದು, ಲವ್ ಲೆಟರ್ ಯಾವುದು ಎನ್ನುವುದು ಗೊತ್ತಿಲ್ಲದಿದ್ದರೆ ಏನು ಮಾಡುವುದು?' ಎಂದು ಕೇಳಿದರು.

'ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ನಾಯಕತ್ವದ ಬದಲಾವಣೆ ಇಲ್ಲ' ಎಂದರು.

'ಅನುಕಂಪದಲ್ಲೂ ತಾರತಮ್ಯವೇ?' ಎಂಬ ಪ್ರಶ್ನೆಗೆ, 'ತೇಜಸ್ವಿನಿ ಅನಂತ್ ಕುಮಾರ್ ವಿಷಯದಲ್ಲಿ, ಅದು ಸಾರ್ವತ್ರಿಕ ಚುನಾವಣೆ ಆಗಿತ್ತು. ಬೆಳಗಾವಿಯದ್ದು ಉಪ ಚುನಾವಣೆ. ದಿವಂಗತ ಸುರೇಶ ಅಂಗಡಿ ನೀಡಿದ್ದ ಕೊಡುಗೆ ಪರಿಗಣಿಸಿ ಟಿಕೆಟ್ ಕೊಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಇಂಥ ನಿರ್ಧಾರ ಮಾಡಬೇಕಾಗುತ್ತದೆ. ನಿಷ್ಠಾವಂತ ಕಾರ್ಯಕರ್ತರಿಗೆ ಅನ್ಯಾಯವಾದರೆ ಸರಿಪಡಿಸುವ ಕೆಲಸವೂ ನಡೆದಿದೆ' ಎಂದು ಸಮರ್ಥಿಸಿಕೊಂಡರು.

'ಗೋಲಿಬಾರ್ ಬಿಜೆಪಿಗೆ ಮುಳುವಾಗುವ ಸಾಧ್ಯತೆ'

ಡಾರ್ಜಿಲಿಂಗ್ (ಪಿಟಿಐ): ಕೂಚ್ ಬಿಹಾರ್‌ನ ಜೋರೆಪಟ್ಕಿ ಗೋಲಿಬಾರ್ ಹತ್ಯೆಯು, ಈ ಪ್ರದೇಶದಲ್ಲಿ ಬಿಜೆಪಿಗೆ ಮುಳುವಾಗುವ ಸಾಧ್ಯತೆ ಇದೆ. ಈ ಪ್ರದೇಶದಲ್ಲಿ ಬಿಜೆಪಿ ತನ್ನ ನೆಲೆ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಜೋರೆಪಟ್ಕಿ ಗೋಲಿಬಾರ್‌ನಲ್ಲಿ ಮೃತಪಟ್ಟವರು ಗೂರ್ಖಾ ಸಮುದಾಯದವರು ಎನ್ನಲಾಗಿದೆ. ಪಶ್ಚಿಮ ಬಂಗಾಳದ ಉತ್ತರದ ಜಿಲ್ಲೆಗಳಲ್ಲಿ ಗೂರ್ಖಾ ಜನರ ಪ್ರಾಬಲ್ಯವಿದೆ. ಈ ಜಿಲ್ಲೆಗಳಲ್ಲಿ ಇನ್ನೂ ಮತದಾನ ನಡೆಯಬೇಕಿದೆ. ಶನಿವಾರ ಕೆಲವು ಕ್ಷೇತ್ರಗಳಲ್ಲಿ ಮಾತ್ರ ಮತದಾನ ನಡೆದಿದೆ. ಉಳಿದ ಕ್ಷೇತ್ರಗಳಲ್ಲಿ ಗೂರ್ಖಾ ಜನರೇ ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಅಲ್ಲೆಲ್ಲಾ ಬಿಜೆಪಿ ವಿರುದ್ಧ ಮತ ಚಲಾವಣೆಯಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಗೂರ್ಖಾ ಜನಮುಕ್ತಿ ಮೋರ್ಚಾದ ಒಂದು ಬಣದ ಅಧ್ಯಕ್ಷ ವಿಮಲ್ ಗುರುಂಗ್ ಅವರು ಈಗ ಬಿಜೆಪಿ ವಿರುದ್ಧ ಮತ ಚಲಾಯಿಸುವಂತೆ ಕರೆ ನೀಡಿದ್ದಾರೆ. 2017ರಲ್ಲಿ ಪ್ರತ್ಯೇಕ ಗೂರ್ಖಾಲ್ಯಾಂಡ್ ಹೋರಾಟದ ಹತ್ಯಾಕಾಂಡದಲ್ಲಿ ನೂರಾರು ಜನರು ಮೃತಪಟ್ಟಿದ್ದರು. ಟಿಎಂಸಿ ಈ ಹತ್ಯಾಕಾಂಡ ನಡೆಸಿದೆ ಎಂದು ಆರೋಪಿಸಿ ಗೂರ್ಖಾ ಜನಮುಕ್ತಿ ಮೋರ್ಚಾವು, ಆಗ ಸಂಪೂರ್ಣವಾಗಿ ಬಿಜೆಪಿಗೆ ಬೆಂಬಲ ನೀಡಿ ಎನ್‌ಡಿಎ ಸೇರಿತ್ತು. ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ವಿಮಲ್ ಗುರುಂಗ್ ಮೇಲೆ 150ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಹೀಗಾಗಿ ಅವರು ತಲೆಮರೆಸಿಕೊಂಡಿದ್ದರು. ಗುರುಂಗ್ ಅವರು ತಲೆಮರೆಸಿಕೊಂಡಿದ್ದರೂ, 2019ರ ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡುವಂತೆ ಕರೆ ನೀಡಿದ್ದರು. ಹೀಗಾಗಿ 2019ರ ಲೋಕಸಭಾ ಚುನಾವಣೆಯಲ್ಲಿ ಗೂರ್ಖಾ ಪ್ರಾಬಲ್ಯವಿರುವ 8 ಲೋಕಸಭಾ ಕ್ಷೇತ್ರಗಳಲ್ಲಿ, 7ರಲ್ಲಿ ಬಿಜೆಪಿ ಜಯಗಳಿಸಿತ್ತು.

'2019ರಲ್ಲಿ ಗೂರ್ಖಾ ಪ್ರಾಬಲ್ಯದ ಪ್ರದೇಶದ 8 ಕ್ಷೇತ್ರಗಳಲ್ಲೂ ಟಿಎಂಸಿ ಸೋಲುಂಡಿತ್ತು. ಈಗ ಬಿಜೆಪಿಗೂ ಅದೇ ಗತಿ ಆಗಲಿದೆ. ಈ ಪ್ರದೇಶದಲ್ಲಿ ಬಿಜೆಪಿಯನ್ನು ಬೇರು ಸಮೇತ ಕಿತ್ತೊಗೆಯುತ್ತೇವೆ' ಎಂದು ವಿಮಲ್ ಗುರುಂಗ್ ಹೇಳಿದ್ದಾರೆ. ಗೂರ್ಖಾ ಪ್ರಾಬಲ್ಯದ 15 ಕ್ಷೇತ್ರಗಳಲ್ಲಿ ವಿಮಲ್ ಅವರ ನೇರ ಹಿಡಿತವಿದೆ.

'ಪ್ರತ್ಯೇಕ ಗೂರ್ಖಾಲ್ಯಾಂಡ್ ನೀಡುತ್ತೇವೆ ಎಂದು ಭರವಸೆ ನೀಡಿದ್ದರಿಂದ ನಾವು ಬಿಜೆಪಿಗೆ ಬೆಂಬಲ ನೀಡಿದ್ದೆವು. ಬಿಜೆಪಿ ತನ್ನ ಮಾತು ಉಳಿಸಿಕೊಳ್ಳದೆ, ನಮ್ಮನ್ನು ವಂಚಿಸಿತು. ಆದರೆ ನಮ್ಮ ಸಮಸ್ಯೆಗೆ ಶಾಶ್ವತ ರಾಜಕೀಯ ಪರಿಹಾರ ಒದಗಿಸುವುದಾಗಿ ಮಮತಾ ಬ್ಯಾನರ್ಜಿ ಅವರು ಹೇಳಿದ್ದಾರೆ. ಹೀಗಾಗಿ ಟಿಎಂಸಿಗೆ ಬೆಂಬಲ ನೀಡುತ್ತೇವೆ' ಎಂದು ಹೇಳಿದ್ದಾರೆ.

ಗೋಲಿಬಾರ್: ಕಪ್ಪು ಪಟ್ಟಿ ಕಟ್ಟಿ ಅಂತ್ಯಕ್ರಿಯೆ

ಸೀತಾಲಕುಚಿ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳದ ಸೀತಾಲಕುಚಿಯ ಜೋರೆಪಟ್ಕಿ ಗ್ರಾಮದ ಮತಗಟ್ಟೆಯಲ್ಲಿ ಶನಿವಾರ ಮತದಾನದ ವೇಳೆ ನಡೆದ ಗೋಲಿಬಾರ್‌ನಲ್ಲಿ ಮೃತಪಟ್ಟ ಐವರ ಅಂತ್ಯಕ್ರಿಯೆ ಭಾನುವಾರ ಇಲ್ಲಿ ನಡೆಯಿತು. 'ಸುಮ್ಮನೆ ಸರದಿಯಲ್ಲಿ ನಿಂತಿದ್ದವರ ಮೇಲೆ ಭದ್ರತಾ ಸಿಬ್ಬಂದಿ ಗುಂಡಿನ ದಾಳಿ ನಡೆಸಿದ್ದಾರೆ. ಈ ಹತ್ಯೆಗೆ ಕಾರಣವಾದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನ್ಯಾಯ ಒದಗಿಸಬೇಕು' ಎಂದು ಜೋರೆಪಟ್ಕಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಗೋಲಿಬಾರ್‌ನಲ್ಲಿ ನಾಲ್ವರು ಶನಿವಾರ ಮೃತಪಟ್ಟಿದ್ದರು. ಗಾಯಗೊಂಡಿದ್ದ ಒಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಶನಿವಾರ ನಡೆದ ಗೋಲಿಬಾರ್ ಹತ್ಯೆಗಳಿಗೆ ಈಗ ರಾಜಕೀಯ ಬಣ್ಣ ಬಂದಿದೆ. ಈ ಹತ್ಯೆಗೆ ಟಿಎಂಸಿ ಕಾರಣ ಎಂದು ಬಿಜೆಪಿ ಆರೋಪಿಸಿದೆ. ಬಿಜೆಪಿಯೇ ಇದಕ್ಕೆ ಕಾರಣ ಎಂದು ಟಿಎಂಸಿ ಆರೋಪಿಸಿದೆ. ಆದರೆ ಮೃತರ ಗ್ರಾಮದಲ್ಲಿ ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಮೃತರು ಗೂರ್ಖಾ ಸಮುದಾಯಕ್ಕೆ ಸೇರಿದವರಾಗಿದ್ದು, ಈ ಚುನಾವಣೆಯಲ್ಲಿ ಬಿಜೆಪಿಗೆ ಇದು ಪ್ರತಿಕೂಲವಾಗಿ ಪರಿಣಮಿಸಲಿದೆ ಎಂದು ಗೂರ್ಖಾ ಜನಮುಕ್ತಿ ಮೋರ್ಚಾದ ಅಧ್ಯಕ್ಷ ವಿಮಲ್ ಗುರುಂಗ್ ಹೇಳಿದ್ದಾರೆ.

ಗ್ರಾಮದ ಶಾಲೆಯಲ್ಲಿ ಮೃತರ ಶವಗಳನ್ನು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಶವಗಳಿಗೆ ಟಿಎಂಸಿಯ ಧ್ವಜವನ್ನು ಹೊದಿಸಲಾಗಿತ್ತು. ಟಿಎಂಸಿ ಕಾರ್ಯಕರ್ತರೇ ಮುಂದಾಳತ್ವ ವಹಿಸಿ ಅಂತ್ಯಸಂಸ್ಕಾರ ನಡೆಸಿದರು. ಐದೂ ಜನರ ಶವಗಳನ್ನು ಗ್ರಾಮದ ಸುತ್ತಲೂ ಮೆರವಣಿಗೆ ಮಾಡಲಾಯಿತು. ಗ್ರಾಮದ ಎಲ್ಲಾ ಜನರೂ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಹಣೆಗೆ, ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಳ್ಳುವ ಮೂಲಕ ಈ ಹತ್ಯೆಗಳನ್ನು ಖಂಡಿಸಿದರು. ಮೆರವಣಿಗೆಯಲ್ಲಿ ಕಪ್ಪು ಬಾವುಟವನ್ನು ಪ್ರದರ್ಶಿಸಲಾಯಿತು.

'ನನ್ನ ಅಣ್ಣ ಸಾಲಿನಲ್ಲಿ ನಿಂತಿದ್ದ. ಅವನ ಮೇಲೆ ಯೋಧರು ಸುಮ್ಮನೆ ಗುಂಡು ಹಾರಿಸಿದರು. ಅವನು ಸತ್ತುಬಿದ್ದ. ಅವನಿಗೆ ಒಂದು ಮಗುವಿದೆ. ಹೆಂಡತಿ ಗರ್ಭಿಣಿ. ನಮ್ಮ ಮನೆಯವರೆಲ್ಲಾ ಆಘಾತದಲ್ಲಿ ಇದ್ದೇವೆ' ಎಂದು ಮೃತ ವ್ಯಕ್ತಿಯೊಬ್ಬರ ಸೋದರ ಅಳಲು ತೋಡಿಕೊಂಡಿದ್ದಾರೆ.

ಹೊರಗಿನ ರಾಜಕಾರಣಿಗಳು ಕೂಚ್‌ಬಿಹಾರ್ ಜಿಲ್ಲೆಗೆ ಪ್ರವೇಶಿಸಿರುವುದನ್ನು ತಾತ್ಕಾಲಿಕವಾಗಿ ನಿಷೇಧಿಸಿರುವ ಕಾರಣ, ಮೃತರ ಕುಟುಂಬದವರ ಜತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಫೋನಿನ ಮೂಲಕ ಮಾತನಾಡಿದ್ದಾರೆ. ಸಂತ್ರಸ್ತ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಸಿಲಿಗುರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಮತಾ ಬ್ಯಾನರ್ಜಿ ಅವರು, ಸೀತಾಲಕುಚಿ ಗೋಲಿಬಾರ್ ಹತ್ಯೆ ಸಂತ್ರಸ್ತರ ಕುಟುಂಬದ ಜತೆ ವಿಡಿಯೊ ಕರೆಯಲ್ಲಿ ಮಾತನಾಡಿದರು ಪಿಟಿಐ ಚಿತ್ರ

'ಬಿಜೆಪಿ ಕಿತ್ತೊಗೆಯುತ್ತೇವೆ'

'ಮತದಾನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದವರ ಮೇಲೆ ಗೋಲಿಬಾರ್ ನಡೆಸಿದ್ದು, ಹತ್ಯಾಕಾಂಡವಲ್ಲದೆ ಮತ್ತೇನಲ್ಲ. ಬಿಜೆಪಿ ಈ ಹತ್ಯಾಕಾಂಡವನ್ನು ನಡೆಸಬಾರದಿತ್ತು. ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಇದು ಅತ್ಯಂತ ಪ್ರಮುಖ ತಿರುವು. ಬಿಜೆಪಿಯನ್ನು ನಾವು ಈ ಪ್ರದೇಶದಿಂದ ಕಿತ್ತೊಗೆಯುತ್ತೇವೆ' ಎಂದು ಗೂರ್ಖಾ ಜನಮುಕ್ತಿ ಮೋರ್ಚಾದ ಒಂದು ಬಣದ ಅಧ್ಯಕ್ಷ ವಿಮಲ್ ಗುರುಂಗ್ ಹೇಳಿದ್ದಾರೆ.

'ಗೂರ್ಖಾ ಜನರ ಮೇಲೆ ಭದ್ರತಾ ಸಿಬ್ಬಂದಿ ಗೋಲಿಬಾರ್ ನಡೆಸಿದ್ದಾರೆ. ನಮ್ಮ ಸಮುದಾಯದವರ ಪ್ರಾಬಲ್ಯವಿರುವ ಎಂಟು ಜಿಲ್ಲೆಗಳಲ್ಲಿ ಇನ್ನೂ ನಾಲ್ಕು ಹಂತದಲ್ಲಿ ಮತದಾನ ನಡೆಯಬೇಕಿದೆ. ಬಿಜೆಪಿಯನ್ನು ಈ ಚುನಾವಣೆಯಲ್ಲಿ ಬೇರು ಸಮೇತ ಕಿತ್ತೊಗೆಯುತ್ತೇವೆ. ನಮ್ಮ ಜನರೆಲ್ಲರೂ ಬಿಜೆಪಿ ವಿರುದ್ಧ ಮತ ಚಲಾಯಿಸಬೇಕು' ಎಂದು ಅವರು ಕರೆ ನೀಡಿದ್ದಾರೆ.

ನುಡಿ–ಕಿಡಿ

ಸೀತಾಲಕುಚಿ ಹತ್ಯಾಕಾಂಡವು, ಮತದಾರರನ್ನು ಸೆಳೆಯಲು ಬಿಜೆಪಿ ನಡೆಸಿದ ಸಂಚಿನ ಪ್ರತಿಫಲ. ಇದು ಪ್ರಜಾಪ್ರಭುತ್ವದ ಹತ್ಯೆ. ಇದರ ಹೊಣೆ ಹೊತ್ತು ಅಮಿತ್ ಶಾ ರಾಜೀನಾಮೆ ನೀಡಬೇಕು. ಕೇಂದ್ರ ಸರ್ಕಾರವು ಹಾರಿಸಿದ ಪ್ರತಿ ಗುಂಡಿಗೆ ಪ್ರತಿಕ್ರಿಯೆಯಾಗಿ ಒಂದು ಮತ ಚಲಾವಣೆಯಾಗಬೇಕು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ದೀದಿ ನನ್ನ ರಾಜೀನಾಮೆ ಕೇಳುತ್ತಿದ್ದಾರೆ. ಪಶ್ಚಿಮ ಬಂಗಾಳದ ಜನತೆ ರಾಜೀನಾಮೆಗೆ ಆಗ್ರಹಿಸಿದರೆ, ನಾನು ತಲೆಬಾಗಿ ರಾಜೀನಾಮೆ ನೀಡುತ್ತೇನೆ. ಆದರೆ ಮಮತಾ ಅವರು ಮೇ 2ರ ಫಲಿತಾಂಶದ ನಂತರ ತಮ್ಮ ಕುರ್ಚಿಯನ್ನು ಬಿಡಬೇಕಾಗುತ್ತದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

'ಸತ್ಯ ಹತ್ತಿಕ್ಕುವ ಯತ್ನ'

'ಸೀತಾಲಕುಚಿಯಲ್ಲಿ ನಡೆದದ್ದು ಹತ್ಯಾಕಾಂಡ. ಸತ್ಯವನ್ನು ಹತ್ತಿಕ್ಕುವ ಉದ್ದೇಶದಿಂದಲೇ ಚುನಾವಣಾ ಆಯೋಗವು, ಕೂಚ್ ಬಿಹಾರ್‌ಗೆ ರಾಜಕಾರಣಿಗಳ ಪ್ರವೇಶವನ್ನು ನಿಷೇಧಿಸಿದೆ. ಆದರೆ, ನಿಷೇಧ ತೆರವಾದ ದಿನವೇ ನಾನು ಅಲ್ಲಿಗೆ ಭೇಟಿ ನೀಡುತ್ತೇನೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಕೈಗಾರಿಕಾ ಪ್ರದೇಶಗಳು, ವಿಮಾನ ನಿಲ್ದಾಣಗಳ ಭದ್ರತೆ ನೋಡಿಕೊಳ್ಳುವ ಸಿಐಎಸ್‌ಎಫ್‌ಗೆ (ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ) ಜನರನ್ನು ಹೇಗೆ ನಿರ್ವಹಿಸುವುದು ಎಂಬುದು ಗೊತ್ತಿಲ್ಲ. ಈ ಗೋಲಿಬಾರ್‌ನಲ್ಲಿ ಎಲ್ಲಾ ನಿಯಮಗಳನ್ನು ಮೀರಲಾಗಿದೆ. ಘರ್ಷಣೆ ನಡೆದ ಸಂದರ್ಭದಲ್ಲಿ ಮೊದಲು ಲಾಠಿ ಪ್ರಹಾರ, ಆನಂತರ ಅಶ್ರುವಾಯು ಷೆಲ್ ಸಿಡಿಸಬೇಕು. ಆನಂತರ ಜಲಫಿರಂಗಿ, ಅಂತಿಮವಾಗಿ ಗೋಲಿಬಾರ್‌ನ ಮೊರೆ ಹೋಗಬೇಕು. ಆದರೆ ಇಲ್ಲಿ ಏಕಾಏಕಿ ಜನರ ಮೇಲೆ ಗುಂಡು ಹಾರಿಸಲಾಗಿದೆ' ಎಂದು ಮಮತಾ ಆರೋಪಿಸಿದ್ದಾರೆ.

'ಗೋಲಿಬಾರ್‌ನಲ್ಲೂ ಜನರ ಕಾಲಿನ ಭಾಗಕ್ಕೆ ಗುಂಡು ಹಾರಿಸಬೇಕು ಎಂಬ ನಿಯಮವಿದೆ. ಆದರೆ ಇಲ್ಲಿ ಜನರ ಎದೆ ಮತ್ತು ಕತ್ತಿಗೆ ಗುಂಡು ತಗುಲಿದೆ. ಸಿಐಎಸ್‌ಎಫ್ ಸಿಬ್ಬಂದಿ ಜನರ ಎದೆಗೆ ಗುಂಡಿಕ್ಕಿದ್ದಾರೆ. ಇದು ಹತ್ಯಾಕಾಂಡವೇ ಸರಿ. ಈ ಸತ್ಯವನ್ನು ಮುಚ್ಚಿಡಲು ಚುನಾವಣಾ ಆಯೋಗ ಯತ್ನಿಸುತ್ತಿದೆ. ಎಂಸಿಸಿಯನ್ನು (ಮಾಡೆಲ್ ಕೋಡ್ ಆಫ್ ಕಂಡಕ್ಟ್) ಮೋದಿ ಕೋಡ್ ಆಫ್ ಕಂಡಕ್ಟ್ ಎಂದು ಬದಲಿಸಿ' ಎಂದು ಅವರು ಛೀಮಾರಿ ಹಾಕಿದ್ದಾರೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಸಾನಿತಪುರದಲ್ಲಿ ಬಿಜೆಪಿ ಪರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ರೋಡ್ ಷೋ ನಡೆಸಿದರು ಪಿಟಿಐ ಚಿತ್ರ

ಹತ್ಯೆಗೆ ಮಮತಾ ಹೊಣೆ: ಶಾ

'ಸಿಐಎಸ್‌ಎಫ್ ಯೋಧರಿಗೆ ಮುತ್ತಿಗೆ ಹಾಕುವಂತೆ ಮಮತಾ ಬ್ಯಾನರ್ಜಿ ಅವರು ಕರೆನೀಡಿದ್ದರು. ಈ ಮೂಲಕ ಯೋಧರ ಮೇಲೆ ದಾಳಿ ನಡೆಸಲು ಜನರನ್ನು ಉದ್ದೀಪಿಸಿದ್ದರು. ಹಾಗಿದ್ದರೆ, ಈ ಹತ್ಯೆಗೆ ಮಮತಾ ಬ್ಯಾನರ್ಜಿ ಅವರೇ ಹೊಣೆಯಲ್ಲವೇ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದ ಸಾನಿತಪುರದಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ರೋಡ್‌ಷೋ ನಡೆಸಿದ ನಂತರ, ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ಆರೋಪ ಮಾಡಿದ್ದಾರೆ.

'ಇಂತಹ ಸಂದರ್ಭದಲ್ಲೂ ಅವರು ರಾಜಕಾರಣ ಮಾಡುತ್ತಿದ್ದಾರೆ. ಈ ಹಿಂಸಾಚಾರದ ವೇಳೆ ಬಿಜೆಪಿಯ ಆನಂದ್ ಬರ್ಮನ್ ಎಂಬ ಕಾರ್ಯಕರ್ತನೂ ಹತನಾಗಿದ್ದಾನೆ. ರಾಜ್ಯದ ಮುಖ್ಯಮಂತ್ರಿ ಆದವರು, ಅವನ ಬಗ್ಗೆ ಒಂದು ಸಾಂತ್ವನದ ಮಾತೂ ಹೇಳುತ್ತಿಲ್ಲ. ಆದರೆ ಟಿಎಂಸಿಯ ಮೂವರು ಕಾರ್ಯಕರ್ತರ ಕುಟುಂಬದ ಜತೆ ಮಾತನಾಡಿದ್ದಾರೆ. ಮಮತಾ ಬ್ಯಾನರ್ಜಿ ಇಂತಹ ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ' ಎಂದು ಶಾ ಆರೋಪಿಸಿದ್ದಾರೆ.

‘ಚೀನಾ ಲಸಿಕೆಗಳು ಕಡಿಮೆ ಪರಿಣಾಮಕಾರಿ’

ಬೀಜಿಂಗ್ (ಎಪಿ): ಕೋವಿಡ್–19 ವಿರುದ್ಧ ನೀಡಲಾಗುವ ಚೀನಾದ ಲಸಿಕೆಗಳ ಸಾಮರ್ಥ್ಯ ಕಡಿಮೆ ಇದೆ ಎಂದು ಹಿರಿಯ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

‘ಚೀನಾದ ಲಸಿಕೆಗಳು ಅತಿ ಹೆಚ್ಚಿನ ರಕ್ಷಣಾತ್ಮಕ ಸಾಮರ್ಥ್ಯ ಹೊಂದಿಲ್ಲ. ಈ ಲಸಿಕೆಗಳು ಕಡಿಮೆ ಪರಿಣಾಮ ಕಾರಿಯಾಗಿವೆ’ ಎಂದು ಚೀನಾದ ಕಾಯಿಲೆ ನಿಯಂತ್ರಣ ಕೇಂದ್ರದ ನಿರ್ದೇಶಕ ಗೌ ಫು ಅವರು ತಿಳಿಸಿದ್ದಾರೆ.

‘ಈಗಿನ ಪರಿಸ್ಥಿತಿಯಲ್ಲಿ ವಿಭಿನ್ನ ಲಸಿಕೆಗಳನ್ನು ಬಳಕೆ ಮಾಡುವ ಬಗ್ಗೆ ಈಗ ಪರಿಶೀಲನೆ ನಡೆಸಲಾಗುತ್ತಿವೆ’ ಎಂದು ಅವರು ತಿಳಿಸಿದ್ದಾರೆ.

ಪಶ್ಚಿಮ ರಾಷ್ಟ್ರಗಳು ಅಭಿವೃದ್ಧಿಪಡಿಸಿದ ಎಂಆರ್‌ಎನ್‌ಎ ಲಸಿಕೆ ಬಳಕೆ ಬಗ್ಗೆಯೂ ಗೌ ಫು ಪ್ರಸ್ತಾಪಿಸಿದ್ದಾರೆ.

‘ಎಂಆರ್‌ಎನ್‌ಎ ಲಸಿಕೆಯಿಂದ ದೊರೆಯುವ ಪ್ರಯೋಜನಗಳ ಬಗ್ಗೆ ಪ್ರತಿಯೊಬ್ಬರು ಯೋಚಿಸಬೇಕಾಗಿದೆ. ಈಗಾಗಲೇ ನಮ್ಮಲ್ಲಿ ಹಲವು ಲಸಿಕೆಗಳಿವೆ ಎಂದು ಭಾವಿಸಿಕೊಂಡು ಇದನ್ನು ಕಡೆಗಣಿಸಬಾರದು’ ಎಂದು ಗೌ ಹೇಳಿದ್ದಾರೆ.

ಚೀನಾದ ಶಿನೊವ್ಯಾಕ್ ಅಭಿವೃದ್ಧಿಪಡಿಸಿದ ಲಸಿಕೆ ಶೇಕಡ 50.4ರಷ್ಟು ಮಾತ್ರ ಸೋಂಕು ತಡೆಗಟ್ಟಬಹುದು ಎಂದು ಬ್ರೆಜಿಲ್‌ನ ಸಂಶೋಧಕರು ವಿಶ್ಲೇಷಿಸಿದ್ದಾರೆ. ಇದಕ್ಕೆ ಹೋಲಿಸಿದಾಗ ಫೈಜರ್ ಅಭಿವೃದ್ಧಿಪಡಿಸಿದ ಲಸಿಕೆಯು ಶೇಕಡ 97ರಷ್ಟು ಪರಿಣಾಮಕಾರಿಯಾಗಿದೆ ಎಂದು ತಿಳಿಸಿದ್ದಾರೆ.

ಯಾವುದೇ ವಿದೇಶಿ ಲಸಿಕೆಗೆ ಚೀನಾ ಇನ್ನೂ ಅನುಮೋದನೆ ನೀಡಿಲ್ಲ.

ದೇಶದಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ಕೋವಿಡ್ ಪ್ರಕರಣಗಳು • ಉತ್ತರ ಪ್ರದೇಶ, ಬಿಹಾರಕ್ಕೆ ಕಾರ್ಮಿಕರು ವಾಪಸ್

ಲಾಕ್‌ಡೌನ್ ಭೀತಿ: ಮುಂಬೈ ಬಿಟ್ಟ ವಲಸಿಗರು

ಇಂದೋರ್ (ಪಿಟಿಐ): ಕಳೆದ ವರ್ಷದಂತೆ ಈ ವರ್ಷವೂ ಕೋವಿಡ್ ಪ್ರಕರಣಗಳ ತೀವ್ರ ಏರಿಕೆಯಿಂದ ಲಾಕ್‌ಡೌನ್ ಹೇರಲಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿರುವ ಕಾರಣ, ವಲಸೆ ಕಾರ್ಮಿಕರು ಮುಂಬೈ ತೊರೆಯುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ 3ರಲ್ಲಿ ಇಂದೋರ್ ಕಡೆಗೆ ಹೋಗುತ್ತಿರುವ ಜನರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಇವರೆಲ್ಲ ಇಂದೋರ್ ಮೂಲಕ ಉತ್ತರ ಪ್ರದೇಶ, ಬಿಹಾರದ ಕಡೆಗೆ ತೆರಳುತ್ತಿದ್ದಾರೆ.

ಬೈಕ್, ಮಿನಿ ಟ್ರಕ್, ಆಟೊರಿಕ್ಷಾ ಮೊದಲಾದ ವಾಹನಗಳಲ್ಲಿ ಕಾರ್ಮಿಕರು ಗುಂಪು ಗುಂಪಾಗಿ ಸಂಚರಿಸುತ್ತಿರುವ ದೃಶ್ಯ ಕೆಲದಿನಗಳಿಂದ ಕಂಡುಬರುತ್ತಿದೆ.

‘ಮುಂಬೈನಲ್ಲಿ ಕೋವಿಡ್ ಸ್ಥಿತಿ ಹದಗೆಡುತ್ತಿದೆ. ಲಾಕ್‌ಡೌನ್ ಸಾಧ್ಯತೆ ದಟ್ಟವಾಗಿದೆ. ಕಳೆದ ವರ್ಷದಂತೆ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆಯಿದೆ. ಹೀಗಾಗಿ ತಮ್ಮ ತವರು ರಾಜ್ಯಗಳತ್ತ ಮುಖಮಾಡಿದ್ದಾರೆ’ ಎಂದು ಬಿಹಾರಕ್ಕೆ ತೆರಳುತ್ತಿದ್ದ ಕಾರ್ಮಿಕ ರಾಮ್‌ಶರಣ್ ಹೇಳಿದ್ದಾರೆ.

‘ನಾನು ಮುಂಬೈನ ರೆಸ್ಟೋರೆಂಟ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಪರಿಸ್ಥಿತಿ ತಿಳಿಯಾದರೆ ಮಾತ್ರ ಕೆಲಸಕ್ಕೆ ಮರಳುತ್ತೇನೆ. ಇಲ್ಲವಾದರೆ ಬಿಹಾರದಲ್ಲೇ ಏನಾದರೊಂದು ಕೆಲಸ ನೋಡಿಕೊಳ್ಳುತ್ತೇನೆ’ ಎಂದು ಮೊಹಮ್ಮದ್ ಎಂಬುವರು ಪ್ರತಿಕ್ರಿಯಿಸಿದ್ದಾರೆ.

ವಾರಾಂತ್ಯದ ಲಾಕ್‌ಡೌನ್‌ನಿಂದ ಅಂತರರಾಜ್ಯ ಸಂಚಾರವನ್ನು ಹೊರಗಿಡಲಾಗಿದ್ದು, ನೂರಾರು ಜನರು ತಮ್ಮ ಊರುಗಳತ್ತ ಮರಳಲು ಸಾಧ್ಯವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದೇ ಹೆದ್ದಾರಿಯಲ್ಲಿ ವಾಹನಗಳು ಕಿಕ್ಕಿರಿದು ತುಂಬಿದ್ದವು.

ಭಾನುವಾರ ಮುಂಬೈನಿಂದ ಲಖನೌ ರೈಲು ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರು —ಪಿಟಿಐ ಚಿತ್ರ

> ಏಪ್ರಿಲ್ 11ರಿಂದ 14ರವರೆಗೆ ಹಮ್ಮಿಕೊಂಡಿರುವ ‘ಟೀಕಾ ಉತ್ಸವ’ ಲಸಿಕಾ ಅಭಿಯಾನವು ಕೋವಿಡ್ ವಿರುದ್ಧದ ಎರಡನೇ ಹೋರಾಟದ ಆರಂಭ
> **ನರೇಂದ್ರ ಮೋದಿ,** ಪ್ರಧಾನಿ

> ವೈರಸ್ ಮೇಲೆ ನಿಯಂತ್ರಣವಿಲ್ಲ, ಲಸಿಕೆ ಲಭ್ಯವಿಲ್ಲ, ಉದ್ಯೋಗವಿಲ್ಲ, ಕಾರ್ಮಿಕರು, ರೈತರತ್ತ ಗಮನ ಇಲ್ಲ, ಮಧ್ಯಮ ವರ್ಗದವರಿಗೆ ತೃಪ್ತಿ ಇಲ್ಲ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಐದು ರಾಜ್ಯಗಳಲ್ಲಿ ಶೇ 70ರಷ್ಟು ಸಕ್ರಿಯ ಪ್ರಕರಣ

ಮಹಾರಾಷ್ಟ್ರ, ಛತ್ತೀಸಗಡ, ಕರ್ನಾಟಕ, ಉತ್ತರ ಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಶೇ 70.82ರಷ್ಟು ಕೋವಿಡ್ ಸಕ್ರಿಯ ಪ್ರಕರಣಗಳು ವರದಿಯಾಗಿವೆ. ಒಟ್ಟಾರೆ 11 ಲಕ್ಷ ಪ್ರಕರಣಗಳು ಇವೆ.

ಮಹಾರಾಷ್ಟ್ರವೊಂದರಲ್ಲೇ ಶೇ 48.57ರಷ್ಟು ಪ್ರಕರಣಗಳು ಕಂಡುಬಂದಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ಐದು ರಾಜ್ಯಗಳಲ್ಲದೆ, ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ದೆಹಲಿ, ಹರಿಯಾಣ, ಪಂಜಾಬ್ ಮತ್ತು ರಾಜಸ್ಥಾನಗಳಲ್ಲಿ ಸೋಂಕಿನ ಪ್ರಮಾಣ ಅಧಿಕವಾಗುತ್ತಿದೆ.

ರೆಮ್‌ಡಿಸಿವಿರ್ ರಫ್ತು ನಿಷೇಧ

ದೇಶದಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಕಾರಣ, ಕೋವಿಡ್‌ಗೆ ಇರುವ ಏಕೈಕ ಪರಿಣಾಮಕಾರಿ ಔಷಧ ರೆಮ್‌ಡಿಸಿವಿರ್ ರಫ್ತಿನ ಮೇಲೆ ನಿಷೇಧ ಹೇರಿ ಕೇಂದ್ರ ಸರ್ಕಾರ ಭಾನುವಾರ ಆದೇಶ ಹೊರಡಿಸಿದೆ.

ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವವರೆಗೆ ಇಂಜೆಕ್ಷನ್ ರಫ್ತು ಮಾಡಲು ಕೇಂದ್ರ ತಡೆ ನೀಡಿದೆ. ಸೋಂಕಿತರಿಗೆ ಸುಲಭವಾಗಿ ಇಂಜೆಕ್ಷನ್ ಲಭ್ಯವಾಗಲಿ ಎಂಬ ಉದ್ದೇಶದಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ.

ರೆಮ್‌ಡಿಸಿವಿರ್‌ನ ಎಲ್ಲಾ ದೇಶೀಯ ತಯಾರಕರು ತಮ್ಮಲ್ಲಿ ಔಷಧದ ಲಭ್ಯತೆ ಎಷ್ಟಿದೆ ಎಂಬುದನ್ನು ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಬೇಕು ಎಂದು ಸರ್ಕಾರ ಸೂಚಿಸಿದೆ. ಕಾಳಸಂತೆಯಲ್ಲಿ ಔಷಧ ಮಾರಾಟ ತಡೆಯಲು ಔಷಧ ಪರಿಶೋಧಕರು ದಾಸ್ತಾನು ಪರಿಶೀಲಿಸಿ, ಕ್ರಮ ಜರುಗಿಸಬೇಕು ಎಂದೂ ತಿಳಿಸಿದೆ.

‘ಶ್ರಮಿಕ ವಿಶೇಷ ರೈಲು ಓಡಿಸುವ ಪ್ರಸ್ತಾವ ಇಲ್ಲ’

ನವದೆಹಲಿ: ಕೋವಿಡ್ ಸೋಂಕು ಪ್ರಸರಣ ತಡೆಗೆ ಹಲವು ರಾಜ್ಯಗಳು ನಿರ್ಬಂಧಿತ ಲಾಕ್‌ಡೌನ್ ಪ್ರಕಟಿಸುತ್ತಿದ್ದು, ತಮ್ಮ ರಾಜ್ಯಗಳಿಗೆ ಮರಳುತ್ತಿರುವ ಕಾರ್ಮಿಕರಿಗಾಗಿ ವಿಶೇಷ ಶ್ರಮಿಕ ರೈಲು ಓಡಿಸುವ ಪ್ರಸ್ತಾವ ಸದ್ಯಕ್ಕಿಲ್ಲ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ರೈಲ್ವೆಯು ಈಗಾಗಲೇ ಹಲವು ವಿಶೇಷ ರೈಲುಗಳನ್ನು ಓಡಿಸುತ್ತಿದೆ. ಅಗತ್ಯಬಿದ್ದಲ್ಲಿ ಮಾತ್ರ ಇನ್ನಷ್ಟು ರೈಲುಗಳನ್ನು ಇಲಾಖೆ ಓಡಿಸಲಿದೆ. ಆದರೆ ಶ್ರಮಿಕ ವಿಶೇಷ ರೈಲು ಓಡಿಸುವ ಅಗತ್ಯ ಇಲ್ಲ ಎಂದು ಇಲಾಖೆ ತಿಳಿಸಿದೆ.

ಈಗ ಪ್ರತಿನಿತ್ಯ ಸರಾಸರಿ 1,402 ವಿಶೇಷ ರೈಲುಗಳು ಓಡಾಡುತ್ತಿವೆ. 5381 ಉಪನಗರ ರೈಲು ಹಾಗೂ 830 ಪ್ರಯಾಣಿಕ ರೈಲುಗಳು ಓಡಾಡುತ್ತಿವೆ.

ಕಳೆದ ವರ್ಷ 4,615 ಶ್ರಮಿಕ ವಿಶೇಷ ರೈಲುಗಳನ್ನು ಓಡಿಸಿದ್ದ ಇಲಾಖೆ, 63 ಲಕ್ಷ ವಲಸೆ ಕಾರ್ಮಿಕರನ್ನು ಅವರವರ ರಾಜ್ಯಗಳಿಗೆ ತಲುಪಿಸಿತ್ತು.

ಸೋಂಕು: ಏನು.. ಎತ್ತ..

- ತಮಿಳುನಾಡಿನ ಅರವಕ್ಕುರಿಚಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರಿಗೆ ಕೋವಿಡ್ ದೃಢಪಟ್ಟಿದೆ.
- ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೋವಿಡ್ ಪರಿಸ್ಥಿತಿ ಹದಗೆಡುತ್ತಿರುವ ಕಾರಣ ಜನರು ಅಗತ್ಯವಿದ್ದರಷ್ಟೇ ಮನೆಯಿಂದ ಹೊರಬರಬೇಕು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮನವಿ ಮಾಡಿದ್ದಾರೆ
- ರೆಮ್‌ಡಿಸಿವಿರ್ ಇಂಜೆಕ್ಷನ್ ಸರಾಗ ಪೂರೈಕೆಗೆ ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಇದರಿಂದ ಔಷಧಿಯ ಕಾಳಸಂತೆ ಮಾರಾಟ ತಡೆಯಲು ಮುಂದಾಗಿದೆ
- ಮಹಾರಾಷ್ಟ್ರವು 1 ಕೋಟಿ ಕೋವಿಡ್ ತಡೆ ಲಸಿಕೆ ಮೈಲುಗಲ್ಲು ತಲುಪಿದೆ. ಈವರೆಗೆ ರಾಜ್ಯದ ಒಂದು ಕೋಟಿಗೂ ಹೆಚ್ಚು ಜನರಿಗೆ ಲಸಿಕೆ ಹಾಕಲಾಗಿದೆ
- ಕೋವಿಡ್ ಮೂರನೇ ಅಲೆ ತಡೆಯಲು ವೇಗವಾಗಿ ಲಸಿಕೆ ಕಾರ್ಯಕ್ರಮ ನಡೆಸಬೇಕು ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಅಭಿಪ್ರಾಯಪಟ್ಟಿದ್ದಾರೆ

ಪ್ರತ್ಯೇಕ ಎನ್‌ಕೌಂಟರ್: ಐವರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಶೋಪಿಯಾನ್ ಮತ್ತು ಅನಂತನಾಗ್ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಒಬ್ಬ ಬಾಲಾಪರಾಧಿ ಸೇರಿದಂತೆ ಐವರು ಉಗ್ರರು ಹತರಾಗಿದ್ದಾರೆ.

‘ಶೋಪಿಯಾನ್ ಜಿಲ್ಲೆಯ ಚಿತ್ರಗಂನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಹತರಾದರು. ಉಗ್ರರು ಅಡಗಿರುವ ಬಗ್ಗೆ ಮಾಹಿತಿ ಪಡೆದ ಭದ್ರತಾ ಪಡೆಗಳು ಈ ಪ್ರದೇಶವನ್ನು ಸುತ್ತುವರಿದಿದ್ದವು. ಇವರಲ್ಲಿ ಒಬ್ಬ ಬಾಲಪರಾಧಿಯೂ ಸೇರಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

10ನೇ ವರ್ಷದ ಚಿರಸ್ಮರಣೆ
ಶ್ರೀಮತಿ ಸರೋಜಮ್ಮ
(ದಿ|| ಗುತ್ತಲಗೌಡರ ಧರ್ಮಪತ್ನಿ, ಮಾಜಿ ಅಧ್ಯಕ್ಷರು, ಒಕ್ಕಲಿಗರ ಸಂಘ)
ಜನನ: 15-06-1928, ನಿಧನ: 12-04-2011
ನೀವು ನಮ್ಮನ್ನಗಲಿ 10 ವರ್ಷವಾದವು, ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ, ನಿಮ್ಮ ಆತ್ಮಕ್ಕೆ ಚಿಶಾಂತಿಯನ್ನು ಕರುಣಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುವ,
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಕುಟುಂಬ ವರ್ಗದವರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

Finance

ಮುದ್ರಾ, ಯೋಜನೆಯ ಮೂಲಕ ಕೃಷಿ, ಸ್ಥಿರಾಸ್ತಿ, ವೈಯುಕ್ತಿಕ ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಲಭ್ಯ. 8095868219, 7057624634

ಉದ್ಯೋಗಾವಕಾಶ

Wanted

✓ ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720916, 7411720920

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ. ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ಸೆಕ್ಯೂರಿಟಿ ಗಾರ್ಡ್, ಫೀಲ್ಡ್ ಆಫೀಸರ್, ಕೆಲಸದ ಸಮಯ 12 ಗಂಟೆ. ಸಂಬಳ: 10 ಸಾವಿರ ವಸತಿ ಉಚಿತ. ಬ್ಯಾಚಲರ್ ಬೆಂಗಳೂರಿನಲ್ಲಿ ಬೇಕಾಗಿದ್ದಾರೆ. 07396016024, 09705406949

Marketing & Sales

ಅನುಭವವಿರುವ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ಸಂಬಳ : 30,000 ರ ತನಕ. ಇನ್‌ಸೆಂಟಿವ್ಸ್ : 20,000 ಸಂಪರ್ಕಿಸಿ : 7411050009.

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಕಂಪನಿ, ಫ್ಯಾಕ್ಟರಿ ಶೋರೂಮ್, ಬ್ಯಾಂಕಿಂಗ್, ರಿಟೇಲ್ ಕೊರಿಯರ್,ಬಿಸಿನೆಸ್ ಡಿಪಾರ್ಟ್ಮೆಂಟ್ ಗಳಲ್ಲಿ ಕೆಲಸ, ಸಂಬಳ 18,000-36,000/- ಆಯ್ದ ಭಾಗಗಳಲ್ಲಿ ವಸತಿಯೂಟವಿದೆ. 9686115054, 9902603707

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ರಾವ್. 9901724082

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಎಲ್ಲ ಜಿಲ್ಲೆಗಳಲ್ಲೂ ಹೊಸ ಪ್ರಕರಣ ಪತ್ತೆ

24 ಗಂಟೆ: 10 ಸಾವಿರ ದಾಟಿದ ಕೋವಿಡ್: ರಾಜ್ಯದಲ್ಲಿ 440 ಮಂದಿಗೆ ಐಸಿಯುನಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ವೇಗವಾಗಿ ವ್ಯಾಪಿಸಿಕೊಳ್ಳಲಾರಂಭಿಸಿದ್ದು, 24 ಗಂಟೆಗಳ ಅವಧಿಯಲ್ಲಿ 10,250 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಕಳೆದ ವರ್ಷ ಅ.10ರಂದು ಪ್ರಕರಣಗಳ ಸಂಖ್ಯೆ 10 ಸಾವಿರ ದಾಟಿತ್ತು. ಬಳಿಕ ಇಳಿಮುಖ ಕಂಡಿತ್ತು. ವರ್ಷದ ಪ್ರಾರಂಭದಲ್ಲಿ ದಿನವೊಂದಕ್ಕೆ 500ರ ಗಡಿಯ ಆಸುಪಾಸಿಗೆ ಬಂದಿದ್ದ ಹೊಸ ಪ್ರಕರಣಗಳು, ಈಗ ಬೆಂಗಳೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಏರುಗತಿ ಪಡೆದಿದೆ. ಈ ತಿಂಗಳು 11 ದಿನಗಳಲ್ಲಿಯೇ 68,286 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೋವಿಡ್ ರಾಜ್ಯಕ್ಕೆ ಕಾಲಿಟ್ಟ ದಿನದಿಂದ ಈವರೆಗೆ ಸೋಂಕಿತರಾದವರ ಸಂಖ್ಯೆ 10.65 ಲಕ್ಷ ದಾಟಿದೆ.

ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ 1.32 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿದೆ. ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿದ್ದು, ಬೆಂಗಳೂರಿನಲ್ಲಿ 7,584 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಅದೇ ರೀತಿ, ಕಲಬುರ್ಗಿ (291), ಬೀದರ್ (290), ಮೈಸೂರು (277), ಹಾಸನ (170), ತುಮಕೂರು (150), ಧಾರವಾಡ (150), ದಕ್ಷಿಣ ಕನ್ನಡ (133), ಬಳ್ಳಾರಿ (103), ರಾಯಚೂರು (103) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 27 ಮಂದಿ ಸೇರಿದಂತೆ ರಾಜ್ಯದಲ್ಲಿ 40 ಮಂದಿ ಸಾವಿಗೀಡಾಗಿದ್ದಾರೆ. ಬೆಳಗಾವಿ ಮತ್ತು ಮೈಸೂರಿನಲ್ಲಿ ತಲಾ ಮೂವರು, ಕಲಬುರ್ಗಿಯಲ್ಲಿ ಇಬ್ಬರು, ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೀದರ್, ಶಿವಮೊಗ್ಗ, ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿರುವುದು ದೃಢಪಟ್ಟಿದೆ. ಇವರಲ್ಲಿ ಆರು ಮಂದಿ ಮನೆಯಲ್ಲಿಯೇ ಮರಣ ಹೊಂದಿದ್ದಾರೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಸಂಖ್ಯೆ 12,889ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 50 ಸಾವಿರ ದಾಟಿದ್ದು, ಸದ್ಯ ರಾಜ್ಯದಲ್ಲಿ 69,225 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ರಾಜ್ಯದ ವಿವಿಧ ಆಸ್ಪತ್ರೆಗಳ ಐಸಿಯುನಲ್ಲಿ 440 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೊರೊನಾ ಸೋಂಕಿತರಲ್ಲಿ 2,638 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.83 ಲಕ್ಷ ದಾಟಿದೆ.

ಕೋವಿಡ್ : ನಿಷೇಧಾಜ್ಞೆ ಜಾರಿ ಸೂಕ್ತ


ಮಂಜುನಾಥ್

ಬೆಂಗಳೂರು: ‘ಕೋವಿಡ್ ಎರಡನೇ ಅಲೆಯನ್ನು ಪ್ರಾರಂಭಿಕ ಹಂತದಲ್ಲಿಯೇ ಹತ್ತಿಕ್ಕಬೇಕು. ಮದುವೆ, ಸಮಾರಂಭಗಳಿಗೆ ಕಟ್ಟುನಿಟ್ಟಾಗಿ ನಿರ್ಬಂಧ ವಿಧಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಅಪಾಯ ಎದುರಿಸಬೇಕಾಗುತ್ತದೆ’ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ಎಚ್ಚರಿಸಿದ್ದಾರೆ.

‘ಐಸ್‌ಕ್ರೀಂ ಪಾರ್ಲರ್, ಚಾಟ್ ಫುಡ್ ವಿತರಣೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಜನರು ಗುಂಪು ಸೇರುತ್ತಿದ್ದಾರೆ. ಕೋವಿಡ್ ನಿಯಂತ್ರಣಕ್ಕೆ ಬರಬೇಕಾದರೆ ಗುಂಪು ಸೇರುವುದನ್ನು ಕಡಿಮೆ ಮಾಡಲೇಬೇಕು. 144 ಸೆಕ್ಷನ್ ಅನ್ನು ಸರ್ಕಾರವು ಕಠಿಣವಾಗಿ ಜಾರಿಗೆ ತರಬೇಕು. ನಗರ ಪ್ರದೇಶದ ಜತೆಗೆ ಹಳ್ಳಿ ಪ್ರದೇಶಗಳಿಗೂ ಇದನ್ನು ಅನ್ವಯಿಸಬೇಕು’ ಎಂದು ತಿಳಿಸಿದರು.

ಕೋವಿಡ್ ಪ್ರಕರಣಗಳ ಏರಿಕೆಗೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ದೇಶದ ವಿವಿಧೆಡೆ ಕೋವಿಡ್ ವೇಗವಾಗಿ ಹರಡುತ್ತಿದೆ. ಈ ಸಂದರ್ಭದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕಿದೆ. ಜನ ಒಂದೆಡೆ ಗುಂಪಾಗಿ ಸೇರಿದಲ್ಲಿ ಸಮಸ್ಯೆಯಾಗುತ್ತದೆ. ಹಾಗಾಗಿ, ಜಾತ್ರೆ, ಮದುವೆ ಹಾಗೂ ಸಮಾರಂಭಗಳಲ್ಲಿ ನಿರ್ಬಂಧಗಳು ಪಾಲನೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಈಗ ಬೆಂಗಳೂರಿನಲ್ಲಿ ದಿನೇ ದಿನೇ ಪ್ರಕರಣ ಹೆಚ್ಚುತ್ತಿದ್ದು, ಇದೇ ರೀತಿ ಏರಿಕೆ ಕಂಡಲ್ಲಿ ಮೇ 15ರ ವೇಳೆಗೆ 15 ಸಾವಿರಕ್ಕೆ ಹೋಗಬಹುದು’ ಎಂದು ತಿಳಿಸಿದರು.

ಅಂಬಾನಿ ಮನೆ ಬಳಿ ಸ್ಫೋಟಕ: ಇನ್ನೊಬ್ಬ ಪೊಲೀಸ್ ಅಧಿಕಾರಿ ಬಂಧಿಸಿದ ಎನ್‌ಐಎ

ಮುಂಬೈ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಮನೆ ಬಳಿ ಪತ್ತೆಯಾದ ಸ್ಫೋಟಕಗಳಿದ್ದ ವಾಹನದ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಬ್ಬ ಪೊಲೀಸ್ ಅಧಿಕಾರಿ ರಿಯಾಜ್ ಕಾಜಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಭಾನುವಾರ ಬಂಧಿಸಿದೆ.

ಸದ್ಯ ಬಂಧನದಲ್ಲಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರಿಗೆ ಕಾಜಿ ಆಪ್ತರಾಗಿದ್ದರು. ವಾಜೆ ಜತೆ ಕಾಜಿ ಕಾರ್ಯನಿರ್ವಹಿಸಿದ್ದರು.

ಈ ಪ್ರಕರಣದ ಬಗ್ಗೆ ವಿಚಾರಣೆಗಾಗಿ ಭಾನುವಾರ ಕಾಜಿ ಅವರನ್ನು ಕರೆಸಲಾಗಿತ್ತು. ವಿಚಾರಣೆ ಬಳಿಕ ಕಾಜಿ ಅವರನ್ನು ಬಂಧಿಸಲಾಗಿದೆ.

ಈ ಹಿಂದೆಯೂ ಕಾಜಿ ವಿಚಾರಣೆ ನಡೆಸಲಾಗಿತ್ತು. ಕಳೆದ ತಿಂಗಳು ಮುಂಬೈ ಕ್ರೈಂ ಬ್ರಾಂಚ್‌ನಿಂದ ಕಾಜಿ ಅವರನ್ನು ವರ್ಗಾವಣೆ ಮಾಡಲಾಗಿತ್ತು.

ಅಂಬಾನಿ ಮನೆ ಬಳಿ ಪತ್ತೆಯಾದ ಸ್ಫೋಟಕಗಳಿದ್ದ ವಾಹನಕ್ಕೆ ನಕಲಿ ನಂಬರ್ ಪ್ಲೇಟ್ ಪಡೆಯಲು ಸಚಿನ್ ವಾಜೆ ಅವರಿಗೆ ಕಾಜಿ ನೆರವಾಗಿರಬಹುದು ಎಂದು ಎನ್‌ಐಎ ಅನುಮಾನ ವ್ಯಕ್ತಪಡಿಸಿತ್ತು.

ವಿಖ್ರೋಲಿ ಪ್ರದೇಶದಲ್ಲಿ ನಂಬರ್ ಪ್ಲೇಟ್ ಅಂಗಡಿಗೆ ತೆರಳಿ ಮಾಲೀಕನ ಜತೆ ಕಾಜಿ ಮಾತುಕತೆ ನಡೆಸಿದ ದೃಶ್ಯಾವಳಿಗಳು ಸಿಸಿಟಿವಿಯಲ್ಲಿ ದಾಖಲಾಗಿದ್ದವು. ಜತೆಗೆ, ಠಾಣೆಯಲ್ಲಿನ ವಾಜೆ ಅವರ ಹೌಸಿಂಗ್ ಕಾಂಪ್ಲೆಕ್ಸ್‌ನಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹಿಸಿದ್ದು ಸಹ ಗೊತ್ತಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಾರ್ಚ್ 13ರಂದು ವಾಜೆ ಅವರನ್ನು ಎನ್‌ಐಎ ಬಂಧಿಸಿತ್ತು.



ಸಂಕ್ಷಿಪ್ತ ಸುದ್ದಿ

ಇಂಡೊನೇಷ್ಯಾದಲ್ಲಿ ಭೂಕಂಪ: 8 ಮಂದಿ ಸಾವು

ಮಲಾಂಗ್ (ಎಪಿ): ಇಂಡೊನೇಷ್ಯಾದ ಪೂರ್ವ ಜಾವಾ ದ್ವೀಪದಲ್ಲಿ ಸಂಭವಿಸಿದ ಭೂಕಂಪದಲ್ಲಿ ಎಂಟು ಮಂದಿ ಮೃತಪಟ್ಟಿದ್ದು 1,300ಕ್ಕೂ ಹೆಚ್ಚು ಕಟ್ಟಡಗಳು ಹಾನಿಯಾಗಿವೆ.

ಜಾವಾ ದ್ವೀಪದ ದಕ್ಷಿಣ ಕರಾವಳಿ ಭಾಗದಲ್ಲಿ ಶನಿವಾರ ಮಧ್ಯಾಹ್ನ 2 ಗಂಟೆಗೆ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ ಕಂಪನದ ತೀವ್ರತೆ 6.0ರಷ್ಟು ದಾಖಲಾಗಿದೆ.

ಮಲಾಂಗ್ ಜಿಲ್ಲೆಯ ಸಂಬರ್‌ಪುಕುಂಗ್ ಪಟ್ಟಣದ ಬಳಿ 82 ಕಿ.ಮೀ ಆಳದಲ್ಲಿ ಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ.

ಚೀನಾ: ಮುಂದುವರಿದ ಕಾರ್ಯಾಚರಣೆ

ಬೀಜಿಂಗ್ (ಎಪಿ): ‘ಚೀನಾದ ವಾಯವ್ಯ ಭಾಗದ ಹುಟುಬಿ ಕೌಂಟಿಯ ಕಲ್ಲಿದ್ದಲು ಗಣಿಯ ಸುರಂಗದಲ್ಲಿ ಸಂಭವಿಸಿದ ಪ್ರವಾಹದಲ್ಲಿ 21 ಕಾರ್ಮಿಕರು ಸಿಲುಕಿದ್ದು, ಭಾನುವಾರವೂ ಅವರ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ’ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

‘ಕ್ಸಿನ್‌ಜಿಯಾಂಗ್ ಪ್ರದೇಶದ ಹುಟುಬಿ ಕೌಂಟಿಯ ಕಲ್ಲಿದ್ದಲು ಗಣಿಯಲ್ಲಿ ಶನಿವಾರ ಸಂಜೆ 6.10ಕ್ಕೆ ಪ್ರವಾಹ ಸಂಭವಿಸಿದೆ. ಈಗಾಗಲೇ ಅಲ್ಲಿಂದ 8 ಮಂದಿಯನ್ನು ರಕ್ಷಿಸಲಾಗಿದೆ’ ಎಂದು ವರದಿ ಹೇಳಿದೆ.

ಪೈಲಟ್ ಸಮಯಪ್ರಜ್ಞೆ: 180 ಪ್ರಯಾಣಿಕರು ಪಾರು

ಕೊಚ್ಚಿ (ಪಿಟಿಐ): ರಿಯಾದ್‌ನಿಂದ ಕೋಯಿಕ್ಕೋಡ್‌ಗೆ ಹೋಗುತ್ತಿದ್ದ ‘ಏರ್ ಇಂಡಿಯಾ ಎಕ್ಸ್‌ಪ್ರೆಸ್’ ವಿಮಾನವೊಂದು ಭಾನುವಾರ ಕೊಚ್ಚಿ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಐಎಕ್ಸ್ 1322 ವಿಮಾನವು ಭಾನುವಾರ ಮುಂಜಾನೆ 3.16ಕ್ಕೆ ಭೂ ಸ್ಪರ್ಶ ಮಾಡಿದ್ದು, ಇದರಲ್ಲಿ 180 ಪ್ರಯಾಣಿಕರು ಇದ್ದರು. ಅವರೆಲ್ಲ ಅಪಾಯದಿಂದ ಪಾರಾಗಿದ್ದಾರೆ.

‘ವಿಮಾನದ ಚಕ್ರವೊಂದರಲ್ಲಿ ದೋಷವನ್ನು ಗಮನಿಸಿದ ಪೈಲಟ್ ಕೋಯಿಕ್ಕೋಡ್ ಬದಲಾಗಿ ಕೊಚ್ಚಿ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಇಳಿಸಿದ್ದಾರೆ. ವಿಮಾನದಿಂದ ಪ್ರಯಾಣಿಕರು ಕೆಳಗಿಳಿದ ಕೆಲವೇ ಕ್ಷಣಗಳಲ್ಲಿ ಚಕ್ರ ಸ್ಫೋಟಿಸಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ಕೋಯಿಕ್ಕೋಡ್ ವಿಮಾನ ನಿಲ್ದಾಣದ ರನ್‌ವೇ ‘ಟೇಬಲ್ ಟಾಪ್’ ಸ್ವರೂಪದ್ದಾಗಿದೆ. ಈ ರನ್‌ವೇ ಅತಿ ಕಡಿಮೆ ಜಾಗವನ್ನು ಹೊಂದಿದೆ. ಹಾಗಾಗಿ ಚಕ್ರದಲ್ಲಿ ದೋಷವನ್ನು ಗಮಿಸಿದ ಪೈಲಟ್, ಸುರಕ್ಷತೆಯ ದೃಷ್ಟಿಯಿಂದ ವಿಮಾನವನ್ನು ಕೋಯಿಕ್ಕೋಡ್ ಬದಲಿಗೆ ಕೊಚ್ಚಿಯಲ್ಲಿ ಇಳಿಸಿದರು.

ಸಿಬಿಎಸ್‌ಇ ಪಬ್ಲಿಕ್ ಪರೀಕ್ಷೆ ರದ್ದುಗೊಳಿಸಿ: ಪ್ರಿಯಾಂಕಾ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ನಡೆಸುವ ಪಬ್ಲಿಕ್ (ಬೋರ್ಡ್) ಪರೀಕ್ಷೆಗಳನ್ನು ರದ್ದುಪಡಿಸುವಂತೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಆಗ್ರಹಿಸಿದ್ದಾರೆ.

ಈ ಕುರಿತು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಅವರಿಗೆ ಭಾನುವಾರ ಪತ್ರ ಬರೆದಿರುವ ಅವರು, ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ದಟ್ಟಣೆ ಹೆಚ್ಚಿರುತ್ತದೆ. ಹಾಗಾಗಿ ಅಲ್ಲಿ ಸುರಕ್ಷತೆಯನ್ನು ಖಚಿತಪಡಿಸುವುದು ಕಷ್ಟಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

ಉನ್ನಾವೊ ಅತ್ಯಾಚಾರ ಅಪರಾಧಿಯ ಪತ್ನಿಯ ಉಮೇದುವಾರಿಕೆ ರದ್ದು

ಲಖನೌ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ (2018) ಅಪರಾಧಿ, ಬಿಜೆಪಿಯ ಮಾಜಿ ಶಾಸಕ ಕುಲದೀಪ್ ಸಿಂಗ್ ಸೆಂಗರ್ ಅವರ ಪತ್ನಿಯ ಚುನಾವಣಾ ಉಮೇದುವಾರಿಕೆಯನ್ನು ಬಿಜೆಪಿ ರದ್ದುಗೊಳಿಸಿದೆ.

ಜಿಲ್ಲಾ ಪಂಚಾಯಿತಿ ಚುನಾವಣೆಗೆ ಏಪ್ರಿಲ್ 9ರಂದು ಬಿಜೆಪಿ ಬಿಡುಗಡೆ ಮಾಡಿದ್ದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೆಂಗರ್ ಪತ್ನಿ, ಸಂಗೀತಾ ಸೆಂಗರ್ ಹೆಸರಿತ್ತು. ಸಂಗೀತಾ ಸೆಂಗರ್ ಅವರ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗಿದೆ ಎಂದು ಉತ್ತರ ಪ್ರದೇಶ ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಖಚಿತಪಡಿಸಿದ್ದಾರೆ.

ಅಭ್ಯರ್ಥಿಯನ್ನು ಅಂತಿಮಗೊಳಿಸಲು ಮೂರು ಹೊಸ ಹೆಸರುಗಳನ್ನು ಸಲ್ಲಿಸುವಂತೆ ಪಕ್ಷದ ಉನ್ನಾವೊ ಜಿಲ್ಲಾ ಘಟಕದ ಅಧ್ಯಕ್ಷರಿಗೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ : ಉದ್ಯಮಿ ಯೂಸುಫ್ ಆಲಿ ಸುರಕ್ಷಿತ

ಕೊಚ್ಚಿ (ಪಿಟಿಐ): ಅನಿವಾಸಿ ಭಾರತೀಯ ಉದ್ಯಮಿ ಎಂ.ಎ ಯೂಸುಫ್ ಆಲಿ ಸೇರಿದಂತೆ ಒಟ್ಟು 7 ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್‌ವೊಂದು ಭಾನುವಾರ ಬೆಳಿಗ್ಗೆ ಕೇರಳದ ಕೊಚ್ಚಿಯಲ್ಲಿ ತುರ್ತುಭೂಸ್ಪರ್ಶ ಮಾಡಿದೆ.

ಲುಲು ಗ್ರೂಪ್‌ನ ಸ್ಥಾಪಕ ಯೂಸುಫ್ ಆಲಿ, ಅವರ ಪತ್ನಿ ಮತ್ತು ಸಂಸ್ಥೆಯ ಮೂವರು ಸಿಬ್ಬಂದಿ ಹಾಗೂ ಗಗನಸಖಿಯರಿಬ್ಬರು ಲೂಲು ಗ್ರೂಪ್‌ನ ಹೆಲಿಕಾಪ್ಟರ್‌ನಲ್ಲಿ ಪ್ರಯಣಿಸುತ್ತಿದ್ದರು. ಸದ್ಯ ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಎಲ್ಲರೂ ಸುರಕ್ಷಿತರಾಗಿದ್ದಾರೆ. ಸದ್ಯ ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ’ ಎಂದು ಲೇಕ್‌ಶೋರ್ ಆಸ್ಪತ್ರೆಯ ಅಧಿಕಾರಿಯೊಬ್ಬರು ತಿಳಿಸಿದರು. ‘ಈ ಘಟನೆ ಭಾನುವಾರ ಬೆಳಿಗ್ಗೆ 8.30ರ ಸುಮಾರಿಗೆ ನಡೆದಿದೆ’ ಎಂದು ಅವರು ಹೇಳಿದರು.

ರಾಣಾ – ತ್ರಿಪಾಠಿ ಜೊತೆಯಾಟಕ್ಕೆ ಒಲಿದ ಜಯ; ಮನೀಷ್ ಪಾಂಡೆ, ಜಾನಿ ಬೆಸ್ಟೊ ಅರ್ಧಶತಕ

ನೈಟ್‌ರೈಡರ್ಸ್‌ಗೆ ಮಣಿದ ಸನ್‌ರೈಸರ್ಸ್

ಚೆನ್ನೈ (ಪಿಟಿಐ): ನಿತೀಶ್ ರಾಣಾ ಮತ್ತು ರಾಹುಲ್ ತ್ರಿಪಾಠಿ ಅವರ ಚೆಂದದ ಜೊತೆಯಾಟವು ವ್ಯರ್ಥವಾಗದಂತೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬೌಲರ್‌ಗಳು ನೋಡಿಕೊಂಡರು.

ಇದರಿಂದಾಗಿ ಕೋಲ್ಕತ್ತ ತಂಡವು 10 ರನ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಭೇರಿ ಬಾರಿಸಿತು.

ಟಾಸ್ ಗೆದ್ದ ಸನ್‌ರೈಸರ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 187 ರನ್ ಗಳಿಸಿತು. ನಿತೀಶ್ ರಾಣಾ (80; 56 ಎಸೆತ, 9 ಬೌಂಡರಿ, 4ಸಿಕ್ಸರ್) ಮತ್ತು ರಾಹುಲ್ ತ್ರಿಪಾಠಿ (53; 29ಎಸೆತ, 5ಬೌಂಡರಿ, 2ಸಿಕ್ಸರ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಗಳಿಸಿದರು.

ಹೈದರಾಬಾದ್ ತಂಡದ ಮನೀಷ್ ಪಾಂಡೆ (ಔಟಾಗದೆ 61, 44ಎ,2ಬೌಂ, 3ಸಿ) ಮತ್ತು ಜಾನಿ ಬೆಸ್ಟೊ (55; 40ಎ, 5ಬೌಂ, 3ಸಿ) ಮೂರನೇ ವಿಕೆಟ್ ಜೊತೆಯಾಟದಲ್ಲಿ 92 ರನ್‌ಗಳನ್ನು ಸೇರಿಸಿದರು. ಆದರೆ ತಂಡವು ಜಯ ಗಳಿಸುವಲ್ಲಿ ವಿಫಲವಾಯಿತು.20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 177 ರನ್ ಗಳಿಸಲಷ್ಟೇ ಶಕ್ತವಾಯಿತು.

ಕೊನೆಯ ಎರಡು ಓವರ್‌ಗಳಲ್ಲಿ ಸನ್‌ರೈಸರ್ಸ್ ಗೆಲುವಿಗೆ 38 ರನ್‌ಗಳ ಅಗತ್ಯವಿತ್ತು. ಆಗ 19ನೇ ಓವರ್‌ನಲ್ಲಿ ಅಬ್ದುಲ್ ಸಮದ್ ಎರಡು ಸಿಕ್ಸರ್ ಎತ್ತಿದ್ದರಿಂದ ಸನ್‌ರೈಸರ್ಸ್ ತಂಡಕ್ಕೆ ಗೆಲುವಿನ ಆಸೆ ಚಿಗುರಿತ್ತು.

ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ತಂಡಕ್ಕೆ 22 ರನ್‌ಗಳು ಬೇಕಾದ ಸಂದರ್ಭದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದ ಆ್ಯಂಡ್ರೆ ರಸೆಲ್ ಕೇವಲ 10 ರನ್ ಮಾತ್ರ ಕೊಟ್ಟರು. ಅದರಲ್ಲಿ ಕಡೆಯ ಎಸೆತದಲ್ಲಿ ಪಾಂಡೆ ಹೊಡೆದ ಸಿಕ್ಸರ್ ಕೂಡ ಸೇರಿತ್ತು!

ಸನ್‌ರೈಸರ್ಸ್‌ನ ಆರಂಭಿಕ ಜೋಡಿ ವೃದ್ಧಿಮಾನ್ ಸಹಾ ಮತ್ತು ಡೇವಿಡ್ ವಾರ್ನರ್ ಬ್ಯಾಟಿಂಗ್ ವೈಫಲ್ಯವು ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು. ಕೋಲ್ಕತ್ತದ ಮಧ್ಯಮವೇಗಿ, ಕನ್ನಡಿಗ ಪ್ರಸಿದ್ಧಕೃಷ್ಣ ಎರಡು ವಿಕೆಟ್ ಗಳಿಸಿದರು. ಹರಭಜನ್ ಸಿಂಗ್ ಕೇವಲ ಒಂದು ಓವರ್ ಮಾತ್ರ ಬೌಲಿಂಗ್ ಮಾಡಿದರು.

ಕೋಲ್ಕತ್ತಕ್ಕೆ ಉತ್ತಮ ಆರಂಭ: ಈಚೆಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುವ ಶುಭಮನ್ ಗಿಲ್ (15; 13ಎಸೆತ) ಮತ್ತು ನಿತೀಶ್ ರಾಣಾ ತಂಡಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು.

ಏಳನೇ ಓವರ್ ನಲ್ಲಿ ಸ್ಪಿನ್ನರ್ ರಶೀದ್ ಖಾನ್ ಎಸೆತದಲ್ಲಿ ಗಿಲ್ ಕ್ಲೀನ್ ಬೌಲ್ಡ್ ಆದರು.

ನಿತೀಶ್ 32 ಎಸೆತಗಳಲ್ಲಿ ಅರ್ಧ ಶತಕ ಗಳಿಸಿದರು. ಅವರಿಗಿಂತಲೂ ವೇಗವಾಗಿ ಆಡಿದ ತ್ರಿಪಾಠಿ 28 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಆದರೆ, 16ನೇ ಓವರ್‌ನಲ್ಲಿ ತ್ರಿಪಾಠಿ ವಿಕೆಟ್ ಗಳಿಸಿದ ಸನ್‌ರೈಸರ್ಸ್ ತಂಡದ ತಂಗರಸು ನಟರಾಜನ್ ಜೊತೆಯಾಟ ಮುರಿದರು.

ಆ್ಯಂಡ್ರೆ ರಸೆಲ್ (5 ರನ್) ಅವರಿಗೆ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಸ್ಪಿನ್ನರ್ ರಶೀದ್ ಖಾನ್ ಬಿಡಲಿಲ್ಲ. ನಾಯಕ ಏಯಾನ್ ಮಾರ್ಗನ್ (2 ರನ್) ಅವರಿಗೆ ಮೊಹಮ್ಮದ್ ನಬಿ ಅಡ್ಡಿಯಾದರು.

ಕೊನೆಯ ಹಂತದಲ್ಲಿ ಮಿಂಚಿದ ದಿನೇಶ್ ಕಾರ್ತಿಕ್ (ಔಟಾಗದೆ 22, 9ಎಸೆತ) ತಂಡದ ಮೊತ್ತವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾದರು. ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದರು.

ನಿತೀಶ್ ರಾಣಾ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಅರ್ಧಶತಕ ಗಳಿಸಿದ ಮನೀಷ್ ಪಾಂಡೆ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 6ಕ್ಕೆ 187 (20 ಓವರ್‌ಗಳಲ್ಲಿ)

ನಿತೀಶ್ ರಾಣಾ ಸಿ ವಿಜಯಶಂಕರ್ ಬಿ ಮೊಹಮ್ಮದ್ ನಬಿ	80
ಶುಭಮನ್ ಗಿಲ್ ಸಿ ರಶೀದ್ ಖಾನ್	15
ರಾಹುಲ್ ತ್ರಿಪಾಠಿ ಸಿ ವೃದ್ಧಿಮಾನ್ ಸಹಾ ಬಿ ನಟರಾಜನ್	53
ಆ್ಯಂಡ್ರೆ ರಸೆಲ್ ಸಿ ಮನೀಷ್ ಪಾಂಡೆ ಬಿ ರಶೀದ್ ಖಾನ್	5
ಏಯಾನ್ ಮಾರ್ಗನ್ ಸಿ ಅಬ್ದುಲ್ ಸಮದ್ ಸಿ ಮೊಹಮ್ಮದ್ ನಬಿ	2
ದಿನೇಶ್ ಕಾರ್ತಿಕ್ ಔಟಾಗದೆ	22
ಶಕೀಬ್ ಅಲ್ ಹಸನ್ ಸಿ ಅಬ್ದುಲ್ ಸಮದ್ ಬಿ ಭುವನೇಶ್ವರ್ ಕುಮಾರ್	3
ಇತರೆ (ವೈಡ್ 7)	7

ವಿಕೆಟ್ ಪತನ: 1–53 (ಗಿಲ್; 6.6), 2–146 (ತ್ರಿಪಾಠಿ; 15.2), 3–157 (ರಸೆಲ್;16.2), 4–160 (ರಾಣಾ; 17.3), 5–160 (ಮಾರ್ಗನ್; 17.4), 6–187 (ಹಸನ್; 19.6)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–45–1, ಸಂದೀಪ್ ಶರ್ಮಾ 3–0–35–0, ಟಿ. ನಟರಾಜನ್ 4–0–37–1, ಮೊಹಮ್ಮದ್ ನಬಿ 4–0–32–2, ರಶೀದ್ ಖಾನ್ 4–0–24–2, ವಿಜಯಶಂಕರ್ 1–0–14–0

ಸನ್‌ರೈಸರ್ಸ್ ಹೈದರಾಬಾದ್ 5ಕ್ಕೆ 177 (20 ಓವರ್‌ಗಳಲ್ಲಿ)

ವೃದ್ಧಿಮಾನ್ ಸಹಾ ಬಿ ಶಕೀಬ್ ಅಲ್ ಹಸನ್	7
ಡೇವಿಡ್ ವಾರ್ನರ್ ಸಿ ದಿನೇಶ್ ಕಾರ್ತಿಕ್ ಬಿ ಪ್ರಸಿದ್ಧ ಕೃಷ್ಣ	3
ಮನೀಷ್ ಪಾಂಡೆ ಔಟಾಗದೆ	61
ಜಾನಿ ಬೆಸ್ಟೊ ಸಿ ನಿತೀಶ್ ರಾಣಾ ಬಿ ಪ್ಯಾಟ್ ಕಮಿನ್ಸ್	55
ಮೊಹಮ್ಮದ್ ನಬಿ ಸಿ ಏಯಾನ್ ಮಾರ್ಗನ್ ಬಿ ಪ್ರಸಿದ್ಧ ಕೃಷ್ಣ	14
ವಿಜಯ ಶಂಕರ್ ಸಿ ಏಯಾನ್ ಮಾರ್ಗನ್ ಬಿ ಆ್ಯಂಡ್ರೆ ರಸೆಲ್	11
ಅಬ್ದುಲ್ ಸಮದ್ ಔಟಾಗದೆ	19
ಇತರೆ (ಬೈ 1, ಲೆಗ್ ಬೈ 1, ವೈಡ್ 5)	7

ವಿಕೆಟ್ ಪತನ: 1-10 (ಡೇವಿಡ್ ವಾರ್ನರ್, 1.3), 2-10 (ವೃದ್ಧಿಮಾನ್ ಸಹಾ, 2.1), 3-102 (ಜಾನಿ ಬೆಸ್ಟೊ, 12.6), 4-131 (ಮೊಹಮ್ಮದ್ ನಬಿ, 15.6), 5-150 (ವಿಜಯಶಂಕರ್, 17.6)

ಬೌಲಿಂಗ್: ಹರಭಜನ್ ಸಿಂಗ್ 1–0–8–0, ಪ್ರಸಿದ್ಧ ಕೃಷ್ಣ 4 –0–35–2, ಶಕೀಬ್ ಅಲ್ ಹಸನ್ 4–0–34–1, ಪ್ಯಾಟ್ ಕಮಿನ್ಸ್ 4–0–30–1, ಆ್ಯಂಡ್ರೆ ರಸೆಲ್ 3–0–32–1, ವರುಣ್ ಚಕ್ರವರ್ತಿ 4–0–36–0

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 10 ರನ್‌ಗಳ ಜಯ

ಕೆ.ಎಲ್. ರಾಹುಲ್ –ಎಎಫ್‌ಪಿ ಚಿತ್ರ

ಸಂಜು ಸ್ಯಾಮ್ಸನ್ –ಪಿಟಿಐ ಚಿತ್ರ

ರಾಹುಲ್‌ಗೆ ಸಂಜು ಸವಾಲು

ಪಂಜಾಬ್ ಕಿಂಗ್ಸ್ – ರಾಜಸ್ಥಾನ ರಾಯಲ್ಸ್ ಹಣಾಹಣಿ

ಮುಂಬೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಕೇರಳದ ಸಂಜು ಸ್ಯಾಮ್ಸನ್ ಸೋಮವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿದ್ದಾರೆ.

ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಮತ್ತು ಸಂಜು ಸಾರಥ್ಯದ ರಾಜಸ್ಥಾನ ರಾಯಲ್ಸ್ ತಂಡಗಳು ಕಣಕ್ಕಿಳಿಯಲಿವೆ. ಈ ವರ್ಷ ಹೆಸರಿನಲ್ಲಿ ಬದಲಾವಣೆ ಮಾಡಿಕೊಂಡಿರುವ ಪಂಜಾಬ್ ತಂಡದಲ್ಲಿ (ಈ ಹಿಂದೆ ಕಿಂಗ್ಸ್ ಇಲೆವನ್ ಪಂಜಾಬ್) ಮುಖ್ಯ ಕೋಚ್ ಕನ್ನಡಿಗ ಅನಿಲ್ ಕುಂಬ್ಳೆ, ರಾಹುಲ್ ಮತ್ತು ಕರ್ನಾಟಕದ ಮಯಂಕ್ ಅಗರವಾಲ್ ಮಾತ್ರ ಇದ್ದಾರೆ. ಇನ್ನುಳಿದ ಮೂವರು ಕನ್ನಡಿಗರು ಬೇರೆ ತಂಡಗಳಿಗೆ ಹೋಗಿದ್ದಾರೆ.

ಹೋದ ವರ್ಷದ ಟೂರ್ನಿಯಲ್ಲಿ ಎರಡನೇ ಸುತ್ತಿನಲ್ಲಿ ತಂಡವು ಅಮೋಘವಾಗಿ ಆಡಿತ್ತು. ಆದರೆ, ಪ್ರಶಸ್ತಿ ಹಂತದಿಂದ ದೂರವೇ ಉಳಿದಿತ್ತು. ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿ 'ಪದಾರ್ಪಣೆ' ಮಾಡಿದ್ದ ರಿಷಭ್ ಪಂತ್ ತಮ್ಮ 'ಗುರು' ಮಹೇಂದ್ರಸಿಂಗ್ ಧೋನಿಯ ಚೆನ್ನೈ ಸೂಪರ್ ಕಿಂಗ್ಸ್ ಬಳಗದ ವಿರುದ್ಧ ಜಯ ಸಾಧಿಸಿದ್ದರು.

ಬಲಾಬಲ, ಪಂದ್ಯ: 21

9 ಪಂಜಾಬ್ ಜಯ | 12 ರಾಜಸ್ಥಾನ ಜಯ

ನಾಯಕರ ಐಪಿಎಲ್ ಸಾಧನೆ

	ಕೆ.ಎಲ್. ರಾಹುಲ್	ಸಂಜು ಸ್ಯಾಮ್ಸನ್
ಪಂದ್ಯ	81	107
ರನ್	2,647	2,584
ಶ್ರೇಷ್ಠ	132	102
ಶತಕ	2	2
ಅರ್ಧಶತಕ	21	13

ಆದ್ದರಿಂದ ಈಗ ಮತ್ತಿಬ್ಬರು ವಿಕೆಟ್‌ಕೀಪರ್‌ಗಳ ಹಣಾಹಣಿ ಕುತೂಹಲ ಕೆರಳಿಸಿದೆ. ಅಲ್ಲದೇ ಎರಡೂ ಬದಿಯಲ್ಲಿ ಅಬ್ಬರದಾಟವಾಡುವ ಬ್ಯಾಟ್ಸ್‌ಮನ್‌ಗಳಿರುವುದರಿಂದಾಗಿ ಸಿಕ್ಸರ್, ಬೌಂಡರಿಗಳ ಆಟ ಜೋರಾಗಿರುವ ನಿರೀಕ್ಷೆ ಮೂಡಿಸಿದೆ. ಆ ಟೂರ್ನಿಯಲ್ಲಿ ರಾಹುಲ್, ಮಯಂಕ್, ಕ್ರಿಸ್ ಗೇಲ್ ಮತ್ತು ನಿಕೊಲಸ್ ಪೂರನ್ ಅಬ್ಬರದ ಬ್ಯಾಟಿಂಗ್ ಮಾಡಿದ್ದರು. ಬೌಲಿಂಗ್ ವಿಭಾಗದಲ್ಲಿ ಮೊಹಮ್ಮದ್ ಶಮಿ, ಸ್ಪಿನ್ನರ್ ರವಿ ಬಿಷ್ಣೋಯಿ ಹೊಸದಾಗಿ ಸೇರ್ಪಡೆಯಾಗಿರುವ ಜೇ ರಿಚರ್ಡ್ಸನ್, ಕ್ರಿಸ್ ಮೊರಿಸ್, ಪ್ರಮುಖರಾಗಿದ್ದಾರೆ.

ಎರಡೂ ತಂಡಗಳಲ್ಲಿ ಬಿರುಸಿನ ಹೊಡೆತಗಳನ್ನು ಆಡುವ ಬ್ಯಾಟ್ಸ್‌ಮನ್‌ಗಳಿದ್ದಾರೆ. ಇದೇ ಮೊದಲ ಸಲ ನಾಯಕರಾಗಿ ಕಣಕ್ಕಿಳಿಯಲಿರುವ ಸಂಜು ಸ್ಯಾಮ್ಸನ್ ಈ ಹಿಂದಿನ ಐಪಿಎಲ್‌ಗಳಲ್ಲಿ ವೇಗದ ರನ್ ಗಳಿಕೆಯ ಇನಿಂಗ್ಸ್ ಆಡಿರುವ ಆಟಗಾರ.

ಜೋಸ್ ಬಟ್ಲರ್, ಬೆನ್ ಸ್ಟೋಕ್ಸ್ ಕೂಡ ಕಿಚ್ಚು ಹಚ್ಚಬಲ್ಲರು. ಹೋದ ವರ್ಷ ಸಿಕ್ಸರ್‌ಗಳಿಂದ ಗಮನ ಸೆಳೆದಿದ್ದ ರಾಹುಲ್ ತೆವಾಟಿಯಾ ಮತ್ತು 'ಬಿಹು' ನೃತ್ಯದ ಖ್ಯಾತಿಯ ರಿಯಾನ್ ಪರಾಗ್ ಕೂಡ ತಂಡದ ಬ್ಯಾಟಿಂಗ್ ಬಲ ಹೆಚ್ಚಿಸಿದ್ದಾರೆ. ಇವರೊಂದಿಗೆ ಈಗ ಶಿವಂ ದುಬೆ ಸೇರಿಕೊಂಡಿದ್ದಾರೆ.

ಜೈದೇವ್ ಉನದ್ಕತ್ ಸಾರಥ್ಯದ ಬೌಲಿಂಗ್ ಪಡೆಯಲ್ಲಿ ಕನ್ನಡಿಗ ಶ್ರೇಯಸ್ ಗೋಪಾಲ್, ಆ್ಯಂಡ್ರ್ಯೂ ಟೈ ಮತ್ತು ಕ್ರಿಸ್ ಮೊರಿಸ್ ಎದುರಾಳಿ ತಂಡಕ್ಕೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಆರೋಗ್ಯ ವಿಮೆ ಕ್ಲೇಮ್ ತಿರಸ್ಕೃತ ಆದರೆ ಮಾಡುವುದೇನು?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಆರೋಗ್ಯ ವಿಮೆ ಮಾಡಿಸಿದ ಮೇಲೆ ಮುಂದೇನು? ನೀವು ಪ್ರೀಮಿಯಂ ಪಾವತಿಸುತ್ತೀರಿ, ಪಾಲಿಸಿಯನ್ನು ನವೀಕರಿಸುತ್ತೀರಿ, ಅಗತ್ಯವೆನಿಸಿದಾಗ ವಿಮಾ ಮೊತ್ತವನ್ನು ಹೆಚ್ಚಿಸಿಕೊಳ್ಳುತ್ತೀರಿ. ಆದರೆ, ನಿಯಮಾನುಸಾರವಾಗಿ ಇಷ್ಟೆಲ್ಲ ಮಾಡಿದ ಮೇಲೆಯೂ ವಿಮೆ ಕ್ಲೇಮ್ ತಿರಸ್ಕೃತವಾದರೆ ಏನು ಮಾಡಬೇಕು?!

'ಅಯ್ಯೋ ಈ ಕರ್ಮಕ್ಕೆ ಹೆಲ್ತ್ ಇನ್ಶೂರೆನ್ಸ್ ಬೇಕಿತ್ತಾ' ಅಂತ ನೀವು ಕೇಳಬಹುದು. ಆದರೆ ಇಂತಹ ಪ್ರಶ್ನೆಗಳನ್ನು ಯಾರಲ್ಲೋ ಕೇಳುವ ಮೊದಲು ನಿಮ್ಮನ್ನು ನೀವು ಕೇಳಿಕೊಳ್ಳಬೇಕು. ನೀವು ನ್ಯಾಯಯುತ ಮಾರ್ಗದಲ್ಲಿ ಕ್ಲೇಮ್ ಸೆಟಲ್ಮೆಂಟ್ ಮಾಡಿಸಲು ಎಲ್ಲ ಪ್ರಯತ್ನ ನಡೆಸಬೇಕು. ಹೀಗೆ ಮಾಡಬೇಕು ಅಂದರೆ ನೀವು ವಿಮೆ ಖರೀದಿಸುವ ಮುನ್ನ ದಾಖಲೆಗಳನ್ನು ಸರಿಯಾಗಿ ಓದಿರಬೇಕು. ಯಾವ ಚಿಕಿತ್ಸೆಗೆ ವಿಮೆ ಸಿಗುವುದಿಲ್ಲ, ಯಾವ ಅನಾರೋಗ್ಯಕ್ಕೆ ಚಿಕಿತ್ಸೆ ಸಿಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಕ್ಲೇಮ್ ತಿರಸ್ಕೃತ ಆಗಬಹುದು.

ಕ್ಲೇಮ್ ನಿರಾಕರಿಸಲು ಪ್ರಮುಖ ಕಾರಣಗಳು: ನೀವು ಪಡೆದಿರುವ ನಿರ್ದಿಷ್ಟ ಚಿಕಿತ್ಸೆಗೆ ಪಾಲಿಸಿ ದಾಖಲೆಯ ಪ್ರಕಾರ ವಿಮೆ ಇಲ್ಲದೆ ಇರುವಾಗ, ಕ್ಲೇಮ್ ಅರ್ಜಿಯನ್ನು ಅಸಮರ್ಪಕವಾಗಿ ಭರ್ತಿ ಮಾಡಿದ್ದಾಗ, ಅಸಮರ್ಪಕ ದಾಖಲೆಗಳನ್ನು ಸಲ್ಲಿಸಿದ್ದಾಗ, ನಿಗದಿತ ಕಾಲಮಿತಿಯಲ್ಲಿ ಕ್ಲೇಮ್ ಅರ್ಜಿ ಸಲ್ಲಿಸದಿದ್ದಾಗ, ಹಾಗೂ ಅನಗತ್ಯವಾಗಿ ವೈದ್ಯಕೀಯ ವೆಚ್ಚ ಮಾಡಿದಾಗ ವಿಮಾ ಕ್ಲೇಮ್ ತಿರಸ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ.

ತಿರಸ್ಕೃತ ಆಗುವುದನ್ನು ತಡೆಯುವುದು ಹೇಗೆ?: ನೀವು ವಿಮಾ ಕಂಪನಿಗೆ ಅಥವಾ ಥರ್ಡ್ ಪಾರ್ಟಿ ಅಡ್ಮಿನಿಸ್ಟ್ರೇಟರ್‌ಗೆ (ಟಿಪಿಎ) ನೀಡುವ ಎಲ್ಲ ದಾಖಲೆಗಳ ಒಂದು ಪ್ರತಿಯನ್ನು ನಿಮ್ಮ ಬಳಿ ಇಟ್ಟುಕೊಳ್ಳಿ. ವಿಮೆ ಮಾಡಿಸುವಾಗ ಪ್ರಪೋಸಲ್ ಫಾರಂ, ಕಂಪನಿಯ ಒರಿಜಿನಲ್ ಬ್ರೋಷರ್, ಪರಿಗಣಿಸದ ಆರೋಗ್ಯ ಸಮಸ್ಯೆಗಳ ಪಟ್ಟಿ, ವೇಯ್ಟಿಂಗ್ ಪೀರಿಯಡ್ ಮುಂತಾದ ವಿಚಾರಗಳನ್ನು ಓದಿ ಸಮರ್ಪಕ ಮಾಹಿತಿ ಪಡೆದುಕೊಳ್ಳಿ. ನಿಮ್ಮ ಪಾಲಿಸಿಯಲ್ಲಿ ನಮೂದಿಸಿರುವಂತೆ ನಿಗದಿತ ಸಮಯದಲ್ಲಿ ಕ್ಲೇಮ್ ಅರ್ಜಿ ಸಲ್ಲಿಸಿ. ನಿಮ್ಮ ಎಲ್ಲ ವೈದ್ಯಕೀಯ ದಾಖಲೆಗಳು ಮತ್ತು ಆಸ್ಪತ್ರೆಗೆ ದಾಖಲಾಗಿದ್ದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಟಿಪಿಎಗೆ ನೀಡಿ. ಕ್ಲೇಮ್ ಅರ್ಜಿಯನ್ನು ಎರಡೆರಡು ಬಾರಿ ಪರಿಶೀಲಿಸಿ. ಹೆಚ್ಚುವರಿಯಾಗಿ ಮತ್ತೊಂದು ಖಾಲಿ ಕ್ಲೇಮ್ ಅರ್ಜಿಯನ್ನು ನಿಮ್ಮ ಬಳಿ ಇಟ್ಟುಕೊಳ್ಳಿ. ಕೆಲ ತಿದ್ದುಪಡಿಗಳು ಅಗತ್ಯವಿದ್ದಲ್ಲಿ ನೀವು ಕೂಡಲೇ ಅದನ್ನು ಮಾಡಲು ಹೆಚ್ಚುವರಿ ಅರ್ಜಿ ನೆರವಾಗುತ್ತದೆ.

ಟಿಪಿಎಗೆ ಸಲ್ಲಿಸಲು ಆಸ್ಪತ್ರೆ ಬಿಲ್, ವೈದ್ಯರು ನೀಡಿದ ಔಷಧಿ ಚೀಟಿಗಳು ಹಾಗೂ ಇತರ ಪೂರಕ ದಾಖಲೆಗಳನ್ನು ಸಂಗ್ರಹಿಸಿಕೊಳ್ಳಿ.

ಮುಂದೇನು ಮಾಡಬೇಕು?: ನಿಮ್ಮ ವಿಮೆ ಕ್ಲೇಮ್ ನ್ಯಾಯಯುತವಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಲು ನೀವು ಸಫಲರಾದಲ್ಲಿ ವಿಮಾ ಕಂಪನಿಯು ನಿಮ್ಮ ಕ್ಲೇಮ್ ಅರ್ಜಿಯನ್ನು ಮರುಪರಿಶೀಲನೆಗೆ ಒಳಪಡಿಸಬಹುದು. ಹೀಗೆ ಮಾಡುವಾಗ ಕ್ಲೇಮ್ ನಿರಾಕರಣೆಗೆ ಪ್ರಮುಖ ಕಾರಣ ಏನು ಎನ್ನುವುದನ್ನು ತಿಳಿದುಕೊಂಡರೆ ನಿಮಗೆ ಸಹಾಯವಾಗುತ್ತದೆ. ನಿಮ್ಮ ಕ್ಲೇಮ್ ಅರ್ಜಿಯಲ್ಲಿ ಆಗಿರುವ ತಪ್ಪೇನು ಎನ್ನುವುದನ್ನು ತಿಳಿದ ಬಳಿಕ ಕೆಲ ಪ್ರಕ್ರಿಯೆಗಳನ್ನು ನೀವು ಮಾಡಬೇಕಾಗುತ್ತದೆ.

- ನಿಮ್ಮ ವಿಮಾ ಕ್ಲೇಮ್ ನ್ಯಾಯಸಮ್ಮತವಾಗಿದೆ ಎನ್ನುವುದನ್ನು ಸಾಕ್ಷೀಕರಿಸುವ ದಾಖಲೆಗಳೊಂದಿಗೆ ಒಂದು ಅಧಿಕೃತ ಪತ್ರವನ್ನು ವಿಮಾ ಕಂಪನಿಗೆ ಕಳುಹಿಸಿ.
- ಅನಾರೋಗ್ಯಕ್ಕೆ ಒಳಗಾಗಿದ್ದ ಮತ್ತು ಆಸ್ಪತ್ರೆಗೆ ದಾಖಲಾಗಿದ್ದ ಸಮಯದ ಎಲ್ಲ ಪೂರಕ ದಾಖಲೆಗಳನ್ನು ಕಂಪನಿಗೆ ಒದಗಿಸಿ. ಇದರ ಜತೆಗೆ ನಿಮ್ಮ ಅನಾರೋಗ್ಯಕ್ಕೆ ಸಂಬಂಧಿಸಿದಂತೆ ನೋಂದಾಯಿತ ವೈದ್ಯರೊಬ್ಬರ ವೈದ್ಯಕೀಯ ಅಭಿಪ್ರಾಯವನ್ನು ಪಡೆದು ವಿಮಾ ಕಂಪನಿಗೆ ರವಾನಿಸಿ.
- ನಿಮ್ಮ ಕ್ಲೇಮ್ ನ್ಯಾಯಯುತವಾಗಿದೆ ಎನ್ನುವುದನ್ನು ನಿರೂಪಿಸಲು ಹಲವು ಬಾರಿ ಮೇಲ್ಮನವಿ ಸಲ್ಲಿಸಬಹುದು.
- ನಿಮ್ಮ ಪತ್ರಕ್ಕೆ ವಿಮಾ ಕಂಪನಿಯು 30 ದಿನಗಳ ಒಳಗಾಗಿ ಲಿಖಿತ ಉತ್ತರ ನೀಡಬೇಕಾಗುತ್ತದೆ. ಒಂದೊಮ್ಮೆ ವಿಮಾ ಕಂಪನಿ ಉತ್ತರಿಸದಿದ್ದಲ್ಲಿ ನೀವು ಇನ್ಶೂರೆನ್ಸ್ ಒಂಬುಡ್ಸ್‌ಮನ್ ಕಚೇರಿಗೆ ತೆರಳಿ ಕಂಪನಿಯ ವಿರುದ್ಧ ದೂರು ದಾಖಲಿಸಬಹುದು.
- ಇನ್ಶೂರೆನ್ಸ್ ಒಂಬುಡ್ಸ್‌ಮನ್ ಕಚೇರಿಯಿಂದ ನಿಮಗೆ ನೆರವು ಸಿಗದಿದ್ದರೆ ಗ್ರಾಹಕರ ನ್ಯಾಯಾಲಯದ ಮೊರೆ ಹೋಗಬಹುದು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂ ನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಹೆಚ್ಚಿದ ಕೋವಿಡ್, ಷೇರುಪೇಟೆ ಅಲ್ಪ ಕುಸಿತ

ಏಪ್ರಿಲ್ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಪ್ರಮಾಣದಲ್ಲಿ ಕುಸಿತ ದಾಖಲಿಸಿವೆ. 49,591 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇಕಡ 0.87ರಷ್ಟು ತಗ್ಗಿದೆ. 14,834 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.21ರಷ್ಟು ಇಳಿಕೆಯಾಗಿದೆ. ಬಿಎಸ್ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.2ರಷ್ಟು ಗಳಿಕೆ ಕಂಡಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.5ರಷ್ಟು ಏರಿಕೆ ದಾಖಲಿಸಿದೆ.

ದೇಶೀಯವಾಗಿ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳವಾದರೂ ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಸಕಾರಾತ್ಮಕತೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಉತ್ತಮ ಲಾಭದ ನಿರೀಕ್ಷೆ, ಆರ್‌ಬಿಐ ರೆಪೊ ದರದಲ್ಲಿ ಬದಲಾವಣೆ ಮಾಡದಿರುವುದು ಸೇರಿದಂತೆ ಕೆಲವು ಅಂಶಗಳು ಮಾರುಕಟ್ಟೆಯಲ್ಲಿ ಏರಿಳಿತದ ನಡುವೆಯೂ ಒಂದಿಷ್ಟು ಸ್ಥಿರತೆ ಕಾಯ್ದುಕೊಳ್ಳಲು ಸಹಕಾರ ನೀಡಿವೆ.

ಇನ್ನು ವಲಯವಾರು ಪ್ರಗತಿಯ ವಿಚಾರಕ್ಕೆ ಬಂದರೆ ನಿಫ್ಟಿ ಲೋಹ ಸೂಚ್ಯಂಕ ಶೇ 6.6ರಷ್ಟು, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 5.3ರಷ್ಟು ಮತ್ತು ಫಾರ್ಮಾ ಸೂಚ್ಯಂಕ ಶೇ 5ರಷ್ಟು ಹೆಚ್ಚಳ ಕಂಡಿವೆ. ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 4ರಷ್ಟು ಕುಸಿತ ಕಂಡಿದೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಶೇ 22ರಷ್ಟು, ಅದಾನಿ ಪೋರ್ಟ್ಸ್ ಶೇ 12ರಷ್ಟು, ವಿಪ್ರೊ ಶೇ 8ರಷ್ಟು, ಸಿಪ್ಲಾ ಶೇ 8ರಷ್ಟು, ಟೆಕ್ ಮಹೀಂದ್ರ ಶೇ 6ರಷ್ಟು ಗಳಿಸಿವೆ. ಬಜಾಜ್ ಫೈನಾನ್ಸ್ ಶೇ 7.5ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 7ರಷ್ಟು, ಎಕ್ಸಿಸ್ ಬ್ಯಾಂಕ್ ಶೇ 6.5ರಷ್ಟು, ಎಸ್‌ಬಿಐ ಶೇ 5ರಷ್ಟು, ಐಸಿಐಸಿಐ ಬ್ಯಾಂಕ್ ಶೇ 4.5ರಷ್ಟು ಕುಸಿದಿವೆ.

ಮುನ್ನೋಟ: ಸದ್ಯದ ಸ್ಥಿತಿಯಲ್ಲಿ ಹೂಡಿಕೆದಾರರು ಗೊಂದಲದಲ್ಲಿದ್ದಾರೆ ಎನ್ನಬಹುದು. ಅಭಿವೃದ್ಧಿ ಹೊಂದಿರುವ ಪ್ರಬಲ ದೇಶಗಳಲ್ಲಿ ಕೋವಿಡ್ ಲಸಿಕೆ ಅಭಿಯಾನ ಚುರುಕಾಗಿ ನಡೆಯುತ್ತಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೋವಿಡ್ ಲಸಿಕೆ ನೀಡುವ ಪ್ರಕ್ರಿಯೆ ನಿಧಾನಗತಿಯಲ್ಲಿದೆ. ಈ ಬೆಳವಣಿಗೆಯು, ಅಭಿವೃದ್ಧಿಶೀಲ ರಾಷ್ಟ್ರಗಳ ಮಾರುಕಟ್ಟೆಗಳಿಂದ ಅಭಿವೃದ್ಧಿ ಹೊಂದಿದ ಮಾರುಕಟ್ಟೆಗಳತ್ತ ಹೂಡಿಕೆದಾರರು ಚಿತ್ತಹರಿಸುವಂತೆ ಮಾಡುತ್ತದೆಯೇ ಎನ್ನುವ ಪ್ರಶ್ನೆ ಹುಟ್ಟುಹಾಕಿದೆ.

ರೂಪಾಯಿ ಮೌಲ್ಯ ಉತ್ತಮಗೊಂಡಾಗಲೆಲ್ಲ ಷೇರುಪೇಟೆ ಸೂಚ್ಯಂಕ ನಿಫ್ಟಿ ಏರಿಕೆ ಹಾದಿಯಲ್ಲಿ ಸಾಗಿದೆ, ರೂಪಾಯಿ ಮೌಲ್ಯ ಕುಸಿಯುತ್ತ ಸಾಗಿದರೆ ನಿಫ್ಟಿ ಹೇಗೆ ವರ್ತಿಸಲಿದೆ ಎಂಬ ಪ್ರಶ್ನೆ ಹೂಡಿಕೆದಾರರನ್ನು ಕಾಡುತ್ತಿದೆ. ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಐ.ಟಿ, ಲೋಹ ಮತ್ತು ಫಾರ್ಮಾ ವಲಯಗಳ ಬಗ್ಗೆ ಒಲವು ಹೆಚ್ಚಿದೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶ ಬಹುತೇಕ ಸಕಾರಾತ್ಮಕವಾಗಿರಲಿದೆ ಎಂಬ ನಿರೀಕ್ಷೆಯಿದೆ. ಈ ವಾರ ಟಿಸಿಎಸ್, ಇನ್ಫೊಸಿಸ್, ವಿಪ್ರೊ, ಎಚ್‌ಡಿಎಫ್‌ಸಿ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಸಿಎಂಐಇ ಅಧ್ಯಯನ ವರದಿ

ಲಾಕ್‌ಡೌನ್ ಪರಿಣಾಮ ಕೌಟುಂಬಿಕ ಆದಾಯ ಕುಸಿತ

• ವಿಜಯ್ ಜೋಷಿ

ಬೆಂಗಳೂರು: ಕೋವಿಡ್–19 ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೊಳಿಸಿದ ಲಾಕ್‌ಡೌನ್ ಪರಿಣಾಮವಾಗಿ ದೇಶದ ಕೌಟುಂಬಿಕ ಆದಾಯದಲ್ಲಿ ಕುಸಿತ ಕಂಡುಬಂದಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆ ಹೇಳಿದೆ.

ದೇಶದಲ್ಲಿ ಜಾರಿಗೆ ತಂದ ಲಾಕ್‌ಡೌನ್‌ನಿಂದ ಕುಟುಂಬಗಳ ಮಟ್ಟದಲ್ಲಿ ಆದ ನಷ್ಟ ಏನು ಎಂಬುದನ್ನು ಅಂದಾಜು ಮಾಡುವ ಪ್ರಯತ್ನ ನಡೆಸಿದ ಸಂಸ್ಥೆಯು ಅದಕ್ಕೆ ಸಂಬಂಧಿಸಿದ ವರದಿಯನ್ನು ಈಚೆಗೆ ಪ್ರಕಟಿಸಿದೆ. 'ಲಾಕ್‌ಡೌನ್ ಕಾರಣದಿಂದಾಗಿ ಕುಟುಂಬಗಳ ಸರಾಸರಿ ಆದಾಯವು ಕಳೆದ ವರ್ಷದ ಮಾರ್ಚ್‌ನಲ್ಲಿ ಶೇಕಡ 9.2ರಷ್ಟು, ಏಪ್ರಿಲ್‌ನಲ್ಲಿ ಶೇ 27.9ರಷ್ಟು ಕುಸಿಯಿತು' ಎಂದು ಅದು ಅಂದಾಜು ಮಾಡಿದೆ.

2020ರ ಅಕ್ಟೋಬರ್ ತಿಂಗಳವರೆಗೂ ಕೌಟುಂಬಿಕ ಆದಾಯವು ಲಾಕ್‌ಡೌನ್ ಪೂರ್ವದ ಸ್ಥಿತಿಗೆ ಮರಳಿಲ್ಲ. ಆದಾಯಕ್ಕೆ ಸಂಬಂಧಿಸಿದ ಅಕ್ಟೋಬರ್ ನಂತರದ ಮಾಹಿತಿ ಲಭ್ಯವಿಲ್ಲ ಎಂದು ಸಿಎಂಐಇ ಹೇಳಿದೆ. 2020ರ ಅಕ್ಟೋಬರ್‌ನಲ್ಲಿನ ಸರಾಸರಿ ಕೌಟುಂಬಿಕ ಆದಾಯವು ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿದ್ದ ಆದಾಯಕ್ಕೆ ಹೋಲಿಸಿದರೆ ಶೇ 12ರಷ್ಟು ಕಡಿಮೆ ಇತ್ತು.

2020ರ ಫೆಬ್ರುವರಿಯಲ್ಲಿ ಇದ್ದ ಉದ್ಯೋಗ ಸಂಖ್ಯೆಗೆ ಹೋಲಿಸಿದರೆ ಈ ವರ್ಷದ ಫೆಬ್ರುವರಿಯಲ್ಲಿನ ಉದ್ಯೋಗದ ಸಂಖ್ಯೆಯು 70 ಲಕ್ಷದಷ್ಟು ಕಡಿಮೆ ಇದೆ. 2020ರ ಫೆಬ್ರುವರಿಯಲ್ಲಿ 40.6 ಕೋಟಿ ಉದ್ಯೋಗಗಳು ಇದ್ದವು. ಆದರೆ, ಈ ವರ್ಷದ ಫೆಬ್ರುವರಿಯಲ್ಲಿ ಉದ್ಯೋಗಗಳ ಸಂಖ್ಯೆಯು 39.9 ಕೋಟಿಯಷ್ಟು ಇದೆ ಎಂದು ಸಿಎಂಐಇ ಹೇಳಿದೆ.

'ಲಾಕ್‌ಡೌನ್ ಕಾರಣದಿಂದಾಗಿ ಇದುವರೆಗೆ ತೆತ್ತಿರುವ ಬೆಲೆಯೆಂದರೆ ಒಟ್ಟು 1.1 ಕೋಟಿ ಉದ್ಯೋಗಗಳ ನಷ್ಟ. ವ್ಯಾಪಾರದಲ್ಲಿ ತೊಡಗಿದ್ದವರು, ವೇತನ ಪಡೆಯುತ್ತಿದ್ದವರು ಮತ್ತು ದಿನಗೂಲಿ ನೌಕರರ ವಲಯದಲ್ಲಿ ಇಷ್ಟು ಉದ್ಯೋಗ ನಷ್ಟ ಆಗಿದೆ' ಎಂದು ಸಿಎಂಐಇ ಹೇಳಿದೆ. ಲಸಿಕೆ ಲಭ್ಯವಾಗಿರುವ ಕಾರಣ, ಕೋವಿಡ್–19 ಹರಡುವುದನ್ನು ತಡೆಯಲು ಲಾಕ್‌ಡೌನ್ ತರಬೇಕಾಗಿಲ್ಲ ಎಂದು ಸಂಸ್ಥೆ ಪ್ರತಿಪಾದಿಸಿದೆ.

ಅಂಕಿ-ಅಂಶಗಳು

30 ಲಕ್ಷ ವ್ಯಾಪಾರಿ ವರ್ಗದಲ್ಲಿನ ಉದ್ಯೋಗ ನಷ್ಟ

38 ಲಕ್ಷ ವೇತನ ಪಡೆಯುತ್ತಿದ್ದ ವರ್ಗದಲ್ಲಿನ ಉದ್ಯೋಗ ನಷ್ಟ

42 ಲಕ್ಷ ದಿನಗೂಲಿ ನೌಕರ ವರ್ಗದಲ್ಲಿನ ಉದ್ಯೋಗ ನಷ್ಟ

(2019–20ರ ಸರಾಸರಿ ಉದ್ಯೋಗ ಸಂಖ್ಯೆಗೆ ಹೋಲಿಸಿದರೆ 2021ರ ಫೆಬ್ರುವರಿಯಲ್ಲಿ ಆಗಿರುವ ಉದ್ಯೋಗ ನಷ್ಟ ಇದು)

ಉದ್ಯೋಗ ಗುಣಮಟ್ಟ ಇಳಿಕೆ

ಉದ್ಯೋಗಗಳ ಗುಣಮಟ್ಟ ಕೂಡ ಹಿಂದಿನ ವರ್ಷ ಇದ್ದ ಮಟ್ಟದಲ್ಲಿ ಈಗ ಇಲ್ಲ ಎಂದು ಸಂಸ್ಥೆಯು ಅಭಿಪ್ರಾಯ ವ್ಯಕ್ತಪಡಿಸಿದೆ. '2021ರಲ್ಲಿನ ಉದ್ಯೋಗವು 2020ರಲ್ಲಿನ ಉದ್ಯೋಗದ ಗುಣಮಟ್ಟಕ್ಕೆ ತಕ್ಕಂತೆ ಇಲ್ಲ. ಈಗಿನ ಉದ್ಯೋಗದಿಂದ ಸಿಗುವ ಪ್ರತಿಫಲವು ಕಡಿಮೆ ಇದೆ' ಎಂದು ಸಿಎಂಐಇ ಹೇಳಿದೆ.

ಉದ್ಯೋಗಗಳ ಸಂಖ್ಯೆಯಲ್ಲಿನ ಪುನಶ್ಚೇತನವು ಸ್ಥಗಿತಗೊಂಡಿರುವಂತೆ ಕಾಣಿಸುತ್ತಿದೆ ಎಂದೂ ಅದು ಹೇಳಿದೆ.

> ಲಾಕ್‌ಡೌನ್ ಬೇಡವೇ ಬೇಡ. ಮೊದಲ ಬಾರಿಯ ಲಾಕ್‌ಡೌನ್‌ಗೆ ಒಂದು ಸಮರ್ಥನೆ ಇತ್ತು. ಈಗ ಬೇಕಾಗಿರುವುದು ಸ್ವಯಂಶಿಸ್ತು. ಇದನ್ನು ರಾಜಕಾರಣಿಗಳು, ನಾಯಕರು ಪಾಲಿಸಿದರೆ ಇತರರೂ ಪಾಲಿಸುತ್ತಾರೆ. ಮತ್ತೆ ಲಾಕ್‌ಡೌನ್ ಜಾರಿಗೊಳಿಸಿದರೆ ಎಂಎಸ್‌ಎಂಇ ಉದ್ಯಮ ವಲಯ ಸತ್ತುಹೋಗುತ್ತದೆ
>
> **- ಸಂಪತ್ ರಾಮನ್**, ಉದ್ಯಮಿ

> ಲಾಕ್‌ಡೌನ್ ಜಾರಿಗೊಳಿಸಿದರೆ ಕಾಯಿಲೆಯಿಂದ ಆಗುವುದಕ್ಕಿಂತ ಹೆಚ್ಚು ಗಂಭೀರ ಪರಿಣಾಮ ಉಂಟಾಗಬಹುದು. ಜೀವವನ್ನೂ ಕಾಪಾಡಬೇಕು, ಜೀವನೋಪಾಯವನ್ನೂ ಕಾಪಾಡಬೇಕು. ಇವೆರಡರಲ್ಲಿ ಯಾವುದೋ ಒಂದನ್ನು ಮಾತ್ರ ಕಾಪಾಡಲಾಗುತ್ತದೆ ಎನ್ನುವಂತಿಲ್ಲ
>
> **– ಕ್ಯಾಪ್ಟನ್ ಜಿ.ಆರ್. ಗೋಪಿನಾಥ್**, ಉದ್ಯಮಿ

‘ಭಾಗಶಃ ಲಾಕ್‌ಡೌನ್‌ನಿಂದ ಉದ್ಯಮಕ್ಕೆ ಅಡ್ಡಿ’

ನವದೆಹಲಿ (ಪಿಟಿಐ): ‘ಭಾಗಶಃ ಲಾಕ್‌ಡೌನ್ ಜಾರಿಗೊಳಿಸುವುದರಿಂದ ಕಾರ್ಮಿಕರ ಸಂಚಾರ ಮತ್ತು ಸರಕುಗಳ ಸಾಗಣೆಗೆ ಅಡ್ಡಿಯಾಗಿ, ಕೈಗಾರಿಕೆಗಳ ಉತ್ಪಾದನೆ ಮೇಲೆಯೂ ಪರಿಣಾಮ ಆಗುವ ಸಾಧ್ಯತೆ ಇದೆ’ ಎಂದು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಸಮೀಕ್ಷೆ ಹೇಳಿದೆ.

ಎರಡನೇ ಅಲೆಯ ಹರಡುವಿಕೆಯನ್ನು ತಡೆಗಟ್ಟಲು ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಮುನ್ನೆಚ್ಚರಿಕೆಗಳ ಜೊತೆಗೆ ಕೋವಿಡ್ ಕರ್ಫ್ಯೂ ಮತ್ತು ಕಿರು ಕಂಟೈನ್‌ಮೆಂಟ್ ಕ್ರಮಗಳು ಪರಿಣಾಮಕಾರಿ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಕಂಪನಿಗಳ ಸಿಇಒಗಳು ಹೇಳಿದ್ದಾರೆ.

ಭಾಗಶಃ ಲಾಕ್‌ಡೌನ್‌ನಿಂದ ಕಾರ್ಮಿಕರ ಓಡಾಟಕ್ಕೆ ಅಡ್ಡಿಯಾಗಲಿದ್ದು, ಉತ್ಪಾದನೆಯ ಮೇಲೆ ಹೊಡೆತ ಬೀಳಲಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಹೇಳಿದ್ದಾರೆ. ಸರಕು ಸಾಗಣೆಯ ಮೇಲೆಪರಿಣಾಮ ಉಂಟಾದಲ್ಲಿ ಶೇ 50ರವರೆಗೂ ಉತ್ಪಾದನಾ ನಷ್ಟ ಆಗಲಿದೆ ಎಂದು ಸಿಇಒಗಳ ಪೈಕಿ ಶೇ 56ರಷ್ಟು ಮಂದಿ ಆತಂಕ ವ್ಯಕ್ತಪಡಿಸಿದ್ದಾರೆ.

ಶೂನ್ಯ ಬ್ಯಾಲೆನ್ಸ್ ಖಾತೆ: ಐಐಟಿ–ಬಾಂಬೆ ಅಧ್ಯಯನ ವರದಿಯಲ್ಲಿ ಮಾಹಿತಿ

₹ 300 ಕೋಟಿ ಸೇವಾ ಶುಲ್ಕ ಸಂಗ್ರಹಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಶೂನ್ಯ ಬ್ಯಾಲೆನ್ಸ್ ಖಾತೆ ಅಥವಾ ಸಾಮಾನ್ಯ ಉಳಿತಾಯ ಬ್ಯಾಂಕ್ ಠೇವಣಿ ಖಾತೆಗಳನ್ನು (ಬಿಎಸ್‌ಬಿಡಿಎ) ಹೊಂದಿರುವ ಬಡ ವರ್ಗದ ಜನರು ಪಡೆಯುವ ಕೆಲವು ಸೇವೆಗಳ ಮೇಲೆ ಎಸ್‌ಬಿಐ ಒಳಗೊಂಡಂತೆ ಹಲವು ಬ್ಯಾಂಕ್‌ಗಳು ಹೆಚ್ಚುವರಿ ಶುಲ್ಕ ವಿಧಿಸುತ್ತಿವೆ ಎಂದು ಐಐಟಿ–ಬಾಂಬೆ ನಡೆಸಿರುವ ಅಧ್ಯಯನವು ಹೇಳಿದೆ.

ಎಸ್‌ಬಿಐನಲ್ಲಿ ಬಿಎಸ್‌ಬಿಡಿ ಖಾತೆ ಹೊಂದಿರುವವರು ಶುಲ್ಕರಹಿತವಾಗಿ ತಿಂಗಳಿಗೆ ನಾಲ್ಕು ಬಾರಿ ಮಾತ್ರವೇ ಡೆಬಿಟ್ ಕಾರ್ಡ್ ಬಳಸಬಹುದು. ನಂತರ ಪ್ರತಿ ಬಾರಿಗೆ ₹ 17.70 ಶುಲ್ಕ ವಿಧಿಸಲಾಗುತ್ತಿದೆ. ಈ ನಿರ್ಧಾರ ನ್ಯಾಯೋಚಿತ ಎಂದು ಪರಿಗಣಿಸಲು ಆಗವುದಿಲ್ಲ ಎಂದು ಅಧ್ಯಯನವು ಕಂಡುಕೊಂಡಿದೆ. 2015–20ರ ನಡುವಿನ ಅವಧಿಯಲ್ಲಿ ಎಸ್‌ಬಿಐ ಅಂದಾಜು 12 ಕೋಟಿ ಬಿಎಸ್‌ಬಿಡಿ ಖಾತೆಗಳಿಗೆ ಸೇವಾ ಶುಲ್ಕಗಳನ್ನು ವಿಧಿಸುವ ಮೂಲಕ ಒಟ್ಟಾರೆ ₹ 300 ಕೋಟಿ ಸಂಗ್ರಹಿಸಿದೆ ಎಂದು ತಿಳಿಸಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ 3.9 ಕೋಟಿ ಬಿಎಸ್‌ಬಿಡಿ ಖಾತೆಗಳಿಂದ ಸೇವಾ ಶುಲ್ಕದ ರೂಪದಲ್ಲಿ ₹ 9.9 ಕೋಟಿ ಸಂಗ್ರಹಿಸಿದೆ.

‘ಬಿಎಸ್‌ಬಿಡಿಎಗೆ ಸಂಬಂಧಿಸಿದಂತೆ ಕೆಲವು ಬ್ಯಾಂಕ್‌ಗಳು ಆರ್‌ಬಿಐನ ನಿಯಮಗಳನ್ನು ವ್ಯವಸ್ಥಿತವಾಗಿ ಉಲ್ಲಂಘಿಸಿವೆ. ಮುಖ್ಯವಾಗಿ ಅತಿ ಹೆಚ್ಚಿನ ಸಂಖ್ಯೆಯ ಬಿಎಸ್‌ಬಿಡಿ ಖಾತೆಗಳನ್ನು ಹೊಂದಿರುವ ಎಸ್‌ಬಿಐ ತಿಂಗಳಿಗೆ ನಾಲ್ಕಕ್ಕಿಂತ ಹೆಚ್ಚಿನ ಬಾರಿ ಡೆಬಿಟ್ ಕಾರ್ಡ್ ಬಳಸಿದರೆ ಪ್ರತಿ ಹೆಚ್ಚುವರಿ ಬಳಕೆಗೆ ₹ 17.70 ಶುಲ್ಕ ವಿಧಿಸುತ್ತಿದೆ (ಡಿಜಿಟಲ್ ವಹಿವಾಟಿಗು). ಇದರ ಮೂಲಕ 2018–19ರಲ್ಲಿ ₹ 72 ಕೋಟಿ ಸಂಗ್ರಹವಾಗಿದ್ದರೆ 2019–20ರಲ್ಲಿ ₹ 158 ಕೋಟಿ ಸಂಗ್ರಹವಾಗಿದೆ’ ಎಂದು ಐಐಟಿ–ಬಾಂಬೆ ಪ್ರೊಫೆಸರ್ ಆಶಿಶ್ ದಾಸ್ ನಡೆಸಿರುವ ಅಧ್ಯಯನವು ತಿಳಿಸಿದೆ.

ಇಂತಹ ಖಾತೆಗಳಿಗೆ ಶುಲ್ಕ ವಿಧಿಸುವ ಸಂಬಂಧ ಆರ್‌ಬಿಐ 2013ರ ಸೆಪ್ಟೆಂಬರ್‌ನಲ್ಲಿ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಕೆಲವು ಸೂಚನೆಗಳು ಇವೆ. ಅದರಂತೆ, ಖಾತೆ ಹೊಂದಿರುವವರು ಒಂದು ತಿಂಗಳಿನಲ್ಲಿ ನಾಲ್ಕಕ್ಕಿಂತ ಹೆಚ್ಚು ಬಾರಿ ಹಣ ಪಡೆಯಲು ಅವಕಾಶ ನೀಡಲಾಗಿದೆ. ಬ್ಯಾಂಕ್‌ಗಳು ಅದಕ್ಕೆ ಶುಲ್ಕ ವಿಧಿಸುವುದಿಲ್ಲ. ಒಂದೆಡೆ ದೇಶದಲ್ಲಿ ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲಾಗುತ್ತಿದ್ದರೆ ಇತ್ತ ಎಸ್‌ಬಿಐ ಗರಿಷ್ಠ ಶುಲ್ಕ ವಿಧಿಸುತ್ತಿದೆ ಎಂದು ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹481

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹255-398

ದ್ವಿತಳಿ (ಬಿ.ವಿ) ₹315-455

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕುಸ್ತಿ: ಸಂದೀಪ್, ಸುಮಿತ್, ಕಡಿಯಾನ್‌ಗೆ ನಿರಾಸೆ

ಅಲ್ಮಾಟಿ, ಕಜಕಸ್ತಾನ (ಪಿಟಿಐ): ನೀರಸ ಪ್ರದರ್ಶನ ತೋರಿದ ರಾಷ್ಟ್ರೀಯ ಚಾಂಪಿಯನ್ ಸಂದೀಪ್ ಸಿಂಗ್ ಮನ್ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಳ್ಳಲು ವಿಫಲರಾದರು. ಸತ್ಯವ್ರತ ಕಡಿಯಾನ್ ಮತ್ತು ಸುಮಿತ್ ಮಲಿಕ್ ಕೂಡ ನಿರಾಸೆಗೆ ಒಳಗಾದರು.

ಇಲ್ಲಿ ನಡೆದ ಏಷ್ಯನ್ ಅರ್ಹತಾ ಟೂರ್ನಿಯಲ್ಲಿ ಭಾನುವಾರ 74 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸಂದೀಪ್ ಸಿಂಗ್ ಸೆಮಿಫೈನಲ್‌ನಲ್ಲಿ ಸೋತರು. 97 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಕಡಿಯಾನ್ ಮತ್ತು 125 ಕೆಜಿ ವಿಭಾಗದಲ್ಲಿ ಕಣಕ್ಕೆ ಇಳಿದ ಸುಮಿತ್ ಮಲಿಕ್ ಕೂಡ ಕೊನೆಯ ದಿನವಾದ ಭಾನುವಾರ ಸೋಲನುಭವಿಸಿದರು. ಇವರೆಲ್ಲರಿಗೂ ಬಲ್ಗೇರಿಯಾದ ಸೋಫಿಯಾದಲ್ಲಿ ಮೇ ಆರರಿಂದ ಒಂಬತ್ತರ ವರೆಗೆ ನಡೆಯಲಿರುವ ವಿಶ್ವ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಇನ್ನೊಂದು ಅವಕಾಶ ಉಳಿದುಕೊಂಡಿದೆ.

ಉತ್ತಮ ಆರಂಭ ಕಂಡ ಸಂದೀಪ್: ಅರ್ಹತಾ ಸುತ್ತಿನಲ್ಲಿ ಕತಾರ್‌ನ ಇಬ್ರಾಹಿಂ ಎ ಇಬ್ರಾಹಿಂ ವಿರುದ್ಧ ಜಯ ಗಳಿಸಿ ಸಂದೀಪ್ ಭರವಸೆ ಮೂಡಿಸಿದ್ದರು. ನಂತರ ತಜಿಕಿಸ್ತಾನದ ಗುಲೋಮ್‌ಜೋನ್ ಶರಿಪೊವ್ ಎದುರು 6–2ರ ಜಯ ಗಳಿಸಿದರು. ಆದರೆ ನಾಲ್ಕರ ಘಟ್ಟದ ಬೌಟ್‌ನಲ್ಲಿ ಇರಾನ್‌ನ ಯೋನಸ್ ಅಲಿ ಅಕ್ಬರ್‌ಗೆ ಮಣಿದರು. ಸತ್ಯವ್ರತ ಕಡಿಯಾನ್ ಮೊದಲು ಕೊರಿಯಾದ ಮಿನ್‌ವಾನ್ ಸೀಯೊ ಅವರನ್ನು 6–2ರಲ್ಲಿ ಮಣಿಸಿದರು. ಆದರೆ ಸೆಮಿಫೈನಲ್‌ನಲ್ಲಿ ಇರಾನ್‌ನ ಮೊಹಮ್ಮದೊಸೇನ್ ಅಸ್ಕಾರಿಗೆ ಮಣಿದರು. ಸುಮಿತ್ 7–0 ಅಂತರದಲ್ಲಿ ಮಕ್ಸೂದ್ ವೆಯ್‌ಸಲೊವ್ ವಿರುದ್ಧ ಗೆದ್ದು ಸೆಮಿಫೈನಲ್‌ನಲ್ಲಿ 0–2ರಲ್ಲಿ ಸ್ಥಳೀಯ ಪೈಲ್ವಾನ್ ಯೂಸುಫ್ ಬಟಿರ್ಮುರ್ಜೆವ್‌ಗೆ ಮಣಿದರು.

ಕಬಡ್ಡಿ ತಂಡಕ್ಕೆ ಸಚಿನ್ ನಾಯಕ

ಸಚಿನ್ ವಿಠಲ

ಬೆಂಗಳೂರು: ಸಚಿನ್ ವಿಠಲ, ಇದೇ 13ರಿಂದ ಉತ್ತರಪ್ರದೇಶದ ಅಯೋಧ್ಯೆಯಲ್ಲಿ ನಡೆಯ ಲಿರುವ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ರಾಜ್ಯ ತಂಡದ ನಾಯಕತ್ವ ವಹಿಸಲಿದ್ದಾರೆ. ತಂಡವನ್ನು ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆ ಭಾನುವಾರ ಪ್ರಕಟಿಸಿದೆ.

ತಂಡ: ಸಚಿನ್ ವಿಠಲ (ನಾಯಕ), ಪವನ್ ಟಿ.ಆರ್, ವರುಣ್ ಶೆಟ್ಟಿ, ರತನ್ ಕೆ.ಎ, ಪ್ರತಾಪ್ ಎಸ್, ಭರತ್ ರಾಮ್, ಮನೋಜ್ ಗೌಡ, ಜಿ.ರತನ್, ಮನೀಷ್ ಡಿ.ಕೆ, ಹರೀಶ್ ಕುಮಾರ್ ವಿ, ವಿಶ್ವಾಸ್ ಎಸ್, ಸತೀಶ ಎಸ್. **ಕೋಚ್:** ಸಿ.ಹೊನ್ನಪ್ಪಗೌಡ, **ಮ್ಯಾನೇಜರ್:** ಆರ್ಮುಗಂ ಎಂ.

ಪ್ರೊ ಹಾಕಿ ಲೀಗ್: ಹರ್ಮನ್‌ಪ್ರೀತ್, ದಿಲ್‌ಪ್ರೀತ್ ಸಿಂಗ್, ಶ್ರೀಜೇಶ್ ಮಿಂಚು

ಅರ್ಜೆಂಟೀನಾ ಮಣಿಸಿದ ಭಾರತ

ಬ್ಯೂನಸ್ ಐರಿಸ್ (ಪಿಟಿಐ): ರೋಚಕ ಅಂತ್ಯ ಕಂಡ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್ ಮೂಲಕ ಒಲಿಂಪಿಕ್ ಚಾಂಪಿಯನ್ ಅರ್ಜೆಂಟೀನಾವನ್ನು ಮಣಿಸಿದ ಭಾರತ ತಂಡ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನ ಮೊದಲ ಪಂದ್ಯದಲ್ಲಿ ಬೋನಸ್ ಪಾಯಿಂಟ್ ಗಳಿಸಿ ಸಂಭ್ರಮಿಸಿತು.

ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ನಿಗದಿತ ಅವಧಿಯಲ್ಲಿ ಆತಿಥೇಯರ ವಿರುದ್ಧ ಭಾರತ ಸೋಲಿನಿಂದ ಪಾರಾಗಿತ್ತು. 21ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ಗೋಲು ಗಳಿಸಿ ಮಿಂಚಿದರು. ಆದರೆ 28 ಮತ್ತು 30ನೇ ನಿಮಿ ಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ಮಾರ್ಟಿನ್ ಫೆರೇರೊ ಮೊದ ಲಾರ್ಧದ ಮುಕ್ತಾಯದ ವೇಳೆ ಅರ್ಜೆಂಟೀನಾಗೆ 2–1ರ ಮುನ್ನಡೆ ಗಳಿಸಿಕೊಟ್ಟರು.

60ನೇ ನಿಮಿಷದಲ್ಲಿ ಗೋಲು ಗಳಿಸಿ ಹರ್ಮನ್‌ಪ್ರೀತ್ ಸಿಂಗ್ ಭಾರತದ ಕೈ ಹಿಡಿದರು. ಹೀಗಾಗಿ ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ಸಾಗಿತು.

ಈ ಹಂತದಲ್ಲಿ ಅಮೋಘ ಗೋಲ್‌ಕೀಪಿಂಗ್ ಸಾಮರ್ಥ್ಯ ತೋರಿದ ಶ್ರೀಜೇಶ್ ಭಾರತಕ್ಕೆ ಗೆಲುವು ತಂದುಕೊಟ್ಟರು. ಟೂರ್ನಿಯ ನಿಯಮದ ಪ್ರಕಾರ ಶೂಟೌಟ್‌ನಲ್ಲಿ ಗೆಲ್ಲುವ ತಂಡಕ್ಕೆ ಬೋನಸ್ ಪಾಯಿಂಟ್ ಸಿಗುತ್ತದೆ.

ಅನುಭವಿ ಗೋಲ್‌ಕೀಪರ್ ಜುವಾನ್ ವಿವಾಲ್ಡಿ ಅವರನ್ನು ವಂಚಿಸಿ ದಿಲ್‌ಪ್ರೀತ್ ಸಿಂಗ್ ಭಾರತದ ಪರ ಗೋಲು ಗಳಿಸಿದರೆ ಲೂಕಾಸ್ ವಿಲಾ, ಮಾರ್ಟಿನ್ ಫೆರೇರೊ ಮತ್ತು ಇಗ್ನಾಷಿಯೊ ಒರ್ಟಿಸ್ ಅವರ ಪ್ರಯತ್ನಗಳನ್ನು ತಡೆದು ಶ್ರೀಜೇಶ್ ಮಿಂಚಿದರು.

ಈ ಜಯದೊಂದಿಗೆ ಭಾರತ ಏಳು ಪಂದ್ಯಗಳಲ್ಲಿ 12 ಪಾಯಿಂಟ್‌ಗಳೊಂದಿಗೆ ಪಾಯಿಂಟ್ ಪಟ್ಟಿಯ ಐದನೇ ಸ್ಥಾನಕ್ಕೇರಿತು.

11 ಪಂದ್ಯಗಳಲ್ಲಿ 11 ಪಾಯಿಂಟ್ ಗಳಿಸಿದ ಅರ್ಜೆಂಟೀನಾ ಆರನೇ ಸ್ಥಾನಕ್ಕೆ ಕುಸಿಯಿತು.

ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಪಂದ್ಯಶ್ರೇಷ್ಠ ಆಟಗಾರನಾಗಿ ಆಯ್ಕೆ ಮಾಡಲಾಯಿತು.

ಅರ್ಜೆಂಟೀನಾ ವಿರುದ್ಧ ಗೋಲು ಗಳಿಸಿ ಸಂಭ್ರಮಿಸಿದ ಭಾರತದ ಹರ್ಮನ್ ಪ್ರೀತ್ ಸಿಂಗ್ (ಬಲ). ದಿಲ್ ಪ್ರೀತ್ ಸಿಂಗ್ ಅವರೂ ಇದ್ದಾರೆ –ಟ್ವಿಟರ್ ಚಿತ್ರ

ಟೇಕ್ವಾಂಡೊ ಟ್ರಯಲ್ಸ್‌ಗೆ ಐಒಎ ಮೇಲ್ವಿಚಾರಣೆ

ನವದೆಹಲಿ (ಪಿಟಿಐ): ಏಷ್ಯನ್ ಒಲಿಂಪಿಕ್ ಅರ್ಹತಾ ಟೂರ್ನಿಗೆ ಸ್ಪರ್ಧಿಸಲಿರುವ ಭಾರತ ಟೇಕ್ವಾಂಡೊ ತಂಡದ ಆಯ್ಕೆ ಟ್ರಯಲ್ಸ್ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಆಶ್ರಯದಲ್ಲಿ ನಡೆಯಲಿದೆ.

ಟ್ರಯಲ್ಸ್ ಈ ಮೊದಲು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ನಡೆಸಬೇಕೆಂದು ನಿರ್ಧಾರವಾಗಿತ್ತು.

ಭಾರತ ಟೇಕ್ವಾಂಡೊ ಫೆಡರೇಷನ್, ರಾಷ್ಟ್ರೀಯ ಕ್ರೀಡಾ ಫೆಡರೇಷನ್ (ಎನ್‌ಎಸ್‌ಎಫ್) ಮಾನ್ಯತೆ ಪಡೆದಿಲ್ಲದ ಕಾರಣ ಸ್ವತಂತ್ರ ಮತ್ತು ಪಾರದರ್ಶಕ ಆಯ್ಕೆಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ಈ ವಾರದ ಆರಂಭದಲ್ಲಿ ಭಾರತದ ಕ್ರೀಡಾ ಸಚಿವಾಲಯ ಮತ್ತು ಕ್ರೀಡಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳ ನಡುವೆ ಸಭೆ ನಡೆದಿತ್ತು. ಸಭೆಯ ಬಳಿಕ ಏಷ್ಯನ್ ಒಲಿಂಪಿಕ್ ಅರ್ಹತಾ ಟೇಕ್ವಾಂಡೊ ಮತ್ತು ಪ್ಯಾರಾ ಟೇಕ್ವಾಂಡೊ ಟೂರ್ನಿಗಳ ಆಯ್ಕೆ ಟ್ರಯಲ್ಸ್ ಅನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ನಡೆಸುವುದು ಎಂದು ತೀರ್ಮಾನಿಸಲಾಗಿದೆ' ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಏಪ್ರಿಲ್ 15ರಿಂದ 17ರವರೆಗೆ ನಡೆಯಲಿರುವ ಟ್ರಯಲ್ಸ್‌ಗಳನ್ನು ಸಾಯ್ ನಡೆಸಬೇಕಿತ್ತು.

ಟ್ರಯಲ್ಸ್‌ಗೆ ಆರ್ಥಿಕ ಸಹಾಯ ಸೇರಿದಂತೆ ಎಲ್ಲ ಅಗತ್ಯ ನೆರವನ್ನು ಸಾಯ್ ಒದಗಿಸಲಿದೆ.

ಸಿಎಸ್‌ಕೆ: ಲುಂಗಿ ಗಿಡಿ, ಜೇಸನ್ ಅಲಭ್ಯ

ಮುಂಬೈ (ಪಿಟಿಐ): ಜೋಶ್ ಹ್ಯಾಜಲ್‌ವುಡ್ ಅವರ ಅನುಪಸ್ಥಿತಿ ಇಂಡಿಯನ್ ಪ್ರೀಮಿಯರ್ ಲೀಗ್‌ನ 14ನೇ ಆವೃತ್ತಿಯಲ್ಲಿ ತಂಡದ ಮೊದಲ ಪಂದ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿತ್ತು ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಕೋಚ್ ಸ್ಟೀಫನ್ ಫ್ಲೆಮಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ ರಾತ್ರಿ ನಡೆದ ಟೂರ್ನಿಯ ಎರಡನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಡೆಲ್ಲಿ ಕ್ಯಾಪಿಟಲ್ಸ್ ಏಳು ವಿಕೆಟ್‌ಗಳಿಂದ ಮಣಿಸಿತ್ತು. ಜೋಶ್ ಹ್ಯಾಜಲ್‌ವುಡ್, ಜೇಸನ್ ಬೆಹ್ರಂಡಾರ್ಫ್ ಮತ್ತು ಲುಂಗಿ ಗಿಡಿ ಅವರಿಲ್ಲದ ಕಾರಣ ವಿದೇಶಿ ವೇಗಿಗಳ ಅನುಭವ ತಂಡಕ್ಕೆ ಲಭಿಸದೇ ಹೋಯಿತು ಎಂದು ಹೇಳಿದ ಫ್ಲೆಮಿಂಗ್ ಅವರು ಜೇಸನ್ ಮತ್ತು ಲುಂಗಿ ಗಿಡಿ ಮುಂದಿನ ಪಂದ್ಯಕ್ಕೂ ಲಭ್ಯ ಇಲ್ಲ ಎಂದರು.


ಸ್ಟೀಫನ್ ಫ್ಲೆಮಿಂಗ್ –ಎಎಫ್‌ಪಿ ಚಿತ್ರ

ಹ್ಯಾಜಲ್‌ವುಡ್ ದಿಢೀರ್ ಆಗಿ ಐಪಿಎಲ್‌ನಿಂದ ಹಿಂದೆ ಸರಿದಿದ್ದರು. ಅವರ ಬದಲಿಗೆ ಜೇಸನ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲು ನಿರ್ಧರಿಸಲಾಗಿತ್ತು. ಆದರೆ ಅವರು ಇನ್ನೂ ಭಾರತಕ್ಕೆ ಬಂದು ತಲುಪಲಿಲ್ಲ. ಪಾಕಿಸ್ತಾನ ಎದುರಿನ ಏಕದಿನ ಸರಣಿ ಮುಗಿಸಿ ಬಂದಿರುವ ದಕ್ಷಿಣ ಆಫ್ರಿಕಾದ ಲುಂಗಿ ಗಿಡಿ ಕ್ವಾರಂಟೈನ್‌ನಲ್ಲಿದ್ದಾರೆ.

ನಿಧಾನ ಗತಿಯ ಬೌಲಿಂಗ್ ಧೋನಿಗೆ ₹12 ಲಕ್ಷ ದಂಡ

ಮುಂಬೈ (ಪಿಟಿಐ):ಡೆಲ್ಲಿ ಕ್ಯಾಪಿಟಲ್ಸ್ ಎದುರು ಶನಿವಾರ ನಡೆದ ಪಂದ್ಯದಲ್ಲಿ ನಿಧಾನಗತಿಯ ಬೌಲಿಂಗ್ ಸಂಘಟಿಸಿದ್ದಕ್ಕೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಏಳು ವಿಕೆಟ್‌ಗಳಿಂದ ರಿಷಭ್ ಪಂತ್ ನಾಯಕತ್ವದ ತಂಡಕ್ಕೆ ಮಣಿದಿತ್ತು. ನಿಗದಿತ ಅವಧಿಯಲ್ಲಿ ಬೌಲಿಂಗ್ ಮುಕ್ತಾಯಗೊಳಿಸದೇ ಇರುವುದಕ್ಕೆ ಐಪಿಎಲ್ ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗಿದೆ ಎಂದು ಟೂರ್ನಿಯ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ರಾಹುಲ್ ದ್ರಾವಿಡ್ ಗೆ ನಿಜಕ್ಕೂ ಕೋಪ ಬರುತ್ತಾ?

'ಗೋಡೆ' ಖ್ಯಾತಿಯ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ದೂರ ಸರಿದು ದಶಕ ಸಮೀಪಿಸುತ್ತಿದೆ. ಆದರೂ ಅವರ ತಾರಾ ವರ್ಚಸ್ಸು ಕುಂದಿಲ್ಲ. ಮಿಸ್ಟರ್ ಕೂಲ್ ದ್ರಾವಿಡ್ ಸಿಟ್ಟಾದರೂ ಸುದ್ದಿಯಾಗುತ್ತದೆ. ಹೌದು. ಅವರಿಗೆ ಕೋಪ ಬರಲ್ಲವೇ? ಹಾಗಿದ್ದರೆ ಅವತ್ತು ಕ್ಯಾಪ್ ಬೀಸಾಕಿದ್ದು ಏಕೆ? ಪಾಕ್ ಬೌಲರ್‌ಗೆ ತರಾಟೆಗೆ ತೆಗೆದುಕೊಂಡಿದ್ದು ಏಕೆ? ಇಲ್ಲಿ ನೋಡಿ..

QR ಕೋಡ್ ಸ್ಕ್ಯಾನ್ ಮಾಡಿ

ಬೌಲರ್‌ಗಳನ್ನು ದೂರಿದ ಧೋನಿ

ಮುಂಬೈ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ನಿರಾಸೆಯೊಂದಿಗೆ ಅಭಿಯಾನ ಆರಂಭಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸೋಲಿಗೆ ಬೌಲರ್‌ಗಳೇ ಕಾರಣ ಎಂದು ನಾಯಕ ಮಹೇಂದ್ರ ಸಿಂಗ್ ಧೋನಿ ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ ರಾತ್ರಿ ಪಂದ್ಯದ ನಂತರ ಮಾತನಾಡಿದ ಅವರು ಪರಿಸ್ಥಿತಿಗೆ ಹೊಂದಿಕೊಂಡು ದಾಳಿ ಸಂಘಟಿಸಲು ಬೌಲರ್‌ಗಳು ವಿಫಲರಾದರು. ಹೀಗಾಗಿ ಎದುರಾಳಿ ತಂಡದ ಬ್ಯಾಟ್ಸ್‌ಮನ್‌ಗಳು ಮೇಲುಗೈ ಸಾಧಿಸಿದರು. ಮುಂದಿನ ಪಂದ್ಯಗಳಲ್ಲಿ ತಂಡದ ಬೌಲಿಂಗ್ ಸುಧಾರಿಸಲಿದೆ' ಎಂದರು.

'ಬ್ಯಾಟ್ಸ್‌ಮನ್‌ಗಳು ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದ್ದರು. ಆದರೆ ಇನ್ನೂ 15ರಿಂದ 20 ಹೆಚ್ಚುವರಿ ರನ್ ಗಳಿಸಿದ್ದರೆ ಅನುಕೂಲ ಆಗುತ್ತಿತ್ತು. ಮಂಜಿನಿಂದ ಉಂಟಾಗುವ ಸಮಸ್ಯೆಯನ್ನು ನಿಭಾಯಿಸಲು ಬೌಲರ್‌ಗಳಿಗೆ ಸಾಧ್ಯವಾಗುತ್ತಿತ್ತು' ಎಂದು ಅವರು ನುಡಿದರು.

ಮಹೇಂದ್ರ ಸಿಂಗ್ ಧೋನಿ

ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮೊದಲ ಬಾರಿ ಮುನ್ನಡೆಸಿದ ರಿಷಭ್ ಪಂತ್ 'ಟಾಸ್‌ಗಾಗಿ ಮಹೇಂದ್ರ ಸಿಂಗ್ ಧೋನಿ ಅವರೊಂದಿಗೆ ಪಿಚ್ ಬಳಿಗೆ ಹೆಜ್ಜೆ ಹಾಕಿದ್ದು ವಿಶಿಷ್ಟ ಅನುಭವವಾಗಿತ್ತು' ಎಂದರು.

ಕೋವಿಡ್: ಎನ್‌ಐಎಸ್‌ಗೆ ಪ್ರವೇಶ ನಿಷೇಧ

ಪಟಿಯಾಲ (ಪಿಟಿಐ): ಕೋವಿಡ್–19ರ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕ್ರೀಡಾ ಸಂಸ್ಥೆಗೆ (ಎನ್‌ಐಎಸ್) ಹೊರಗಿನವರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಪಟಿಯಾಲ ಆರೋಗ್ಯ ಇಲಾಖೆ ಈ ನಿರ್ಧಾರ ತೆಗೆದುಕೊಂಡಿದೆ.